ಸೋಮವಾರ, ಆಗಸ್ಟ್ 23, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಕ್ಷಾ ಬಂಧನ

ರಕ್ಷಾ ಬಂಧನದ ಅಂಗವಾಗಿ ಉತ್ತರ ಪ್ರದೇಶದ ಆಗ್ರಾದಲ್ಲಿ ಮಹಿಳೆಯೊಬ್ಬರು ಭಾನುವಾರ ತನ್ನ ಸಹೋದರನಿಗೆ ರಾಖಿ ಕಟ್ಟಿದರು

ಸಂಬಂಧ ಎಂದರೇನೆಂದು ಅನ್ವೇಷಿಸಲು ಪ್ರೀತಿ ನಮಗೆ ದಾರಿ ತೋರಿಸಿದೆ.

ನಮ್ಮ ಹಾದಿಯಲ್ಲಿ ಬರುವ ಪ್ರತಿಯೊಂದು ಅಡಚಣೆಗಳೊಂದಿಗೆ, ನಾವು ಸಂಬಂಧದ ಹೊಸ ಅರ್ಥ ಅನ್ವೇಷಿಸುತ್ತೇವೆ. ಪರಸ್ಪರರಲ್ಲಿ ಬೆಂಬಲ ಮತ್ತು ದೃಢತೆಯನ್ನು ಮೊದಲು ಹುಡುಕುತ್ತೇವೆ. ಇದು ನಾವು ಹಂಚಿಕೊಳ್ಳುವ ಪ್ರೀತಿಯನ್ನು ಅಪರೂಪವಾಗಿಸಿದೆ.

ಅಪರೂಪದ ಪ್ರೀತಿಗೆ, ಲೋಹವೂ ಅಪರೂಪ. ಪ್ಲಾಟಿನಂ.

PLATINUM
DAYS OF LOVE

To find your nearest store, visit www.platinumdaysoflove.com
For authentic platinum jewellery and assured buyback, ask for your platinum purity assurance card.

Mark of pure platinum Pt950 | /PlatinumDaysOfLove | /platinumdaysoflove

Some PGI Authorised Retailers: Bangalore: Avenue Road: Davanam Jewellers 43438383 • Merlecha Diamonds 9845047251 • **Banashankari:** Tanishq 26691687 • **Bannerghatta:** Tanishq 45612222 • Malabar Gold & Diamonds 41489916 • **Basaveshwaranagar:** Mukesh Jewellers 23408685 • **Commercial Street:** C. Krishniah Chetty & Sons 25588731 • Davanam Jewellers 41418181 • Sri Krishna Diamonds 40301111 • **Dickenson Road:** AVR Swarna Mahal Jewellers 25540007 • Bhima Jewellers 25065075 • Jos Alukkas Jewellery 25552280 • Joyalukkas 25093916 • Kalyan Jewellers 25550533 • Malabar Gold & Diamonds 41283916 • ORRA 9341070999 • Sulthan Diamonds & Gold 25596916 • Tanishq 25550907 • **HBR Layout:** Bhima Jewellers 25447711 • **HSR Layout:** Neelkanth Jewellers 46963800 • **Jayanagar:** AVR Swarna Mahal Jewellers 26547007 • Bhima Jewellers 41301761 • C. Krishniah Chetty & Sons 66379822 • GRT Jewellers 22450777 • Jos Alukkas Jewellery 32942120 • Josco Jewellers 41666842 • Joyalukkas 26634448 • Kalyan Jewellers 26647733 • Malabar Gold & Diamonds 41526916 • ORRA 9341903803 • Prince Jewellery 42649999 • Reliance Jewels 41681808 • Sulthan Diamonds & Gold 26534916 • Tanishq 65606561 • Vummidi Bangaru Jewellers 46445000 • **Kammanahalli:** GRT Jewellers 25461515 • Joyalukkas 25039900 • Malabar Gold & Diamonds 25421916• Tanishq 43078900 • **Koramangala:** Bhima Jewellers 25537762 • Kalyan Jewellers 25636833 • Malabar Gold & Diamonds 25522916 • Reliance Jewels 41244551 • ORRA 9731604260 • Senco Gold & Diamonds 41141197 • Tanishq 45462222 • **MG Road:** Abaran 25328600 • Joyalukkas 25589916 • **Malleswaram:** Bhima Jewellers 49767711 • C. Krishniah Chetty Jewellers 41001869 • Davanam Jewellers 41416161 • GRT Jewellers 22921515 • Joyalukkas 23466916 • Kalyan Jewellers 23360533 • Malabar Gold & Diamonds 23467916 • Tanishq 23465402 • **Marthahalli:** Bhima Jewellers 28546611 • GRT Jewellers 25401515 • Joyalukkas 25073800 • Kalyan Jewellers 46837079 • Malabar Gold & Diamonds 48514916 • Tanishq 43007773 • **Phoenix Market City:** Bhima Jewellers 67266618 • C. Krishniah Chetty Jewellers 67266697 • Joyalukkas 49626678 • Kalyan Jewellers 49626533 • Malabar Gold & Diamonds 32325916 • ORRA 9686166916 • Senco Gold & Diamonds 67266340 • Tanishq 67266400 • **Rajaji Nagar:** Abaran 23598600 • Bhima Jewellers 23527712 • Jos Alukkas Jewellery 32956916 • Malabar Gold & Diamonds 49227916 • Sri Ganesh Diamonds and Jewellery 23488459, 23326359 • **Richmond Road:** Neelkanth Jewellers 22278846 • Nikhaar 22103266 • **Sadhasivanagar:** Sri Ganesh Diamonds and Jewellery 23362355 • **Whitefield:** Tanishq 25018171 • **Yelahanka:** Tanishq 68137426 • **Tumkur • B H Road:** Malabar Gold & Diamonds 2254916

ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಮಾರ್ಗಕ್ಕೆ ಶೀಘ್ರವೇ ಟೆಂಡರ್; ಭೂಸ್ವಾಧೀನ ಪ್ರಕ್ರಿಯೆ ಚುರುಕು

ಉಪನಗರ ರೈಲು ಯೋಜನೆಗೆ ವೇಗ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸಿಲಿಕಾನ್ ಸಿಟಿಯ ಹಲವು ವರ್ಷಗಳ ಕನಸಾಗಿರುವ ಉಪನಗರ ರೈಲು ಯೋಜನೆಗೆ ವೇಗ ದೊರೆಯುವ ಕಾಲ ಹತ್ತಿರವಾಗಿದೆ. ಸದ್ಯದಲ್ಲೇ ಕಾಮಗಾರಿ ಆರಂಭವಾಗುವ ಲಕ್ಷಣಗಳಿದ್ದು, ಟೆಂಡರ್ ಪ್ರಕ್ರಿಯೆ ಆರಂಭಿಸಲು ಕೆ–ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ) ಸಿದ್ಧತೆ ನಡೆಸುತ್ತಿದೆ.

ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಸಂಪರ್ಕ ಕೊಂಡಿಯಾಗಿರುವ ಉಪನಗರ ರೈಲು ಯೋಜನೆಯ ಕಾಮಗಾರಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿರುವ ಕೆ–ರೈಡ್, ಮೊದಲ ಹಂತದಲ್ಲಿ ಬೈಯಪ್ಪನಹಳ್ಳಿಯಿಂದ ಚಿಕ್ಕಬಾಣಾವರ ಮಾರ್ಗದ ಕಾಮಗಾರಿ ಆರಂಭಿಸಲು ತಯಾರಿ ನಡೆಸಿದೆ. ಸೆಪ್ಟೆಂಬರ್‌ನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆ ಇದೆ.

ಪ್ರಧಾನಿ ನರೇಂದ್ರ ಮೋದಿ ಮೂಲಕ ಭೂಮಿಪೂಜೆ ನಡೆಸಿ ಕಾಮಗಾರಿಗೆ ಚಾಲನೆ ನೀಡಲು ಕೆ–ರೈಡ್ ಸಜ್ಜಾಗುತ್ತಿದೆ. ಆ ಕಾಮಗಾರಿ ಆರಂಭವಾದ ಬಳಿಕ ಹೀಲಳಿಗೆ–ರಾಜಾನುಕುಂಟೆ ಮಾರ್ಗವನ್ನೂ ಜೊತೆಯಲ್ಲಿ ಕೈಗೆತ್ತಿಕೊಳ್ಳಲು ಚಿಂತನೆ ನಡೆಸಲಾಗಿದೆ. ಈ ಕಾಮಗಾರಿ ಅಕ್ಟೋಬರ್–ನವೆಂಬರ್‌ನಲ್ಲಿ ಆರಂಭಗೊಳ್ಳಲಿದೆ ಎಂದು ಕೆ–ರೈಡ್ ಮೂಲಗಳು ತಿಳಿಸಿವೆ.

ಮೊದಲ ಹಂತದಲ್ಲಿ ಕಾಮಗಾರಿ ಆರಂಭಿಸಲಿರುವ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್‌ನಲ್ಲಿ ಭೂಸ್ವಾಧೀನ ಪ್ರಕ್ರಿಯೆ ಚುರುಕಾಗಿ ನಡೆಯುತ್ತಿದೆ. ಶೇ 80ರಷ್ಟು ಭೂಸ್ವಾಧೀನ ಪ್ರಕ್ರಿಯೆ ಮುಗಿದರೆ ಮಾತ್ರ ಕಾಮಗಾರಿಯನ್ನು ಕೆ–ರೈಡ್ ಆರಂಭಿಸಲಿದೆ. ಈ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿರುವುದರಿಂದಲೇ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್ ಕಾಮಗಾರಿಯನ್ನು ಮೊದಲ ಹಂತದಲ್ಲಿ ಕೈಗೆತ್ತಿಕೊಳ್ಳಲು ಕೆ–ರೈಡ್ ಮುಂದಾಗಿದೆ.

ಈ ಮಾರ್ಗವನ್ನು ಮುಂದಿನ ದಿನಗಳಲ್ಲಿ ನೆಲಮಂಗಲ ತನಕ ವಿಸ್ತರಿಸುವ ಆಲೋಚನೆಯೂ ಇದೆ. ಸದ್ಯಕ್ಕೆ 28 ಕಿ.ಮೀ ಉದ್ದ ಇರುವ ಈ ಮಾರ್ಗದಲ್ಲಿ 14 ನಿಲ್ದಾಣಗಳು ಬರಲಿವೆ. ನಾಲ್ಕೂ ಹಂತಗಳಲ್ಲಿ ಅತ್ಯಂತ ಕಡಿಮೆ ಉದ್ದದ ಕಾರಿಡಾರ್ ಇದಾಗಿದೆ.

ಸಾರ್ವಜನಿಕ ಸಮಾಲೋಚನಾ ಸಭೆಯನ್ನೂ ನಡೆಸದೆ ಕೆ–ರೈಡ್ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ಕಾರಿಡಾರ್ ಕೈಗೆತ್ತಿಕೊಂಡಿದೆ. ಸಂಚಾರ ಒತ್ತಡ ಹೆಚ್ಚಿರುವ ಕೆಎಸ್‌ಆರ್ ರೈಲು ನಿಲ್ದಾಣದಿಂದ ದೇವನಹಳ್ಳಿ ತನಕದ ಕಾರಿಡಾರ್ ಅನ್ನು ಮೊದಲ ಹಂತದಲ್ಲಿ ಕೈಗೆತ್ತಿಕೊಳ್ಳಬೇಕಿತ್ತು ಎಂಬುದು ರೈಲ್ವೆ ಹೋರಾಟಗಾರರ ಅಭಿಪ್ರಾಯ.

ಯೋಜನೆಯಲ್ಲಿ ಏನೇನು ಇರಲಿದೆ

148.17 ಕಿ.ಮೀ ಉದ್ದ ಮಾರ್ಗ	55.40 ಕಿ.ಮೀ ಎತ್ತರಿಸಿದ (ಎಲಿವೇಟೆಡ್) ಮಾರ್ಗ	15 ಮೀಟರ್ ಎತ್ತರದ ಎಲಿವೇಟೆಡ್ ಮಾರ್ಗ	57 ನಿಲ್ದಾಣಗಳು	3,660 ಮಿ.ಮೀ. ಅಗಲದ 25 ಕೆ.ವಿ ಹವಾನಿಯಂತ್ರಿತ ಬೋಗಿಗಳು

ಯಾವ ಮಾರ್ಗ ಎಷ್ಟು ಉದ್ದ

ಸಂಪಿಗೆ (ಕಾರಿಡಾರ್–1): ಕೆಎಸ್‌ಆರ್ ರೈಲು ನಿಲ್ದಾಣ–ಯಶವಂತಪುರ–ದೇವನಹಳ್ಳಿ	41.40 ಕಿ.ಮೀ
ಮಲ್ಲಿಗೆ (ಕಾರಿಡಾರ್–2): ಚಿಕ್ಕಬಾಣಾವರ–ಯಶವಂತಪುರ–ಬೈಯಪ್ಪನಹಳ್ಳಿ	25 ಕಿ.ಮೀ
ಪಾರಿಜಾತ (ಕಾರಿಡಾರ್–3): ಕೆಂಗೇರಿ–ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್	35.52 ಕಿ.ಮೀ
ಕನಕ (ಕಾರಿಡಾರ್–4:) ಹೀಲಳಿಗೆ–ಬೈಯಪ್ಪನಹಳ್ಳಿ–ಯಲಹಂಕ–ರಾಜಾನುಕುಂಟೆ	46.24 ಕಿ.ಮೀ

ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಪ್ರಧಾನ ಮಂತ್ರಿ ಅವರಿಂದಲೇ ಶಂಕುಸ್ಥಾಪನೆ ಮಾಡಿಸಲು ಸಿದ್ಧತೆಗಳು ನಡೆಯುತ್ತಿವೆ. ಈ ವರ್ಷ ಯೋಜನೆಗೆ ವೇಗ ಸಿಗಲಿದೆ

ಪಿ.ಸಿ. ಮೋಹನ್, ಸಂಸದ

ಸಮಾಲೋಚನಾ ಸಭೆಗೆ ಒತ್ತಾಯ

'ಯಾವುದೇ ಯೋಜನೆ ಆರಂಭಿಸುವ ಮುನ್ನ ಸಾರ್ವಜನಿಕರ ಸಮಾಲೋಚನಾ ಸಭೆ ನಡೆಸಬೇಕಾಗುತ್ತಿದೆ. ಕೆ–ರೈಡ್ ಈ ಸಭೆಯನ್ನು ಇನ್ನೂ ಮಾಡಿಲ್ಲ' ಎಂದು ರೈಲ್ವೆ ಹೋರಾಟಗಾರ ಆರ್. ಅಭಿಷೇಕ್ ಹೇಳಿದರು.

ಕೇಂದ್ರ ಸರ್ಕಾರದ ಸಹಭಾಗಿತ್ವದ ಯೋಜನೆ ಆಗಿರುವ ಕಾರಣಕ್ಕೆ ಸಭೆ ನಡೆಸದಿರಲು ಕೆ–ರೈಡ್ ನಿರ್ಧರಿಸಿದಂತಿದೆ. ಸಭೆ ನಡೆಸಿದ್ದರೆ ಜನರ ಅಭಿಪ್ರಾಯ ತಿಳಿಯುತ್ತಿತ್ತು. ಅಧಿಕಾರಿಗಳು ಇಷ್ಟ ಬಂದಂತೆ ಯೋಜನೆ ಅನುಷ್ಠಾನಗೊಳಿಸಿ ಪ್ರಯಾಣಿಕರು ರೈಲು ಹತ್ತದಿದ್ದರೆ ಯೋಜನೆಯ ಉದ್ದೇಶ ಸಾರ್ಥಕವಾಗುವುದಿಲ್ಲ ಎಂದರು.

ಸಮಗ್ರ ಯೋಜನಾ ವರದಿಯನ್ನೂ (ಡಿಪಿಆರ್) ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿಲ್ಲ. ಸ್ಥಳೀಯರಿಗೆ ಯೋಜನೆ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ ಎಂದು ಹೇಳಿದರು.

'ಮೂರು ತಿಂಗಳಿಗೊಮ್ಮೆ ಪ್ರಗತಿ ಪರಿಶೀಲಿಸಬೇಕು'

ಉಪನಗರ ಯೋಜನೆಯ ಕಾಮಗಾರಿಗೆ ಕೂಡಲೇ ಭೂಮಿಪೂಜೆ ನಡೆಸಬೇಕು. ಬಳಿಕ ಮೂರು ತಿಂಗಳಿಗೊಮ್ಮೆ ಮುಖ್ಯಮಂತ್ರಿ ಅಥವಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಬೇಕು ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ ಹೇಳಿದರು.

ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಡಿಪೋಗಳ ನಿರ್ಮಾಣಕ್ಕೆ ರೈಲ್ವೆ ಮತ್ತು ರಾಜ್ಯ ಸರ್ಕಾರದ ಜಮೀನು ಇನ್ನೂ ಹಸ್ತಾಂತರ ಆಗಿಲ್ಲ. ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಕಡೆಯಿಂದ ದೊರೆಯಬೇಕಿರುವ ಅನುಮತಿಗಳ ಬಗ್ಗೆ ಮತ್ತು ಭೂಸ್ವಾಧೀನ ಸಮಸ್ಯೆಗಳನ್ನು ಮುಖ್ಯಮಂತ್ರಿ ಪರಿಹರಿಸುವ ನಿಟ್ಟಿನಲ್ಲಿ ಆಗಾಗ ಸಭೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಂಕುಸ್ಥಾಪನೆ ನಡೆದರೆ ಎಲ್ಲದಕ್ಕೂ ಕಾಲಮಿತಿ ನಿಗದಿಯಾಗಲಿದೆ. ಯೋಜನೆಗೆ ಇನ್ನಷ್ಟು ವೇಗ ದೊರೆಯಲಿದೆ ಎಂದರು.

ರೈಲು ಮಾರ್ಗಕ್ಕೆ ಹೂವಿನ ಹೆಸರು

ಒಟ್ಟು 148 ಕಿ.ಮೀ ಉದ್ದದ ಈ ಯೋಜನೆ ನಾಲ್ಕು ಕಾರಿಡಾರ್‌ಗಳನ್ನು ಹೊಂದಿದೆ. ಕೆ.ಎಸ್.ಆರ್ ರೈಲು ನಿಲ್ದಾಣ– ದೇವನಹಳ್ಳಿ (ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ) ಮಾರ್ಗದ ಉದ್ದ 41.40 ಕಿ.ಮೀ ಇದ್ದು, ಈ ಮಾರ್ಗದಲ್ಲಿ ಒಟ್ಟು 15 ನಿಲ್ದಾಣಗಳು ಬರಲಿವೆ. ಈ ಮಾರ್ಗಕ್ಕೆ 'ಸಂಪಿಗೆ' ಎಂಬ ಹೆಸರಿಡಲಾಗಿದೆ.

ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್ 25 ಕಿ.ಮೀ ಇದ್ದು, 14 ನಿಲ್ದಾಣಗಳು ನಿರ್ಮಾಣವಾಗಲಿವೆ. ಈ ಮಾರ್ಗಕ್ಕೆ 'ಮಲ್ಲಿಗೆ' ಎಂದು ನಾಮಕರಣ ಮಾಡಲಾಗಿದೆ. ಕೆಂಗೇರಿ– ವೈಟ್‌ಫೀಲ್ಡ್ ಮಾರ್ಗ 35.52 ಕಿ.ಮೀ ಹೊಂದಿದ್ದು, 9 ನಿಲ್ದಾಣಗಳು ಬರಲಿವೆ. ಈ ಕಾರಿಡಾರ್‌ಗೆ 'ಪಾರಿಜಾತ' ಎಂದು ಹೆಸರಿಡಲಾಗಿದೆ. ಹೀಲಳಿಗೆ (ಚಂದಾಪುರ)– ರಾಜಾನುಕುಂಟೆ ಮಾರ್ಗ 46.24 ಕಿ.ಮೀ ಹೊಂದಿದ್ದು, 19 ನಿಲ್ದಾಣಗಳು ಬರಲಿವೆ. ಈ ಮಾರ್ಗಕ್ಕೆ 'ಕನಕ' ಎಂದು ಹೆಸರಿಸಲಾಗಿದೆ.

ಐ.ಟಿ. ಪೋರ್ಟಲ್: ಖುದ್ದು ವಿವರ ನೀಡಲು ಪಾರೇಖ್‌ಗೆ ಸೂಚನೆ

ನವದೆಹಲಿ (ಪಿಟಿಐ): ಹೊಸ ಐ.ಟಿ. ಪೋರ್ಟಲ್ ಬಳಕೆಗೆ ಬಂದು ಎರಡು ತಿಂಗಳು ಕಳೆದರೂ ತಾಂತ್ರಿಕ ದೋಷಗಳು ಮುಂದುವರಿದಿರುವ ಕುರಿತು ಖುದ್ದಾಗಿ ವಿವರಣೆ ನೀಡುವಂತೆ ಕೇಂದ್ರ ಹಣಕಾಸು ಸಚಿವಾಲಯವು ಇನ್ಫೊಸಿಸ್ ಸಿಇಒ ಸಲೀಲ್ ಪಾರೇಖ್ ಅವರಿಗೆ ಸೂಚಿಸಿದೆ.

ಸತತ ಎರಡು ದಿನಗಳಿಂದ ಪೋರ್ಟಲ್ ಬಳಕೆಗೆ ಲಭ್ಯವಾಗದ ಬೆನ್ನಲ್ಲೇ ಸಚಿವಾಲಯವು ಈ ಕ್ರಮ ಕೈಗೊಂಡಿದೆ. ಸಮಸ್ಯೆಗಳ ಕುರಿತಾಗಿ ಪಾರೇಖ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸೋಮವಾರ ವಿವರಣೆ ನೀಡಬೇಕಿದೆ.

'ಆದಾಯ ತೆರಿಗೆ ಇಲಾಖೆಯ ಜಾಲತಾಣವು ತುರ್ತು ನಿರ್ವಹಣೆಯಲ್ಲಿದೆ. ಅದು ಬಳಕೆಗೆ ಲಭ್ಯವಾದ ಬಳಿಕ ಆ ಬಗ್ಗೆ ತೆರಿಗೆ ಪಾವತಿದಾರರಿಗೆ ಮಾಹಿತಿ ನೀಡಲಾಗುವುದು. ಅಡಚಣೆಗಾಗಿ ವಿಷಾದಿಸುತ್ತೇವೆ' ಎಂದು ಇನ್ಫೊಸಿಸ್ ಭಾನುವಾರ ಟ್ವೀಟ್ ಮಾಡಿದೆ.

ಐ.ಟಿ. ವಿವರ ಸಲ್ಲಿಸಲು ಇನ್ಫೊಸಿಸ್ ಅಭಿವೃದ್ಧಿಪಡಿಸಿರುವ www.incometax.gov.in ಪೋರ್ಟಲ್ ಅನ್ನು ಜೂನ್ 7ರಂದು ಬಿಡುಗಡೆ ಮಾಡಲಾಗಿತ್ತು. ಆ ದಿನದಿಂದಲೂ ಒಂದಲ್ಲ ಒಂದು ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಲೇ ಇವೆ. ಈ ಕಾರಣದಿಂದಾಗಿ ಆದಾಯ ತೆರಿಗೆ ಇಲಾಖೆಯು ಮ್ಯಾನುಯಲ್ ಫೈಲಿಂಗ್‌ಗೆ ಅವಕಾಶ ನೀಡಬೇಕಾಯಿತು.

ಹೈಕೋರ್ಟ್ ಸಿಜೆ– ಸಿ.ಎಂ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಂಗ ಇಲಾಖೆಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತಂತೆ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉಪಸ್ಥಿತಿಯಲ್ಲಿ ಪ್ರಮುಖ ಇಲಾಖೆಗಳ ಮುಖ್ಯಸ್ಥರ ಜೊತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಸೋಮವಾರ ಸಭೆ ನಡೆಸಲಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ಸಂಜೆ 5.30ಕ್ಕೆ ಈ ಸಭೆ ನಡೆಯಲಿದೆ. ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಅಡ್ವೊಕೇಟ್ ಜನರಲ್ ಕೂಡ ಭಾಗವಹಿಸಲಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಜೊತೆಗಿನ ಸಭೆಗೂ ಮೊದಲು ಪೂರ್ವಭಾವಿಯಾಗಿ ಮಧ್ಯಾಹ್ನ 3.30 ಕ್ಕೆ ಮುಖ್ಯಮಂತ್ರಿ ಸಭೆ ನಡೆಸಲಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ಆರ್ಥಿಕ, ಒಳಾಡಳಿತ, ಲೋಕೋಪಯೋಗಿ, ಜಲ ಸಂಪನ್ಮೂಲ, ನಗರಾಭಿವೃದ್ಧಿ, ಉನ್ನತ ಶಿಕ್ಷಣ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ, ಕಂದಾಯ, ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಎನ್‌ಎಂಪಿಗೆ ಇಂದು ಚಾಲನೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ 'ರಾಷ್ಟ್ರೀಯ ನಗದೀಕರಣ ಯೋಜನೆ'ಗೆ (ಎನ್‌ಎಂಪಿ) ಚಾಲನೆ ನೀಡಲಿದ್ದಾರೆ. ಕೇಂದ್ರ ಸರ್ಕಾರವು ತನ್ನ ಯಾವೆಲ್ಲ ಮೂಲಸೌಕರ್ಯ ಆಸ್ತಿಗಳನ್ನು ಮುಂದಿನ 4 ವರ್ಷಗಳಲ್ಲಿ ಮಾರಾಟ ಮಾಡಲಿದೆ ಎಂಬುದನ್ನು ಎನ್‌ಎಂಪಿ ತಿಳಿಸಲಿದೆ.

'ಕೇಂದ್ರವು ಬಳಕೆ ಮಾಡುತ್ತಿಲ್ಲದ ಮೂಲಸೌಕರ್ಯ ಆಸ್ತಿಗಳ ವಿವರವು ಎನ್‌ಎಂಪಿಯಲ್ಲಿ ಇರಲಿದೆ. ಹೂಡಿಕೆದಾರರಿಗೆ ಇವುಗಳ ಬಗ್ಗೆ ಮಾಹಿತಿ ನೀಡುವುದಷ್ಟೇ ಅಲ್ಲದೆ, ಇದು ಕೇಂದ್ರಕ್ಕೆ ಮಧ್ಯಮಾವಧಿಯಲ್ಲಿ ಆಸ್ತಿಯನ್ನು ನಗದೀಕರಿಸಿಕೊಳ್ಳಲು ಮಾರ್ಗವೊಂದನ್ನು ತೋರಿಸುತ್ತದೆ' ಎಂದು ನೀತಿ ಆಯೋಗವು ಹೇಳಿದೆ.

ನಗದೀಕರಣಕ್ಕೆ ಪರಿಗಣಿಸಲು ₹ 6 ಲಕ್ಷ ಕೋಟಿ ಮೌಲ್ಯದ ಮೂಲಸೌಕರ್ಯಗಳ ಪಟ್ಟಿಯನ್ನು ಸರ್ಕಾರವು ಅಂತಿಮಗೊಳಿಸುತ್ತಿದೆ. ಈ ಪಟ್ಟಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹಾಗೂ ವಿದ್ಯುತ್ ಗ್ರಿಡ್‌ಗಳೂ ಸೇರಿವೆ ಎಂದು ಕೇಂದ್ರ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಈಚೆಗೆ ಹೇಳಿದ್ದರು.

ವೆಂಕಯ್ಯ ನಾಯ್ಡು ಅವರು ಮಕ್ಕಳೊಂದಿಗೆ ರಕ್ಷಾ ಬಂಧನ ಆಚರಿಸಿದರು

ಮಕ್ಕಳೊಂದಿಗೆ ರಕ್ಷಾ ಬಂಧನ ಆಚರಿಸಿದ ಉಪರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ನಗರದಲ್ಲಿ ಭಾನುವಾರ ಪುಟ್ಟ ಮಕ್ಕಳೊಂದಿಗೆ ರಕ್ಷಾ ಬಂಧನವನ್ನು ಆಚರಿಸಿದರು.

ಅವರಿಗೆ ರಾಖಿ ಕಟ್ಟಿದ ಮಕ್ಕಳು, ಹಣೆಗೆ ತಿಲಕವಿಟ್ಟು, ಆರತಿ ಮಾಡಿ ಸಂಭ್ರಮಿಸಿದರು. ಈ ವೇಳೆ ಅವರು ಮಕ್ಕಳಿಗೆ ಸಿಹಿ ನೀಡಿ, ಆಶೀರ್ವದಿಸಿದರು.

ಬಳಿಕ ಮಾತನಾಡಿದ ಅವರು, 'ರಕ್ಷಾ ಬಂಧನವು ಏಕತೆಯನ್ನು ಸಾರುವ ಜೊತೆಗೆ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಪ್ರತಿಯೊಂದು ಹೆಣ್ಣು ಮಗುವಿನ ರಕ್ಷಣೆ ಮಾಡುವುದು ಸಹೋದರತೆಯ ಜವಾಬ್ದಾರಿ. ರಕ್ತ ಸಂಬಂಧಿಗಳಷ್ಟೇ ಅಲ್ಲದೆ ಸಮಾಜದ ಪ್ರತಿಯೊಂದು ಹೆಣ್ಣು ಮಗುವನ್ನೂ ನಾವು ರಕ್ಷಿಸಬೇಕು. ಮಹಿಳೆಯನ್ನು ಗೌರವಿಸಿ, ಸುರಕ್ಷಿತ ವಾತಾವರಣ ಕಲ್ಪಿಸಬೇಕು. ಈ ಮೂಲಕ ದೇಶದ ಏಕತೆ ಬಲಪಡಿಸಬೇಕು' ಎಂದು ಅವರು ಹೇಳಿದರು.

ಅಫ್ಗನ್ ತೊರೆವ ಧಾವಂತ: 7 ಬಲಿ

ಕಾಬೂಲ್ (ರಾಯಿಟರ್ಸ್): ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ 7 ಜನರು ಮೃತಪಟ್ಟಿದ್ದಾರೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಹೇಳಿದೆ. ಅದರ ಬೆನ್ನಲ್ಲೇ, ವಿಮಾನ ನಿಲ್ದಾಣದ ಹೊರಗೆ ಜನರನ್ನು ನಿಯಂತ್ರಿಸಲು ತಾಲಿಬಾನ್ ಗುಂಡು ಹಾರಾಟ ನಡೆಸಿದೆ.

ವಿಮಾನ ನಿಲ್ದಾಣ ಪ್ರವೇಶಿಸಲು ನಾಗರಿಕರು ಒಮ್ಮೆಲೇ ನುಗ್ಗಿದಾಗ, ಪ್ರವೇಶದ್ವಾರದ ಬಳಿ ನೂಕುನುಗ್ಗಲು ಉಂಟಾಗಿತ್ತು. ಆಗ ಏಳು ಜನರು ಮೃತಪಟ್ಟಿದ್ದಾರೆ. ನೂಕುನುಗ್ಗಲಿನಲ್ಲಿ ಗಾಯಗೊಂಡವರನ್ನು ನಿಲ್ದಾಣದ ಗೋಡೆಯ ಮೇಲಿಂದ ನ್ಯಾಟೊ ಸೈನಿಕರು ಎತ್ತಿಕೊಳ್ಳುತ್ತಿರುವ ವಿಡಿಯೊವನ್ನು ಸ್ಕೈನ್ಯೂಸ್ ಪ್ರಸಾರ ಮಾಡಿದೆ.

'ವಿಮಾನ ನಿಲ್ದಾಣದ ಬಳಿ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಆದರೆ ನಾವು ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇವೆ. ಎಲ್ಲರನ್ನೂ ಸುರಕ್ಷಿತವಾಗಿ ತೆರವು ಮಾಡಲು ಯತ್ನಿಸುತ್ತಿದ್ದೇವೆ' ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಹೇಳಿದೆ.

'ವಿಮಾನ ನಿಲ್ದಾಣದ ಬಳಿ ಉಂಟಾದ ನೂಕುನುಗ್ಗಲು, ವಿಮಾನದ ಚಕ್ರಗಳಿಗೆ ಸಿಲುಕಿ ಮತ್ತು ವಿಮಾನದಿಂದ ಬಿದ್ದು ಒಂದು ವಾರದಲ್ಲಿ 20ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ನೂಕುನುಗ್ಗಲನ್ನು ನಿಯಂತ್ರಿಸಲು ತಾಲಿಬಾನ್ ನಡೆಸಿದ ಗುಂಡಿನ ದಾಳಿಯಲ್ಲೂ ಹಲವರು ಮೃತಪಟ್ಟಿದ್ದಾರೆ' ಎಂದು ನ್ಯಾಟೊ ಪಡೆ ಮಾಹಿತಿ ನೀಡಿದೆ.

ಅಫ್ಗಾನಿಸ್ತಾನದ ಕುಟುಂಬವೊಂದು ತಾಲಿಬಾನಿಗಳಿಗೆ ಹೆದರಿ ಚಮನ್ ಪ್ರದೇಶದ ಗಡಿ ಮೂಲಕ ಭಾನುವಾರ ಪಾಕಿಸ್ತಾನಕ್ಕೆ ತಲುಪಿತು –ಎಎಫ್‌ಪಿ ಚಿತ್ರ

'ಕಾಬೂಲ್ ವಿಮಾನ ನಿಲ್ದಾಣದ ಹೊರಗೆ ನ್ಯಾಟೊ ಪಡೆಯ ಒಬ್ಬ ಸೈನಿಕನೂ ಕಾರ್ಯನಿರ್ವಹಿಸುತ್ತಿಲ್ಲ. ವಿಮಾನ ನಿಲ್ದಾಣದೊಳಗೆ ನಾವು ಪರಿಸ್ಥಿತಿ ನಿಭಾಯಿಸುತ್ತಿದ್ದೇವೆ. ತಾಲಿಬಾನ್ ಜತೆಗೆ ಸಂಘರ್ಷ ನಡೆಯುವುದನ್ನು ತಡೆಯುವ ಉದ್ದೇಶದಿಂದಲೇ ವಿಮಾನ ನಿಲ್ದಾಣದೊಳಗಿನ ಕಾರ್ಯಾಚರಣೆಗೆ ನಾವು ಸೀಮಿತವಾಗಿದ್ದೇವೆ' ಎಂದು ನ್ಯಾಟೊ ಪಡೆ ಹೇಳಿದೆ.

ಅಮೆರಿಕ, ಬ್ರಿಟನ್ ನಿರಾಶ್ರಿತರ ತೆರವು ಕಾರ್ಯಾಚರಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರನ್ನು ಕಾಬೂಲ್ ವಿಮಾನ ನಿಲ್ದಾಣಕ್ಕೆ ಕಳುಹಿಸಿವೆ. ಆದರೆ ಎರಡೂ ದೇಶಗಳ ಸೈನಿಕರು ತಮ್ಮ ಕಾರ್ಯಾಚರಣೆಯನ್ನು ವಿಮಾನ ನಿಲ್ದಾಣದ ಒಳಾವರಣಕ್ಕೆ ಸೀಮಿತಗೊಳಿಸಿದ್ದಾರೆ. ತಾಲಿಬಾನ್ ಜತೆಗೆ ಸಂಭಾವ್ಯ ಸಂಘರ್ಷ ತಡೆಯಲು ಹೀಗೆ ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಗುಂಡು ಹಾರಿಸಿದ ತಾಲಿಬಾನ್: ಅಫ್ಗನ್ ತೊರೆಯುವವರು, ಸುಲಭವಾಗಿ ತೆರಳಲು ಅನುಕೂಲ ಮಾಡಿಕೊಡುತ್ತೇವೆ. ಯಾವುದೇ ತೊಂದರೆ ಮಾಡುವುದಿಲ್ಲ ಎಂದು ತಾಲಿಬಾನ್ ನಾಯಕರು ಭರವಸೆ ನೀಡಿದ್ದರು. ಆದರೆ, ಶನಿವಾರ ಮತ್ತು ಭಾನುವಾರ ವಿಮಾನ ನಿಲ್ದಾಣದ ಬಳಿ ಜನರ ಮೇಲೆ ತಾಲಿಬಾನಿಗಳು ಗುಂಡು ಹಾರಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 9

'ಮೀಸಲಾತಿ: 26 ರಿಂದ ಪ್ರತಿಜ್ಞಾ ಪಂಚಾಯ್ತಿ ಜಾಗೃತಿ ಅಭಿಯಾನ'

ಪ್ರಜಾವಾಣಿ ವಾರ್ತೆ

ಕೂಡಲಸಂಗಮ: 2ಎ ಮೀಸಲಾತಿಗಾಗಿ 'ಪ್ರತಿಜ್ಞಾ ಪಂಚಾಯ್ತಿ' ಎಂಬ ಜಾಗೃತಿ ಅಭಿಯಾನವನ್ನು ಇದೇ 26 ರಿಂದ ಸೆಪ್ಟೆಂಬರ್ 30ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಭಾನುವಾರ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ನಡೆದ ಪ್ರತಿಜ್ಞಾ ಪಂಚಾಯತ ಜಾಗೃತಿ ಅಭಿಯಾನದ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅಭಿಯಾನ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಿಂದ ಆರಂಭವಾಗಿ ರಾಜ್ಯದಾದ್ಯಂತ ಸಂಚರಿಸಿ ಬೆಂಗಳೂರು ತಲುಪಲಿದೆ ಎಂದು ವಿವರಿಸಿದರು.

ಜಿಲ್ಲಾ, ತಾಲ್ಲೂಕು ಕೇಂದ್ರದಲ್ಲಿ ಅಭಿಯಾನ ಸಂಚರಿಸಲಿದ್ದು ನಿತ್ಯ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಜಾಗೃತಿ ಸಭೆಗಳನ್ನು ಏರ್ಪಡಿಸಲಾಗುವುದು. ಮೈಸೂರು ಪ್ರಾಂತ್ಯದ ಗೌಡಲಿಂಗಾಯತ, ಮಲೆನಾಡು ಪ್ರದೇಶದ ಮಲೇಗೌಡ ಲಿಂಗಾಯತ, ಕಲ್ಯಾಣ ಕರ್ನಾಟಕದ ದೀಕ್ಷಾ ಲಿಂಗಾಯತ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸುವಂತೆ ಹಾಗೂ ಲಿಂಗಾಯತ ಧರ್ಮದ ಎಲ್ಲ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸುತ್ತೇವೆ ಎಂದರು.

'ಲಿಂಗಾಯತ ಪಂಚಮಸಾಲಿಗಳಿಗೆ 2ಎ ಮೀಸಲಾತಿ ಕೊಡಬಾರದು ಎನ್ನಲು ಮುಖ್ಯಮಂತ್ರಿ ಚಂದ್ರು ಯಾರು? ನಮ್ಮ ತಂಟೆಗೆ ಬಂದರೆ ಸುಮ್ಮನೆ ಬಿಡುವುದಿಲ್ಲ'

ವಿಜಯಾನಂದ ಕಾಶಪ್ಪನವರ
ರಾಷ್ಟ್ರೀಯ ಅಧ್ಯಕ್ಷ ,ಲಿಂಗಾಯತ ಪಂಚಮಸಾಲಿ ಸಮಾಜ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೆ.30ರೊಳಗೆ ಮೀಸಲಾತಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವ ಭರವಸೆ ಇದೆ. ನಿಧಾನವಾದರೆ ಅಕ್ಟೋಬರ್ 1 ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ಮುಂದುವರಿಸುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಪಂಚಮಸಾಲಿ ಸಮಾಜದ ಸಂಘಟನೆ ಒಡೆಯಲು ಮೂರನೇ ಪೀಠದ ಸ್ಥಾಪನೆಗೆ ಪ್ರೋತ್ಸಾಹಿಸಿದ ಸಮಾಜದ ಸಚಿವರೊಬ್ಬರಿಗೆ ಸಂಗಮನಾಥನ ಶಾಪ ತಟ್ಟಿ ಮುಖ್ಯಮಂತ್ರಿಯಾಗಲಿಲ್ಲ ಎಂದು ಯಾರ ಹೆಸರನ್ನೂ ಹೇಳದೇ ಟೀಕಿಸಿದರು.

ಚಿತ್ರಾವಳಿ

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಉಪವಲಯ ಸಂಚಾಲಕಿ ಬ್ರಹ್ಮಕುಮಾರಿ ಲೀಲಾ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಕ್ಷಾಬಂಧನದ ಪ್ರಯುಕ್ತ ರಾಖಿ ಕಟ್ಟಿ ಶುಭ ಕೋರಿದರು

ಶಾಸಕ ಹಾಗೂ ಕಾಂಗ್ರೆಸ್ ಮುಖಂಡ ಎಂ.ಬಿ. ಪಾಟೀಲ್ ಅವರು ರಕ್ಷಾ ಬಂಧನದ ಪ್ರಯುಕ್ತ ಭಾನುವಾರ ಮರವೊಂದಕ್ಕೆ ರಾಖಿ ಕಟ್ಟುವ ಮೂಲಕ ಪರಿಸರ ಸಂರಕ್ಷಣೆ ಸಂದೇಶ ಸಾರಿದರು

'ಬೆಂಕಿಯಲ್ಲಿ ಅರಳಿದ ಪ್ರತಿಭೆ ಗಿರಿಜಮ್ಮ'

ಪ್ರಜಾವಾಣಿ ವಾರ್ತೆ



ಡಾ.ಎಚ್. ಗಿರಿಜಮ್ಮ

ಬೆಂಗಳೂರು: 'ವೈದ್ಯೆ ಹಾಗೂ ಲೇಖಕಿಯಾಗಿದ್ದ ಡಾ.ಎಚ್. ಗಿರಿಜಮ್ಮ ಅವರು ಅವಮಾನ, ಅನ್ಯಾಯ ಹಾಗೂ ಶೋಷಣೆಯನ್ನು ಜೀವನದುದ್ದಕ್ಕೂ ಎದುರಿಸಿದರು. ಕಷ್ಟಗಳ ಸರಮಾಲೆಯ ನಡುವೆಯೂ ಸಾಧನೆ ಮಾಡುವ ಮೂಲಕ ಬೆಂಕಿಯಲ್ಲಿ ಅರಳಿದ ಪ್ರತಿಭೆ ಅವರಾಗಿದ್ದಾರೆ' ಎಂದು ಒಡನಾಡಿಗಳು ಹಾಗೂ ಆಪ್ತರು ಮೆಚ್ಚುಗೆ ವ್ಯಕ್ತಪಡಿಸಿದರು.

ಕದಳಿ ಮಹಿಳಾ ವೇದಿಕೆಯು ಆನ್‌ಲೈನ್ ವೇದಿಕೆಯಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಾ.ಸಿ.ಆರ್. ಚಂದ್ರಶೇಖರ್, ಜಿ.ಎನ್. ಮೋಹನ್, ಎಚ್.ಎಲ್. ಪುಷ್ಪಾ, ವಸುಂಧರಾ ಭೂಪತಿ, ಎಸ್.ಜಿ. ತುಂಗಾರೇಣುಕಾ, ಕೃಷ್ಣ ಮಾಸಡಿ, ಆರ್.ಜಿ. ಹಳ್ಳಿ ನಾಗರಾಜ್, ಬಿ.ಎನ್. ಮಲ್ಲೇಶ್, ಕೆ.ವಿ. ನಾಗರಾಜಮೂರ್ತಿ ಸೇರಿದಂತೆ ಹಲವರು ನುಡಿನಮನ ಸಲ್ಲಿಸಿದರು.

ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, 'ಧನದಾಹಿ ವೈದ್ಯರು, ಸಿಬ್ಬಂದಿ ವಿರುದ್ಧ ಗಿರಿಜಮ್ಮ ಅವರು ಹೋರಾಟ ಮಾಡಿದ್ದರು. ಇದರಿಂದಾಗಿ ಅವರು ಕಿರುಕುಳವನ್ನೂ ಎದುರಿಸಬೇಕಾಯಿತು' ಎಂದರು.

ಲೇಖಕಿ ಡಾ. ವಸುಂಧರಾ ಭೂಪತಿ ಮಾತನಾಡಿ, 'ಗಿರಿಜಮ್ಮ ಅವರ ಇಡೀ ಬದುಕಿನ ಪಯಣ ಒಂದು ಭಾವಯಾನ. ಜೀವನ ಅವರಿಗೆ ಮೋಸ ಮಾಡಿತು. ಪ್ರಶಸ್ತಿ ಪುರಸ್ಕಾರಕ್ಕೆ ಅವರು ಲಾಬಿ ಮಾಡಿರಲಿಲ್ಲ. ಹತ್ತಿರದವರೇ ಅವರಿಗೆ ಮೋಸ ಮಾಡಿದರು. ಅವರ ಪುಸ್ತಕಗಳು ಪ್ರತಿ ಗ್ರಂಥಾಲಯವನ್ನೂ ತಲುಪಬೇಕು' ಎಂದರು.

ಬಿಬಿಎಂಪಿ ಪ್ರೌಢ ಶಾಲೆ, ಪಿ.ಯು. ಕಾಲೇಜು ಆರಂಭ ಇಂದಿನಿಂದ

ಕೋವಿಡ್ ಹರಡದಂತೆ ತಡೆಯಲು ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧೀನದ ಪ್ರೌಢಶಾಲೆಗಳಲ್ಲಿ 9ನೇ ಮತ್ತು 10ನೇ ತರಗತಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು. ತರಗತಿಗಳನ್ನು ಸೋಮವಾರದಿಂದ ಆರಂಭಿಸಲು ಸಿದ್ಧತೆ ನಡೆದಿದೆ. ಕೋವಿಡ್ ಹರಡದಂತೆ ತಡೆಯಲು ಪಾಲಿಕೆ ಕಠಿಣ ಕ್ರಮಗಳನ್ನು ಕೈಗೊಂಡಿದೆ.

9ನೇ ತರಗತಿ, 10ನೇ ತರಗತಿ, ಪ್ರಥಮ ಮತ್ತು ದ್ವಿತೀಯ ಪಿ.ಯು ತರಗತಿಗಳಲ್ಲಿ 10,200 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತರಗತಿಗೆ ಹಾಜರಾಗುವ ನಿರೀಕ್ಷೆಯನ್ನು ಬಿಬಿಎಂಪಿ ಹೊಂದಿದೆ. ತರಗತಿಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸುವುದು, ಸ್ಯಾನಿಟೈಸರ್‌ಗಳನ್ನು ಒದಗಿಸುವುದು, ಮಾಸ್ಕ್ ವಿತರಣೆ ಮುಂತಾದ ಅನೇಕ ಕ್ರಮಗಳನ್ನು ಪಾಲಿಕೆ ಕೈಗೊಂಡಿದೆ.

ಕೆಂಪೇಗೌಡ ನಗರದ ಬಿಬಿಎಂಪಿ ಹೆಣ್ಣುಮಕ್ಕಳ ಪ್ರೌಢಶಾಲೆಯಲ್ಲಿ ಅಧ್ಯಾಪಕರು ಹಾಗೂ ಸಿಬ್ಬಂದಿ ಕೊಠಡಿಗಳನ್ನು ಸ್ವಚ್ಛಗೊಳಿಸಿದರು– ಪ್ರಜಾವಾಣಿ ಚಿತ್ರ

'ತರಗತಿಗೆ ಹಾಜರಾಗುವ ಎಲ್ಲ ವಿದ್ಯಾರ್ಥಿಗಳ, ಅಧ್ಯಾಪಕರ ಹಾಗೂ ಶಾಲಾ ಸಿಬ್ಬಂದಿಯ ದೇಹದ ಉಷ್ಣಾಂಶ ತಪಾಸಣೆ ಮಾಡುವುದು ಕಡ್ಡಾಯ. ಇದಕ್ಕಾಗಿ ಎಲ್ಲ ಶಾಲಾ ಕಾಲೇಜುಗಳಿಗೂ ಉಷ್ಣತಾ ಮಾಪಕ ಒದಗಿಸಿದ್ದೇವೆ. ತರಗತಿ ಕೊಠಡಿಗಳನ್ನು ಸೋಂಕು ನಿವಾರಕ ಸಿಂಪಡಿಸಿ ಸ್ವಚ್ಛಗೊಳಿಸಲು ಕ್ರಮ ಕೈಗೊಂಡಿದ್ದೇವೆ' ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಪದವಿ ಕಾಲೇಜುಗಳಲ್ಲಿ ಸದ್ಯಕ್ಕೆ ತರಗತಿಗಳು ನಡೆಯುತ್ತಿಲ್ಲ. ಬಹುತೇಕ ಶಾಲಾ ಕಾಲೇಜುಗಳಲ್ಲಿ ತರಗತಿ ಕೊಠಡಿ ಸಮಸ್ಯೆ ಇಲ್ಲ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವ ಕ್ಲೀವ್‌ಲ್ಯಾಂಡ್‌ನಂತಹ ಪಿ.ಯು. ಕಾಲೇಜುಗಳಲ್ಲಿ ತರಗತಿ ಕೊಠಡಿಗಳ ಕೊರತೆ ಇದೆ. ಸದ್ಯಕ್ಕೆ ಇಲ್ಲಿಗೆ ಸಮೀಪದ ಪದವಿ ಕಾಲೇಜಿನ ಕೊಠಡಿಗಳನ್ನು ಬಳಸಿಕೊಂಡು ತರಗತಿ ನಡೆಸಲು ಕ್ರಮ ಕೈಗೊಂಡಿದ್ದೇವೆ' ಎಂದರು.

'ಒಂದು ತರಗತಿ ಕೊಠಡಿಯಲ್ಲಿ 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರಬಾರದು. ವಿದ್ಯಾರ್ಥಿಗಳು ಪರಸ್ಪರ ಅಂತರ ಕಾಯ್ದುಕೊಂಡು ಪಾಠ ಕೇಳುವುದಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಎಲ್ಲ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರಿಗೆ ಹಾಗೂ ಪಿ.ಯು ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚನೆ ನೀಡಿದ್ದೇವೆ' ಎಂದು ಹೇಳಿದರು.

ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಸಮವಸ್ತ್ರ, ಶೂಗಳು, ಬ್ಲೇಸರ್, ಪಠ್ಯ ಪುಸ್ತಕ, ಬ್ಯಾಗ್, ಟಿಪ್ಪಣಿ ಪುಸ್ತಕದಂತಹ ಕಲಿಕಾ ಸಾಮಗ್ರಿಗಳನ್ನು ಬಿಬಿಎಂಪಿ ವತಿಯಿಂದಲೇ ಪೂರೈಸಲಾಗುತ್ತದೆ.

ಸೋಮವಾರ, ಆಗಸ್ಟ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 235 | ಪುಟ 10 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶಾಲಾ ಪುನರಾರಂಭವನ್ನು ಸಂತಸದಿಂದ ಸ್ವೀಕರಿಸಿದರೆ, ಶಿಕ್ಷಣವು ಆಸಕ್ತಿಯುತವಾಗಿ ಸಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇದಕ್ಕೆ ಸಾಕಷ್ಟು ಸಿದ್ಧತೆಯೂ ಅಗತ್ಯ.

ಆಳ-ಅಗಲ
ಸೂರು ಹುಡುಕುವ ನಿರಾಶ್ರಿತರು
'ಸಿನಿಮಾ ಮಂದಿ ಕಾದಂಬರಿ ಓದಲಿ' 8
ಅಧಿವೇಶನದ ಬಳಿಕ ರಾಜ್ಯದಾದ್ಯಂತ ಪ್ರವಾಸ: ಎಚ್‌.ಡಿ. ದೇವೇಗೌಡ
ಕೋವಿಡ್: 29.38 ಲಕ್ಷಕ್ಕೆ ಏರಿಕೆ 8
ನದಿ ಯೋಜನೆಗೆ ಪಾದಯಾತ್ರೆ 4

ನಿರಂತರ ಸದೃಢ ಆರೋಗ್ಯಕ್ಕಾಗಿ
SDM
ಚ್ಯವನಪ್ರಾಶ ಲೇಹ
ತಯಾರಕರು ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ, ಉಡುಪಿ
Ph: 0820-2520852, 8970977513

ರಾಜ್ಯ ಕೋವಿಡ್ ಅಂಕಿ–ಅಂಶ

29,38,616 ▲ ಒಟ್ಟು ಸೋಂಕಿತರು (29,03,137 ನಿನ್ನೆಯ ವಿವರ)

20,556 ▼ ಸಕ್ರಿಯ ಪ್ರಕರಣಗಳು

28,80,889 ▲ ಗುಣಮುಖರಾದವರು

37,145 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,189	▼
ಗುಣಮುಖ	1,456	▲
ಸಾವು	22	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇಂದಿನಿಂದ ಶಾಲೆ – ಕಾಲೇಜು: ಕೋವಿಡ್ ಹೆಚ್ಚಿರುವ 5 ಜಿಲ್ಲೆಗಳಲ್ಲಿ ಇಲ್ಲ

9ರಿಂದ 12ನೇ ತರಗತಿ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು/ತುಮಕೂರು: ರಾಜ್ಯದಲ್ಲಿ ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತ ಹೆಚ್ಚಿರುವ ಐದು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ 9 ರಿಂದ 12 ರವರೆಗಿನ ಭೌತಿಕ ತರಗತಿಗಳು ಸೋಮವಾರ (ಆ. 23) ಆರಂಭವಾಗಲಿವೆ.

ಶಾಲಾ-ಕಾಲೇಜುಗಳಲ್ಲಿ ಭೌತಿಕ ತರಗತಿಗಳ ಆರಂಭಕ್ಕೆ ಜಿಲ್ಲಾ ಆಡಳಿತಗಳು ಸಕಲ ತಯಾರಿ ನಡೆಸಿವೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರೂ ತರಗತಿಗೆ ಹಾಜರಾಗಲು ಉತ್ಸುಕರಾಗಿದ್ದಾರೆ.

ತರಗತಿಗಳ ಆರಂಭದ ಕುರಿತು ತುಮಕೂರಿನಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತಲೂ ಹೆಚ್ಚು ಇದೆ. ಈ ಐದು ಜಿಲ್ಲೆಗಳಲ್ಲಿ ಶಾಲೆ–ಪದವಿ ಪೂರ್ವ ಕಾಲೇಜು ಆರಂಭಿಸುತ್ತಿಲ್ಲ' ಎಂದು ತಿಳಿಸಿದರು.

ಶಾಲಾರಂಭಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಕ್ಷಿ ಆಗಲಿದ್ದು, ಸಚಿವ ನಾಗೇಶ್ ಜೊತೆ ಸೋಮವಾರ ಅವರು ಮಲ್ಲೇಶ್ವರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ನಿರ್ಮಲಾರಾಣಿ ಅನುದಾನಿತ ಪ್ರೌಢಶಾಲೆಗೆ ಭೇಟಿ ನೀಡಲಿದ್ದಾರೆ.

ವಿದ್ಯಾರ್ಥಿಗಳು ತರಗತಿಗೆ ಹಾಜರಾಗುವಾಗ ಪೋಷಕರ ಅನುಮತಿ ಪತ್ರ ತರುವುದು ಕಡ್ಡಾಯ. ಅನುಮತಿ ಪತ್ರದಲ್ಲಿ ವಿದ್ಯಾರ್ಥಿಗೆ ಕೋವಿಡ್ ಸೋಂಕಿನ ಲಕ್ಷಣಗಳು ಇಲ್ಲ ಎಂಬುದನ್ನು ದೃಢೀಕರಿಸಬೇಕು. ತರಗತಿಗೆ ಮಕ್ಕಳ ಹಾಜರಾತಿ ಕಡ್ಡಾಯ ಅಲ್ಲ. ಆನ್‌ಲೈನ್ ಮೂಲಕವೂ ಶಿಕ್ಷಣ ಪಡೆಯಬಹುದು. ಈ ಆಯ್ಕೆಯನ್ನು ಪೋಷಕರಿಗೆ ಬಿಡಲಾಗಿದೆ.

8ನೇ ಪುಟ ನೋಡಿ

ಮೈಸೂರಿನ ಸದ್ವಿದ್ಯಾ ಪ್ರೌಢ ಶಾಲೆಯ ಕೊಠಡಿಗಳನ್ನು ಭಾನುವಾರ ಸ್ಯಾನಿಟೈಸ್ ಮಾಡಲಾಯಿತು

ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕೋವಿಡ್ ದೃಢ ಪ್ರಮಾಣ ಆಧಾರವಾಗಿಟ್ಟುಕೊಂಡು ಶಾಲೆಗಳನ್ನು ಆರಂಭಿಸುವ ಅಥವಾ ಮುಚ್ಚುವ ಬಗ್ಗೆ ನಿರ್ಧರಿಸಲಾಗುವುದು

ಬಿ.ಸಿ. ನಾಗೇಶ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

6 ತಿಂಗಳಿಗೆ ಒಮ್ಮೆ ಟಿಇಟಿ: ನಾಗೇಶ್

ತುಮಕೂರು: ಆರು ತಿಂಗಳಿಗೆ ಒಮ್ಮೆ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ನಡೆಸಲು ಚಿಂತನೆ ನಡೆಸಲಾಗಿದೆ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಭಾನುವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಆರು ತಿಂಗಳಿಗೆ ಒಮ್ಮೆ ನಿಗದಿತ ದಿನಾಂಕದಂದು ಟಿಇಟಿ ನಡೆಸಿದರೆ ಹೆಚ್ಚಿನ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅನುಕೂಲವಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಶಿಕ್ಷಕರ ವರ್ಗಾವಣೆಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು, ಸೆ. 5ರಿಂದ ಕೌನ್ಸಿಲಿಂಗ್ ಪ್ರಕ್ರಿಯೆ ಆರಂಭವಾಗಲಿದೆ. ಯಾವುದೇ ಗೊಂದಲಕ್ಕೆ ಅವಕಾಶಗಳು ಇಲ್ಲದಂತೆ ವರ್ಗಾವಣೆ ಪ್ರಕ್ರಿಯೆ ನಡೆಯಲಿದೆ. ರಾಜ್ಯದಲ್ಲಿ ಸುಮಾರು 35 ಸಾವಿರದಿಂದ 40 ಸಾವಿರ ಶಿಕ್ಷಕರು ವರ್ಗಾವಣೆಯಾಗಲಿದ್ದು, ಶಿಕ್ಷಕರು ಬಯಸಿದ ಸ್ಥಳಕ್ಕೆ ವರ್ಗಾವಣೆ ಮಾಡಿಕೊಡಲಾಗುತ್ತದೆ ಎಂದು ಹೇಳಿದರು.

ಜಾತಿ ಗಣತಿ ಬಗ್ಗೆ ಮಾತನಾಡಲ್ಲ: ಸಿ.ಎಂ.

ಹುಬ್ಬಳ್ಳಿ: 'ಜಾತಿ ಗಣತಿ ವಿಷಯ ಸದ್ಯ ಕೋರ್ಟ್‌ನಲ್ಲಿ ಇರುವುದರಿಂದ ಹೆಚ್ಚು ಮಾತನಾಡುವುದು ಸೂಕ್ತವಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. 4

ಹುರಿಯತ್ ಕಾನ್ಫರೆನ್ಸ್‌ನ ಎರಡೂ ಬಣಗಳ ನಿಷೇಧ ಸಾಧ್ಯತೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಪ್ರತ್ಯೇಕತಾವಾದಿಗಳ ಸಂಘಟನೆಯಾದ ಹುರಿಯತ್ ಕಾನ್ಫರೆನ್ಸ್‌ನ ಎರಡೂ ಬಣಗಳನ್ನು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ನಿಷೇಧಿಸುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. 9

ಸರಣಿ ಸ್ಫೋಟ: ವರದಿ ಸಲ್ಲಿಸಲು ಟಾಡಾ ಕೋರ್ಟ್‌ಗೆ ಸೂಚನೆ

ನವದೆಹಲಿ: 1993ರಲ್ಲಿ ರೈಲುಗಳಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿತ ಆರೋಪಿ ವಿರುದ್ಧ ದೋಷಾರೋಪ ಹೊರಿಸದಿರುವ ಕುರಿತು ಎರಡು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ರಾಜಸ್ಥಾನದ ಅಜ್ಮೇರ್‌ನ ಟಾಡಾ ಕೋರ್ಟ್‌ಗೆ ಸುಪ್ರೀಂಕೋರ್ಟ್ ಸೂಚಿಸಿದೆ. 9

ಶೈಲಿಗೆ ಬೆಳ್ಳಿ ಸಂಭ್ರಮ



ನೈರೋಬಿ, ಕೆನ್ಯಾ: ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ ಶೈಲಿ ಸಿಂಗ್ ಭಾನುವಾರ ನಡೆದ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಕೂಟದ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು. 10

ಚಿರಸ್ಮರಣೆ

ಶ್ರೀ ಬಿ.ಎಸ್. ನಾರಾಯಣ್
ದಾನಿ ಟ್ರಸ್ಟಿ
03.03.1932 - 23.08.1995

ಸಮಯ ಸರಿಯುತ್ತದೆ, ಆದರೆ ಸ್ಮರಣೆಗಳು ಚಿರಂತನವಾಗಿರುತ್ತವೆ
ಉತ್ಕೃಷ್ಟ ನಾಯಕತ್ವ ಹಾಗೂ ಕಠಿಣ ಪರಿಶ್ರಮದ ನಿಮ್ಮ ಬದ್ಧತಾಪೂರ್ಣ ಸೇವೆಯನ್ನು
26 ವರ್ಷಗಳ ನಂತರವೂ ನಾವು ನಿರಂತರವಾಗಿ ಸ್ಮರಿಸುತ್ತಿದ್ದೇವೆ.
ನೀವು ತೋರಿದ ಹಾದಿ ನಮಗೆ ಮಾರ್ಗದರ್ಶನವಾಗಿದೆ.
ನೀವು ಕಲ್ಪಿಸಿಕೊಂಡಿದ್ದ ಉನ್ನತ ಶ್ರೇಣಿಯತ್ತ ಸಂಸ್ಥೆಯನ್ನು ಬೆಳೆಸಿಕೊಂಡು ಹೋಗಲು
ನಿಮ್ಮ ಆಶೀರ್ವಾದದಿಂದಲೇ ನಮಗೆ ಸಾಧ್ಯವಾಗುತ್ತಿದೆ.
ನಿಮ್ಮ ದೂರದೃಷ್ಟಿಯು ನಮ್ಮನ್ನು ಎಂದೆಂದಿಗೂ ಪ್ರೇರೇಪಿಸುತ್ತಲೇ ಇರುತ್ತದೆ.

ಪ್ರೀತಿಯಿಂದ ಸ್ಮರಿಸುವವರು
ಡಾ| ಬಿ.ಎಸ್. ರಾಗಿಣಿ ನಾರಾಯಣ್
ದಾನಿ ಟ್ರಸ್ಟಿ, ಬಿ.ಎಂ.ಎಸ್ ಎಜುಕೇಶನಲ್ ಟ್ರಸ್ಟ್
ಲೈಫ್ ಟ್ರಸ್ಟಿ, ಬಿ.ಎಂ.ಎಸ್ ಹಾಸ್ಪಿಟಲ್ ಟ್ರಸ್ಟ್
ಟ್ರಸ್ಟಿ, ಮ್ಯಾನೇಜ್‌ಮೆಂಟ್ ಹಾಗೂ ಸಿಬ್ಬಂದಿವರ್ಗ BMSET

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಕರ್ನಾಟಕ ಸರ್ಕಾರ
ಉನ್ನತ ಶಿಕ್ಷಣ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

"ರಾಷ್ಟ್ರೀಯ ಶಿಕ್ಷಣ ನೀತಿ–2020"
ಉದ್ಘಾಟನಾ ಸಮಾರಂಭ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಇವರಿಂದ
ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿದ ರೂವಾರಿಗಳಿಗೆ ಸನ್ಮಾನ

ಶ್ರೀ ಧರ್ಮೇಂದ್ರ ಪ್ರಧಾನ್
ಮಾನ್ಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಕೇಂದ್ರ ಸಚಿವರು, ಭಾರತ ಸರ್ಕಾರ
ಇವರಿಂದ
ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ ಉದ್ಘಾಟನೆ

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ
2021–22ನೇ ಸಾಲಿನ ಉನ್ನತ ಶಿಕ್ಷಣದ ಪ್ರವೇಶಾತಿ
ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ
ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣ
ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿದ ರೂವಾರಿಗಳಿಗೆ ಸನ್ಮಾನ

ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಜತೆ ಉನ್ನತ ಶಿಕ್ಷಣ ಸಚಿವ ಡಾ|| ಸಿ.ಎನ್.ಅಶ್ವತ್ಥನಾರಾಯಣ ಅವರು ಇದ್ದಾರೆ.

ಪ್ರತಿ ವಿದ್ಯಾರ್ಥಿಯು
ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು, ತನ್ನ ಬದುಕನ್ನು ಕಟ್ಟಿಕೊಳ್ಳಲು
ತನಗಿಷ್ಟವಾದ, ತನಗೆ ಸೂಕ್ತವಾದ, ತನಗೆ ಆಸಕ್ತಿಯಿರುವ
ವಿಷಯಗಳನ್ನೇ ಆಯ್ಕೆ ಮಾಡಿಕೊಂಡು ವ್ಯಾಸಂಗ ಮಾಡುವ
ಸ್ವಾತಂತ್ರ್ಯವನ್ನು ನೀಡುತ್ತಿರುವುದೇ
"ರಾಷ್ಟ್ರೀಯ ಶಿಕ್ಷಣ ನೀತಿ–2020"

DIPR/DTE/65/2021-22

ದಿನಾಂಕ: 23–08–2021, ಸೋಮವಾರ, ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ

ಪಾಲಿಕೆ: ಕೋವಿಡ್ ಲಸಿಕೆ ವಿತರಣೆ ಹೆಚ್ಚಳ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ವಿತರಣೆ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಕಳೆದ ವಾರ ನಿತ್ಯ ಸರಾಸರಿ 44,400 ಮಂದಿಗೆ ಲಸಿಕೆ ನೀಡಲಾಗುತ್ತಿತ್ತು. ಶನಿವಾರ ಒಂದೇ ದಿನ 89,075 ಮಂದಿಗೆ ಲಸಿಕೆ ನೀಡಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

‘ಭ್ರಷ್ಟರಿಗೆ ಶಿಕ್ಷೆಯ ಭಯವೇ ಇಲ್ಲ’

ಎನ್.ಸಂತೋಷ್ ಹೆಗ್ಡೆ

ಬೆಂಗಳೂರು: 'ಭ್ರಷ್ಟರಿಗೆ ಶಿಕ್ಷೆಯ ಭಯವೇ ಇಲ್ಲದಂತಾಗಿದೆ. ಹೀಗಾಗಿ ಅವರು ಅವ್ಯಾಹತವಾಗಿ ಹಗರಣಗಳನ್ನು ಮಾಡುತ್ತಿದ್ದಾರೆ. ಸ್ವಾರ್ಥ ಮತ್ತು ದುರಾಸೆಯೂ ಇದಕ್ಕೆ ಕಾರಣ. ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬರುವವರಿಗೆ ಭವ್ಯ ಸ್ವಾಗತ ನೀಡುವ ಪರಿಪಾಠ ಹೆಚ್ಚುತ್ತಿರುವುದು ವಿಷಾದನೀಯ. ಜನರ ಈ ಮನೋಧೋರಣೆ ಬದಲಾಗಬೇಕು' ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ತಿಳಿಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಹಾಗೂ ಅಖಿಲ ಭಾರತ ನಿರುದ್ಯೋಗಿ ಯುವಜನ ಹೋರಾಟ ಸಮಿತಿ (ಎಐಯುವೈಎಸ್‌ಸಿ) ರಾಜ್ಯ ಸಮಿತಿ ಹಮ್ಮಿಕೊಂಡಿದ್ದ 'ಕೆಪಿಎಸ್‌ಸಿ ಸ್ವಚ್ಛಗೊಳಿಸಿ; ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಒದಗಿಸಿ' ಕುರಿತ ವೆಬಿನಾರ್‌ನಲ್ಲಿ ಭಾನುವಾರ ಮಾತನಾಡಿದರು.

'ಈಗಿನ ಕೆಪಿಎಸ್‌ಸಿ ಅಧ್ಯಕ್ಷರ ನೇಮಕವು ಕಾನೂನುಬಾಹಿರ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ. ಇತ್ತೀಚಿನ ದಿನಗಳಲ್ಲಿ ಭ್ರಷ್ಟರಿಗೆ ಮಣೆ ಹಾಕುತ್ತಿರುವುದಕ್ಕೆ ಇದೊಂದು ನಿದರ್ಶನ. ಲಂಚಕೊಟ್ಟು ಸರ್ಕಾರಿ ಸೇವೆಗೆ ಸೇರುವವರು ಲಂಚಕೋರರಾಗುತ್ತಿದ್ದಾರೆ. ಅರ್ಹತೆಯ ಆಧಾರದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಪ್ರಯತ್ನಿಸಬೇಕು. ಆಗ ನಾವು ಭ್ರಷ್ಟರಾಗುವುದು ತಪ್ಪುತ್ತದೆ' ಎಂದು ತಿಳಿಸಿದರು.

ಅಖಿಲ ಭಾರತ ಎಐಡಿವೈಒ ಅಧ್ಯಕ್ಷ ರಾಮಾಂಜನಪ್ಪ ಆಲ್ದಳ್ಳಿ 'ಸರ್ಕಾರಗಳು ಉದ್ಯೋಗ ಸೃಷ್ಟಿಯತ್ತ ಗಮನ ಹರಿಸುತ್ತಿಲ್ಲ. ಹೇರಳವಾಗಿರುವ ಮಾನವ ಸಂಪನ್ಮೂಲದ ಸದ್ಬಳಕೆಯೂ ಆಗುತ್ತಿಲ್ಲ. ದಕ್ಷ ಆಡಳಿತಗಾರರನ್ನು ಸೃಷ್ಟಿಸಬೇಕಿರುವ ಕೆಪಿಎಸ್‌ಸಿ ಭ್ರಷ್ಟಾಚಾರದಲ್ಲಿ ಮುಳುಗೆದ್ದಿದೆ. ಸರ್ಕಾರದ ಮುಖ್ಯಸ್ಥರು ತಮ್ಮ ಹಿಂಬಾಲಕರನ್ನೇ ಈ ಸಂಸ್ಥೆಯ ಸದಸ್ಯರು ಮತ್ತು ಅಧ್ಯಕ್ಷರನ್ನಾಗಿ ನೇಮಿಸುತ್ತಿದ್ದಾರೆ. ಇದು ವಿಪರ್ಯಾಸ' ಎಂದರು.

ವಿಚಾರಗೋಷ್ಠಿಯಲ್ಲಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿಕೆ

ಉನ್ನತ ಶಿಕ್ಷಣ ತರಗತಿ ಅ.1ರಿಂದ ಆರಂಭ

ಪ್ರಜಾವಾಣಿ ವಾರ್ತೆ

ಅಶ್ವತ್ಥ ನಾರಾಯಣ

ಬೆಂಗಳೂರು: 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಕಲಿಕೆಗೆ ಸೋಮವಾರದಿಂದ (ಆ. 23) ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಅ.1 ರಿಂದ ತರಗತಿಗಳು ಆರಂಭವಾಗಲಿವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಬಿಜೆಪಿ ರಾಜ್ಯ ಸಾಮಾಜಿಕ ಜಾಲತಾಣ ಪ್ರಕೋಷ್ಠವು ಭಾನುವಾರ ಏರ್ಪಡಿಸಿದ್ದ ವರ್ಚುವಲ್ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರದಾನ್ ಅವರು ವರ್ಚುವಲ್ ಮೂಲಕ ಪ್ರವೇಶ ಪ್ರಕ್ರಿಯೆಗೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದರು.

'ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಎಂಬ ವಿದ್ಯಾರ್ಥಿಗಳ ದಾಖಲಾತಿ ವ್ಯವಸ್ಥೆಗೂ ಸೋಮವಾರ ಚಾಲನೆ ನೀಡಲಾಗುವುದು. ಸರ್ಕಾರಿ ಕಾಲೇಜು ಮಾತ್ರವಲ್ಲದೆ, ಅನುದಾನಿತ ಮತ್ತು ಖಾಸಗಿ ಶಾಲೆಗಳು ಕೂಡಾ ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬೇಕು' ಎಂದರು.

'ವೆಬ್ ಆಧಾರಿತವಾಗಿ ಆನ್‌ಲೈನ್ ದಾಖಲಾತಿ ನಡೆಯುತ್ತದೆ. ಹೀಗಾಗಿ, ಯಾವ ವಿದ್ಯಾರ್ಥಿ ಯಾವ ಕಾಲೇಜಿನಲ್ಲಿ ದಾಖಲಾಗಿದ್ದಾನೆ, ಯಾವ ಕೋರ್ಸು ಮತ್ತಿತರ ವಿಷಯಗಳ ಮಾಹಿತಿ ಆಯಾ ವಿಶ್ವವಿದ್ಯಾಲಯಗಳ ಬಳಿ ಇರುತ್ತದೆ. ಅದೇ ವಿದ್ಯಾರ್ಥಿ ಎಲ್ಲ ಮಾಹಿತಿಯನ್ನು ವೆಬ್ ಮೂಲಕವೂ ಪಡೆಯಬಹುದು' ಎಂದರು.

ಯುಜಿಸಿ ಮಾರ್ಗಸೂಚಿ ಪ್ರಕಾರ ತರಗತಿ: 'ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಮಾರ್ಗಸೂಚಿ ಪ್ರಕಾರವೇ ಅ. 1ರಿಂದಲೇ ತರಗತಿಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ' ಎಂದು ಅವರು ಹೇಳಿದರು.

ಅತಿಥಿ ಉಪನ್ಯಾಸಕರಿಗೆ ಸಮಸ್ಯೆ ಇಲ್ಲ: 'ಶಿಕ್ಷಣ ನೀತಿ ಜಾರಿ ನಂತರ ಅತಿಥಿ ಉಪನ್ಯಾಸಕರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಯಾರನ್ನೂ ತೆಗೆದುಹಾಕುವ ಪ್ರಮೇಯ ಇಲ್ಲ' ಎಂದರು.

ಸಚಿವರು ಶಾಲೆಗಳಿಗೆ ಭೇಟಿ ನೀಡಬೇಕು: ಬೊಮ್ಮಾಯಿ



ಬಸವರಾಜ ಬೊಮ್ಮಾಯಿ

'ಶಾಲೆಗಳಲ್ಲಿ ಸೋಮವಾರದಿಂದ (ಆ. 23) ಭೌತಿಕ ತರಗತಿಗಳು ಆರಂಭಗೊಳ್ಳುತ್ತಿದ್ದು, ಸರ್ಕಾರ ಎಲ್ಲ ಸಿದ್ಧತೆ ಮಾಡಿಕೊಂಡಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಬಗ್ಗೆ ಭಾನುವಾರ ಟ್ವೀಟ್ ಮಾಡಿರುವ ಅವರು, 'ಸಚಿವ ಸಂಪುಟದ ಸಹೋದ್ಯೋಗಿಗಳು, ಆಯಾ ಜಿಲ್ಲೆಗಳಲ್ಲಿ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳನ್ನು, ಶಿಕ್ಷಕರನ್ನು ಪ್ರೋತ್ಸಾಹಿಸಿ, ಪೋಷಕರಲ್ಲಿ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸಬೇಕು' ಎಂದೂ ಸಲಹೆ ನೀಡಿದ್ದಾರೆ.

'ಮಕ್ಕಳ ಸುರಕ್ಷತೆಯ ಜೊತೆಗೆ ಅವರ ಶೈಕ್ಷಣಿಕ ಭವಿಷ್ಯದ ಹಿತಾಸಕ್ತಿಗಳನ್ನೂ ಪರಿಗಣಿಸಿ, ತಜ್ಞರ ಸಲಹೆಗಳಿಗೆ ಅನುಗುಣವಾಗಿ ಸರ್ಕಾರ ಶಾಲೆಗಳನ್ನು ಆರಂಭಿಸುವ ತೀರ್ಮಾನವನ್ನು ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಮಕ್ಕಳು ಹಾಗೂ ಪೋಷಕರು, ಮಾರ್ಗಸೂಚಿ ನಿಯಮಗಳನ್ನು ಪಾಲಿಸಿ, ಸುರಕ್ಷತಾ ಕ್ರಮಗಳನ್ನು ಅನುಸರಿಸಿ, ಯಾವುದೇ ಆತಂಕ ಇಲ್ಲದೆ ಸರ್ಕಾರದೊಂದಿಗೆ ಸಹಕರಿಸಬೇಕು' ಎಂದೂ ಬೊಮ್ಮಾಯಿ ಮನವಿ ಮಾಡಿದ್ದಾರೆ.

‘ಮಾನವತಾವಾದ ಮೇಲುಸ್ತರಕ್ಕೆ ಏರಿಸಿದವರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವತಾವಾದವನ್ನು ಮೇಲುಸ್ತರಕ್ಕೆ ಏರಿಸಿದ ಶ್ರೇಯ ನಾರಾಯಣ ಗುರುಗಳಿಗೆ ಸಲ್ಲಬೇಕು. ಮಾನವತೆಯು ಅವರ ಚಿಂತನೆಯ ಕೇಂದ್ರಬಿಂದುವಾಗಿತ್ತು' ಎಂದು ರಾಜ್ಯ ಕಾರ್ಮಿಕ ಮುಖಂಡ ಕೆ.ಪ್ರಕಾಶ್ ತಿಳಿಸಿದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘವು ನಾರಾಯಣ ಗುರುಗಳ 167ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ 'ಸಾಮಾಜಿಕ ಬದಲಾವಣೆಯಲ್ಲಿ ನಾರಾಯಣ ಗುರುಗಳ ಚಿಂತನೆಯ ಪಾತ್ರ' ವಿಷಯದ ಕುರಿತ ವಿಚಾರ ಸಂಕಿರಣದಲ್ಲಿ ಭಾನುವಾರ ಮಾತನಾಡಿದರು.

'ಜ್ಞಾನ ಪಡೆಯುವ ಜೊತೆಗೆ ಬದುಕನ್ನೂ ರೂಪಿಸಿಕೊಳ್ಳುವುದೇ ಶಿಕ್ಷಣ ಎಂದು ಗುರುಗಳು ಪ್ರತಿಪಾದಿಸಿದ್ದರು. ಅವರು ವೈಭವದ ಮದುವೆಗಳನ್ನು ವಿರೋಧಿಸುತ್ತಿದ್ದರು. ನದಿ ತೀರದಲ್ಲಿ ಬಿದ್ದಿದ್ದ ಕಲ್ಲೊಂದನ್ನು ತಂದು ಶಿವಲಿಂಗವೆಂದು ಪ್ರತಿಷ್ಠಾಪಿಸಿದ್ದರು. ಈಳವರಿಗೂ ದೇವರ ವಿಗ್ರಹ ಪ್ರತಿಷ್ಠಾಪನೆಯ ಹಕ್ಕು ಇದೆ ಎಂಬುದನ್ನು ಆ ಮೂಲಕ ಸಾರಿ ಹೇಳಿದ್ದರು. ಬ್ರಾಹ್ಮಣರ ಆಧಿಪತ್ಯಕ್ಕೆ ಕೊನೆಹಾಡುವ ಉದ್ದೇಶವೂ ಈ ಕ್ರಾಂತಿಕಾರಕ ನಡೆಯ ಹಿಂದೆ ಅಡಕವಾಗಿತ್ತು' ಎಂದರು.

ಹಿರಿಯ ಪತ್ರಕರ್ತ ದಿನೇಶ್ ಅಮಿನ್‌ಮಟ್ಟು, 'ನಾರಾಯಣ ಗುರುಗಳು ಹಿಂದೂ ಧರ್ಮದ ನಿಜವಾದ ರಕ್ಷಕರು. ಕ್ರೈಸ್ತ ಮಿಷನರಿಗಳು ಮೊದಲು ಕಾಲಿಟ್ಟಿದ್ದು ಕೇರಳಕ್ಕೆ. ಆ ಸಮಯದಲ್ಲೇ ಗುರುಗಳು ಕೇರಳ ಪ್ರವೇಶಿಸದೇ ಇದ್ದಿದ್ದರೆ ಕ್ರೈಸ್ತ, ಬೌದ್ಧ ಹಾಗೂ ಬ್ರಹ್ಮ ಸಮಾಜದೆಡೆಗೆ ಒಲವು ಹೊಂದಿದ್ದ ಜನ, ಆ ಧರ್ಮಗಳಿಗೆ ಮತಾಂತರಗೊಳ್ಳುವ ಸಾಧ್ಯತೆ ಇತ್ತು' ಎಂದು ತಿಳಿಸಿದರು.

'ಆರ್ಯ ಈಡಿಗ ಸಂಘಟನೆಗೆ ಬಲ ಹಾಗೂ ನಮ್ಮ ಸಮುದಾಯಕ್ಕೆ ದನಿ ಬರಬೇಕಾದರೆ ನಾವೆಲ್ಲಾ ಗುರುಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದೇವರ ಮನೆಯಲ್ಲಿ ಅವರ ಫೋಟೊ ಇಟ್ಟು ಪೂಜಿಸುವ ಜೊತೆಗೆ ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು. ಗುರುಗಳ ಜಯಂತಿ ಅವರ ಭಾವಚಿತ್ರವನ್ನಿಟ್ಟು ಪೂಜೆ ಮಾಡುವುದು ಹಾಗೂ ಭಜನೆ ಮಾಡುವುದಕ್ಕೆ ಸೀಮಿತವಾಗಬಾರದು' ಎಂದು ಕಿವಿಮಾತು ಹೇಳಿದರು.

ಆರ್ಯ ಈಡಿಗ ಮಹಾಸಂಸ್ಥಾನದ ನಿಯೋಜಿತ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ಇದ್ದರು.

ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್

ನೊಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶ, ಹಂತ 1, ಮಹದೇವಪುರ ಅಂಚೆ, ಬೆಂಗಳೂರು–560048 ಫೋನ್: 91–80–28524133 ಫ್ಯಾಕ್ಸ್: 91–80–28524171 ಸಿಐಎನ್: L23209KA1977PLC043357
ಇಮೇಲ್: info@gpl.in, secretarial@gujaratpetrosynthese.com ವೆಬ್‌ಸೈಟ್: www.gpl.in

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) / ಇನ್ನಿತರ ಆಡಿಯೋ ವಿಷಯುಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಏರ್ಪಡಿಸಲಾಗುವ 44ನೇ ವಾರ್ಷಿಕ ಮಹಾಸಭೆ ಕುರಿತ ಮಾಹಿತಿ

ಈ ಮೂಲಕ ತಿಳಿಸುವುದು ಏನೆಂದರೆ, ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್‌ನ ("ದಿ ಕಂಪನಿ") 44ನೇ ವಾರ್ಷಿಕ ಮಹಾಸಭೆಯನ್ನು (**"ಎಜಿಎಂ") ಶುಕ್ರವಾರ, 17ನೇ ಸೆಪ್ಟಂಬರ್, 2021 ರಂದು ಬೆಳಗ್ಗೆ 11.00 (ಐಎಸ್‌ಟಿ)** ಗಂಟೆಗೆ ವಿಸಿ/ಒಎವಿಎಂ ಮುಖಾಂತರ ಕೈಗೊಳ್ಳಲಾಗುತ್ತದೆ ಮತ್ತು ಕಂಪನಿಗಳ ಕಾಯ್ದೆ, 2013 ಮತ್ತು ಅದರ ಅಡಿಯಲ್ಲಿನ ನಿಯಮಗಳನ್ನು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಾಮಾನ್ಯ ಸುತ್ತೋಲೆ, ನಂ. 20/2020 ದಿನಾಂಕ 5ನೇ ಮೇ 2020 ಗಳನ್ನು ಸಾಮಾನ್ಯ ಸುತ್ತೋಲೆ ನಂ. 14/2020 ದಿನಾಂಕ 8ನೇ ಏಪ್ರಿಲ್ 2020, ಸಾಮಾನ್ಯ ಸುತ್ತೋಲೆ ನಂ. 17/2020 ದಿನಾಂಕ 13ನೇ ಏಪ್ರಿಲ್ 2020 ಹಾಗೂ ಸಾಮಾನ್ಯ ಸುತ್ತೋಲೆ ನಂ. 02/2021 ದಿನಾಂಕ 13ನೇ ಜನವರಿ 2021 ಗಳೊಂದಿಗೆ ಓದಿಕೊಂಡಂತೆ ಮತ್ತು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**'ಸೆಬಿ ಸರ್ಕ್ಯೂಲಾರ್'**) ಹೊರಡಿಸಿದ, ದಿನಾಂಕ 12ನೇ ಮೇ, 2020ರ ಸುತ್ತೋಲೆ ಮತ್ತು 15ನೇ ಜನವರಿ 2021ರ ಸುತ್ತೋಲೆಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸದರಿ ಮಹಾಸಭೆಯನ್ನು ಕೈಗೊಳ್ಳಲಾಗುತ್ತಿದ್ದು, ಈ ಸಭೆಯಲ್ಲಿ ಎಜಿಎಂ ಕನ್ವೀನಿಂಗ್ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವ್ಯಾಪಾರ ವಹಿವಾಟುಗಳನ್ನು ಚರ್ಚಿಸಲಾಗುತ್ತದೆ.

ಕಂಪನಿಯ ಹಣಕಾಸು ವರ್ಷ 2020–21ನೇ ಸಾಲಿನ ಎಜಿಎಂ ಪ್ರಕಟಣೆ ಹಾಗೂ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು, ಕಂಪನಿ/ಡೆಪಾಸಿಟರೀಸ್/ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್ ರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ರವಾನಿಸಲಾಗುತ್ತದೆ. ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳ ಪ್ರಕಾರ, ಕಂಪನಿಯ ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ಯಾವುದೇ ಸದಸ್ಯರಿಗೂ ರವಾನಿಸಲಾಗುವುದಿಲ್ಲ.

ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿ ಪ್ರತಿಗಳು ಕಂಪನಿಯ www.gpl.in ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ರವರ www.evotingindia.com ವೆಬ್‌ಸೈಟ್‌ನಲ್ಲಿ ಹಾಗೂ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜ್‌ನ www.bseindia.com ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

ಇಮೇಲ್ ವಿಳಾಸಗಳನ್ನು ರಜಿಸ್ಟರ್/ಅಪ್ಡೇಟ್ ಮಾಡಿಕೊಳ್ಳುವ ವಿಧಾನ:

ಇನ್ನೂವರೆಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರುಗಳು, ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳಲು ಈ ಕೆಳಗಿನ ಹಂತಗಳನ್ನು ಅನುಸರಿಸಿ, ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಪಡೆದುಕೊಳ್ಳಬಹುದು ಹಾಗೂ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಗಾಗಿ ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಕೂಡ ಪಡೆದುಕೊಳ್ಳಬಹುದು:

1. ಈ ಲಿಂಕ್‌ಗೆ ಭೇಟಿ ಕೊಡಿ – https://www.bigshareonline.com/InvestorRegistration.aspx
2. ಕಂಪನಿಯ ಹೆಸರನ್ನು ಆಯ್ಕೆ ಮಾಡಿರಿ – ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್
3. ಫೋಲಿಯೊ ನಂ./ಡಿಪಿ/ಕ್ಲೈಂಟ್ ಐಡಿ ನಮೂದಿಸಿರಿ
4. ಪ್ಯಾನ್ ನಂಬರ್ ನಮೂದಿಸಿರಿ
5. ಷೇರುದಾರರ ಹೆಸರು ನಮೂದಿಸಿರಿ
6. ಇಮೇಲ್ ಐಡಿ ನಮೂದಿಸಿರಿ
7. ಮೊಬೈಲ್ ನಂಬರ್ ನಮೂದಿಸಿರಿ
8. ಒಟಿಪಿ ಸಲ್ಲಿಸಿ
9. ತದನಂತರ ಸಿಸ್ಟಮ್‌ನಿಂದ ನಿಮ್ಮ ಇ–ಮೇಲ್ ವಿಳಾಸ ಖಚಿತಗೊಂಡು ಎಜಿಎಂ ಪ್ರಕಟಣೆ ರವಾನೆಗೊಳ್ಳುತ್ತದೆ.
10. ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವಿಚಾರಣೆಗಳು/ಅನಾನುಕೂಲತೆಗಳು ಇದ್ದಲ್ಲಿ, ಅಂತಹ ಸದಸ್ಯರು investor@bigshareonline.com ವಿಳಾಸಕ್ಕೆ ಬರೆಯಬಹುದು.

ಇ–ಮೇಲ್ ವಿಳಾಸಗಳ ಶಾಶ್ವತ ನೊಂದಣಿಗಾಗಿ, ಡಿಮ್ಯಾಟ್ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ಡೆಪಾಸಿಟರಿ ಪಾರ್ಟಿಸಿಪಂಟ್ಸ್ ('ಡಿಪಿ') ಇವರಲ್ಲಿ ಅಪ್ಡೇಟ್ ಮಾಡಿಕೊಳ್ಳಬೇಕು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್ ಇವರೊಂದಿಗೆ ಅಪ್ಡೇಟ್ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಎಜಿಎಂ ಅವಧಿಯಲ್ಲಿ ರಿಮೋಟ್ ಇ–ವೋಟಿಂಗ್ ಅಥವಾ ಇ–ವೋಟಿಂಗ್ ಮುಖಾಂತರ ಮತ ಚಲಾಯಿಸುವ ಮಾದರಿ:

ರಿಮೋಟ್ ಇ–ವೋಟಿಂಗ್ ಸಿಸ್ಟಮ್ ಮುಖಾಂತರ ಎಜಿಎಂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವಹಿವಾಟುಗಳಿಗೆ, ಸದಸ್ಯರು ದೂರದಿಂದಲೇ ತಮ್ಮ ಮತ ಚಲಾಯಿಸುವ ಅವಕಾಶ ನೀಡಲಾಗಿರುತ್ತದೆ.

ಮೇಲೆ ತಿಳಿಸಲಾಗಿರುವ ವಿಧಾನದಲ್ಲಿ ಯಶಸ್ವಿಯಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ, ಇ–ವೋಟಿಂಗ್ ಮುಖಾಂತರ ಮತಗಳನ್ನು ಚಲಾಯಿಸಲು ಲಾಗಿನ್ ಕ್ರೆಡೆನ್ಷಿಯಲ್‌ಗಳನ್ನು ಒದಗಿಸಲಾಗುತ್ತದೆ.

ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಲಾಗಿರುವ ಎಲ್ಲಾ ಠರಾವುಗಳಿಗೆ, ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಮತಗಳನ್ನು ಚಲಾಯಿಸಲು ಸಿಡಿಎಸ್‌ಎಲ್'ರವರ ರಿಮೋಟ್ ಇ–ವೋಟಿಂಗ್ ಸೌಲಭ್ಯ (**'ರಿಮೋಟ್ ಇ–ವೋಟಿಂಗ್'**) ಒದಗಿಸಲು ಸಜ್ಜಾಗಿದೆ. ಹೆಚ್ಚುವರಿಯಾಗಿ, ಸಭೆಯ ಅವಧಿಯಲ್ಲಿ ಕೂಡ ಕಂಪನಿಯು ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತದೆ. ಎಜಿಎಂ ಅವಧಿಯಲ್ಲಿ ಎಜಿಎಂ/ಇ–ವೋಟಿಂಗ್ ಎದುರು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗುತ್ತದೆ.

'ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್' ಪರವಾಗಿ
ಸಹಿ/– ಊರ್ಮಿ ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು

ದಿನಾಂಕ : ಆಗಸ್ಟ್ 23, 2021
ಸ್ಥಳ : ಮುಂಬೈ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿ-2, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ಕೆಐಎಡಿಬಿ/ಭೂಸ್ವಾ/(K-RIDE)/2020-21 ದಿನಾಂಕ: 16.08.2021

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ ಹಂತದ **"ಬೆಂಗಳೂರು ಉಪ–ನಗರ ರೈಲ್ವೆ ಯೋಜನೆಗಾಗಿ ಕಾರಿಡಾರ್–2 (ಭಾಗ 1)"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ: ಸಿಐ **10** ಎಸ್‌ಪಿಕ್ಯೂ (ಇ) **2021** ದಿನಾಂಕ **10–08–2021 ನ್ನು** ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ **ದಿನಾಂಕ: 10–08–2021** ರಂದು ಪ್ರಕಟಣೆ ಹೊರಡಿಸಿದೆ. ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರು/ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟೀಸ್ ನೀಡಲಾಗಿದೆ. ಆದರೆ, ಕೆಲವರು ನೋಟೀಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ **ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ (ಕೆ.ಆರ್.ಐ.ಡಿ.ಇ.), ನಂ.14/3, 1ನೇ ಮಹಡಿ, ಅರವಿಂದ ಭವನ ಬಿಲ್ಡಿಂಗ್, ನೃಪತುಂಗ ರಸ್ತೆ, ಬೆಂಗಳೂರು** ರವರ ಕಛೇರಿಯಲ್ಲಿ ದಿನಾಂಕ: **13–09–2021 ರಂದು ಅಪರಾಹ್ನ 12.00 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರುಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ್, ಹಕ್ಕುಬಿಡುಗಡೆ ವೈಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ವಿಚಾರಣೆ ದಿನಾಂಕ: 13.09.2021 | **ವಿಚಾರಣೆ ಸಮಯ: ಅಪರಾಹ್ನ 12.00 ರಿಂದ**

ಕ್ರ. ಸಂ.	ಖಾತಾದಾರರ ಹೆಸರು	ಗುರುತಿನ ಸಂಖ್ಯೆ	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಬಿಬಿಎಂಪಿ ಸ್ವತ್ತಿನ ಸಂಖ್ಯೆ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ.
	ಗ್ರಾಮ : ಹೆಬ್ಬಾಳ ಹೋಬಳಿ: ಕಸಬಾ ತಾಲ್ಲೂಕು : ಬೆಂಗಳೂರು ಉತ್ತರ				
1	ಬಿ ಮಂಜುನಾಥ್ ಬಿನ್ ಭೀಮಣ್ಣ	C2/R/10/7.4/HEBBALA-04	96/2	–	23.04
2	ಎಂ. ರಾಮಯ್ಯ ಬಿನ್ ಲೇಟ್ ಮುನಿಯಲ್ಲಪ್ಪ ಬಿ. ಮಂಜುನಾಥ್	C2/R/10/7.4/HEBBALA-03	96/3	–	235.56
3	ಬಿ. ಮಂಜುನಾಥ್ ಎಂ. ರಾಮಯ್ಯ ಬಿನ್ ಲೇಟ್ ಮುನಿಯಲ್ಲಪ್ಪ	C2/R/10/7.5/HEBBALA-02	96/4	–	237.97
4	ಹದ್ದಿಗೆ ಹಿಡಿದ ರಸ್ತೆ	C2/R/10/5.4-6.4/HEBBALA-05	94–96	–	3.19
	ಗ್ರಾಮ: ವಿಶ್ವನಾಥನಾಗೇನಹಳ್ಳಿ ಹೋಬಳಿ: ಕಸಬಾ ತಾಲ್ಲೂಕು : ಬೆಂಗಳೂರು ಉತ್ತರ				
5	ಜಯರಾಮಯ್ಯ ಬಿನ್ ಲೇಟ್ ದೊಡ್ಡಮುನಿನಾಗಪ್ಪ	C2/R/09/1.5-2.5/ VISHWANATHANAGENAHALLI-01	25/1	–	69.28
	ಗ್ರಾಮ : ನಾಗವಾರ ಹೋಬಳಿ: ಕಸಬಾ ತಾಲ್ಲೂಕು : ಬೆಂಗಳೂರು ಉತ್ತರ				
6	ಜೋಜಪ್ಪ	C2/R/08/9.4/NAGAWARA-09	51/1	–	182.13
7	ಶ್ರೀಮತಿ ವಿ ಅನಿತ ಕೋಂ ವಿಜಯ ಕುಮಾರ್	C2/R/08/8.4-9.4/NAGAWARA -11	51/2	–	142.47
8	ವಿಜಯಲಕ್ಷ್ಮೀ ಕೋಂ ಆರ್.ವೆಂಕಟೇಶ್ ಮತ್ತು ವಿ ಶಿವಕುಮಾರ್ ಬಿನ್ ಆರ್.ವೆಂಕಟೇಶ್	C2/R/08/8.4-9.4/NAGAWARA-12	51/2	–	66.79
9	ಎಂ. ಹರಿಬಾಬು ಬಿನ್ ಶ್ರೀ. ಮೋಹನ್	C2/R/08/8.4-9.4/NAGAWARA-13	51/2	–	62.29
10	ಮುನ್ನಲಾಲ್	C2/R/08/8.4-9.4/NAGAWARA-14	51/2	–	16.27
11	ರಾಮಸ್ವಾಮಿ ಬಿನ್ ಚನಸ್ವಾಮಿ	C2/R/08/8.4-9.4/NAGAWARA-15	51/2	–	57.23
12	ಶೈಲಜ ಗೋಕುಲ್ ಕೋಂ ಮದುಸೂದನ್ ಗೋಕುಲ್ ಕೆ	C2/R/08/8.4-9.4/NAGAWARA-16	51/2	–	116.71
13	ಸಮೀರ್ ಪಾಷ ಮತ್ತು ಮಹಮ್ಮದ್ ಯಾಸೀನ್ ಮೈನರ್ ಗಾರ್ಡಿಯನ್ ತಾಯಿ ಪರ್ವೀನ್ ತಾಜ್	C2/R/08/8.4-9.4/NAGAWARA-17	51/2	–	52.96
14	ಆರ್. ನಾರಾಯಣಸ್ವಾಮಿ ಬಿನ್ ರಾಮಮುನಿಯಪ್ಪ	C2/R/08/8.4-9.4/NAGAWARA-18	51/2	–	56.29
15	ನರಸಿಂಹಯ್ಯ ಬಿನ್ ರಾಮಮುನಿಯಪ್ಪ	C2/R/08/8.4-9.4/NAGAWARA-19	51/2	–	55.97
16	ಡಿ.ಜೇಮ್ಸ್ ಬಿನ್ ಲೇಟ್ ಎಂ.ಡೇವಿಡಪ್ಪ	C2/R/08/8.4-9.4/NAGAWARA-20	51/2	–	98.8
17	ಸಿ. ಕಾಂತರಾಜು	C2/R/08/9.4/NAGAWARA -10	51/3	–	386.67
18	ಶ್ರೀಮತಿ ಜಿತ್ರುತ ಕೋಂ ಲೇಟ್ ಚಿನ್ನಸ್ವಾಮಿ ರೆಡ್ಡಿ	C2/R/08/1.4/NAGAWARA-01	52/1	–	827.91
19	ಆರ್ ಜೇಜಪ್ಪ	C2/R/08--0.4/NAGAWARA-1A	52/2	–	135.34
20	ಶ್ರೀಮತಿ ಟೀನಾ ಫೇಬಿಯನ್ ಕೋಂ ಜೇನೋಬಿಯಸ್ ಜೋಸೆಫ್	C2/R/09/0.4/NAGAWARA-02	52/2	–	79.14
21	ಕುಮಾರಿ ರೀನಾ ಬಿನ್ ಲೇಟ್ ಲೋರ್ದ್‌ಸ್ವಾಮಿ	C2/R/08-09/9.4-0.4/NAGAWARA-03	52/2	–	62.17
22	ಆರ್ ಜೇಜಪ್ಪ	C2/R/08-09/9.4-0.4/NAGAWARA-04	52/2	–	166.21
23	ಗುಡ್ಡಿ ಪ್ರಜಾಪತಿ	C2/R/08-09/9.4-0.4/NAGAWARA-05	52/2	–	42.48
24	ಟೆರೇನ್ಸ್ ಸ್ಟ್ಯಾನ್ಲಿ ಆಶೆ ಬಿನ್ ರಸಲ್ ಫ್ರಾನ್ಸಿಸ್ ಆಶೆ	C2/R/08-09/9.4-0.4/NAGAWARA-06	52/2	–	47.85
25	ಸಂಧ್ಯಾ ಕೋಂ ಮುಕ್ತೇಶ್ವರ	C2/R/08-09/9.4-0.4/NAGAWARA-07	52/2	–	14.84
26	ಡೇವಿಡ್ ರಾಜ್ ಬಿನ್ ದೇವರಾಜ್	C2/R/08-09/9.4-0.4/NAGAWARA-08	52/2	–	48.12

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ–ಕೆ.ಆರ್.ಐ.ಡಿ.ಇ., ನೃಪತುಂಗ ರಸ್ತೆ, ಬೆಂಗಳೂರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

LOANS: 10LS-500CR. For Property, Project, Business Cheques. Takeover Done. Easy Process & Repayment. Good Commission for Agents 08838928406

EDUCATION CORNER ಕ್ಲಾಸಿಫೈಡ್ಸ್

Virtual Course in Counseling and Life Skills and Well-being
BECOME A COUNSELOR
Get empowered Lead Better Quality Life
Starting on 4th September 2021
6 MONTH PART TIME COURSE
Samadhan Centre for Counselling and Life Skills
REGISTER FOR FREE WEBINAR
7411265230 | 7795220618
WEEKEND CLASSES
71, 3rd Main road, MLA layout RT Nagar Bangalore-560032.
www.samadhanbangalore.com

ADMISSION 2021-22
RAMAN POLYTECHNIC
12, Magadi Main Rd, Kamakshipalya, (Near Sumanahalli Bus Stop) B'lore-79
Mobile: 80500 66771 / 63609 03500 Web: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN SCHOOL OF NURSING (GNM)
RAMAN I.T.I. COLLEGE
♦ Fitter ♦ Electronic ♦ Mechanic Electrician
CALIFORNIA PUBLIC SCHOOL
ICSE & State Syllabus. Nursery to X std
HOSTEL FACILITIES FOR BOYS & GIRLS
RMN-21201

CONNECT

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore:9448460103

REAL ESTATE SELLING

Sites

Arkavathi Layout

ARAKAVATHY BDA Layout Sale 30X40 site, 19th Block, Kalyannagar, South facing, 40 feet. Road, compounded, clean documents. Contact Owner: 6366523699

Vishweshwariah Layout

SITE FOR Sale Vishwasvariah Lay Out 4th Block 30*20, South Facing - Cont 9845868653 ,9449308058

JOB OPPORTUNITIES

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Classroom Desks
Officetech ISO 9001-2015 BIFMA Certified Company
Scholar Series
Convent Series
Primary Series
College Series
Z-Line Series
Academy Series
STRONG DESIGN GUARANTEES LIFETIME INVESTMENT
OTS OFFICETECH SYSTEMS PVT. LTD.
No. 6/8, Commanders Place, Near Richmond Circle, Raja Ram Mohan Roy Road, Bangalore - 560025.
Mob: 98450 48194, 98450 48053
(080) 2222 9111, 2212 1500, 2222 8080, 98457 57501
otsofficetech@gmail.com | officetech@vsnl.net www.officetech.in
ISO 9001-2015 Certified & BIFMA Certified Branded Company
Karnataka | Kerala | Tamilnadu | Andhra Pradesh | Telangana | Goa | Maharashtra

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

OTHERS

Medical

HOME NURSES available for HOME/ HOSPITAL/ PATIENT CARE 24/7. MAJ Gandhinagar, Bangalore. Contact: 7022399993, 6366883838

PERSONAL

Lost

I,KULDEEP SINGH, Roll No.CSC-40/2K, Lost-my 8th semester compartment marksheet, Dibrugarh University,if found please Contact: 9886800558

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಮೂಲಸೌಕರ್ಯಗಳಿಂದ ವಂಚಿತ • ಬೇಡಿಕೆಗಳಿಗೆ ಕಿವಿಗೊಡದ ಬಿಬಿಎಂಪಿ • ಸ್ಮಶಾನಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಅಳಲು

‘ನಮ್ಮ ಮಕ್ಕಳನ್ನು ಮದುವೆಯಾಗಲೂ ಹಿಂದೇಟು’

• ಜಿ.ಶಿವಕುಮಾರ

ಬೆಂಗಳೂರು: ‘ಮನೆಯಲ್ಲಿ ವಯಸ್ಸಿಗೆ ಬಂದಿರುವ ಹೆಣ್ಣು ಮಕ್ಕಳಿದ್ದಾರೆ. ಅವರ ಮದುವೆಯದ್ದೇ ದೊಡ್ಡ ಚಿಂತೆಯಾಗಿದೆ. ಅವರನ್ನು ವಿವಾಹವಾಗಲು ಯಾರೂ ಮುಂದೆ ಬರುತ್ತಿಲ್ಲ. ಗಂಡು ಮಕ್ಕಳಿಗಾದರೂ ಮದುವೆ ಮಾಡಿಸೋಣವೆಂದರೆ ಅವರಿಗೂ ಹೆಣ್ಣು ಕೊಡುತ್ತಿಲ್ಲ’...

ಇದು ನಗರದ ಸ್ಮಶಾನಗಳಲ್ಲಿ ದುಡಿಯುವ ಕಾರ್ಮಿಕರ ಅಳಲು. ಬೆಂಗಳೂರಿನ ಸ್ಮಶಾನ ಮತ್ತು ವಿದ್ಯುತ್ ಚಿತಾಗಾರಗಳಲ್ಲಿ ಸುಮಾರು 250 ಜನ ಕೆಲಸ ಮಾಡುತ್ತಿದ್ದಾರೆ. ಪೂರ್ವಿಕರ ಕಾಲದಿಂದಲೂ ಇದೇ ವೃತ್ತಿ ಅವಲಂಬಿಸಿ ಬದುಕು ಸಾಗಿಸುತ್ತಿರುವ ಇವರು ಮೂಲಸೌಕರ್ಯಗಳಿಂದ ವಂಚಿತರಾಗಿದ್ದಾರೆ.

‘ಡಿ’ ದರ್ಜೆ ನೌಕರರೆಂದು ಪರಿಗಣಿಸಿ, ಉದ್ಯೋಗ ಕಾಯಂ ಮಾಡಬೇಕೆಂಬ ಇವರ ಬಹುಕಾಲದ ಬೇಡಿಕೆಗೆ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಿವಿಗೊಟ್ಟಿಲ್ಲ. ಕೋವಿಡ್ ಎರಡನೇ ಅಲೆಯ ಸಮಯದಲ್ಲಿ ಜೀವವನ್ನೂ ಲೆಕ್ಕಿಸದೆ ಹಗಲಿರುಳು ದುಡಿದಿದ್ದ ಇವರಿಗೆ ಆರೋಗ್ಯ ಕಾರ್ಡ್ ಕೂಡ ಇಲ್ಲ. ಹೀಗಾಗಿ ನೋವಿನಲ್ಲೇ ದಿನ ದೂಡುವ ಪರಿಸ್ಥಿತಿ ಇವರದು.

> ಮೃತರ ಸಂಬಂಧಿಕರು ಕೊಡುವ ನೂರಿನ್ನೂರು ರೂಪಾಯಿಯೇ ನಮಗೆ ಜೀವನಾಧಾರ. ಬಾಡಿಗೆ ಮನೆಗೆ ಹೋಗೋಣವೆಂದು ಮಕ್ಕಳು ಒತ್ತಾಯಿಸುವುದೇನೋ ನಿಜ. ಅದಕ್ಕೆ ಹಣ ಬೇಕಲ್ಲವೇ
> **ಸೌರಿ ರಾಜ,** ಸ್ಮಶಾನ ಕಾರ್ಮಿಕ

‘ನಮಗೆ ತಿಂಗಳಿಗೆ ₹14 ಸಾವಿರ ವೇತನ ನಿಗದಿಪಡಿಸಲಾಗಿದೆ. ಪಿ.ಎಫ್, ಇಎಸ್ಐ ಕಡಿತಗೊಂಡು ₹10,400 ಸಿಗುತ್ತದೆ. ಈ ಮೊತ್ತದಲ್ಲಿ ಜೀವನ ನಿರ್ವಹಣೆ ಕಷ್ಟ. ವೇತನ ಹೆಚ್ಚಿಸುವಂತೆ ಮನವಿ ಮಾಡುತ್ತಲೇ ಇದ್ದೇವೆ. ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವಂತೆಯೂ ಕೇಳುತ್ತಿದ್ದೇವೆ. ಆದರೆ, ನಮ್ಮ ಬೇಡಿಕೆಗಳಿಗೆ ಯಾರೂ ಸ್ಪಂದಿಸುತ್ತಿಲ್ಲ’ ಎಂದು ಕಲ್ಲಹಳ್ಳಿ ಚಿತಾಗಾರದ ಸೌರಿ ರಾಜ ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

ಸ್ಮಶಾನದಲ್ಲಿ ಗುಂಡಿ ತೋಡುವ ಕಾರ್ಯದಲ್ಲಿ ನಿರತರಾಗಿರುವ ಸೌರಿ ರಾಜ

‘ನಾಲ್ಕು ತಲೆಮಾರುಗಳಿಂದಲೂ ಸ್ಮಶಾನದಲ್ಲಿರುವ ಮನೆಗಳಲ್ಲೇ ವಾಸವಿದ್ದೇವೆ. ಮಳೆಗಾಲದಲ್ಲಿ ಇವು ಸೋರುತ್ತವೆ. ಮನೆಯೊಳಗೆ ನೀರು ನುಗ್ಗುತ್ತದೆ. ಪೋಸ್ಟ್ ಮ್ಯಾನ್ ನಮ್ಮ ಮನೆಯ ಹತ್ತಿರವೂ ಸುಳಿಯುವುದಿಲ್ಲ. ನಮ್ಮ ಹೆಸರಿಗೆ ಪತ್ರ ಬಂದಿದ್ದರೆ ಅದನ್ನು ಸಮೀಪದ ಅಂಗಡಿಯವರ ಬಳಿ ಕೊಟ್ಟು ಹೋಗುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೂ ತುಂಬಾ ತೊಂದರೆಯಾಗುತ್ತಿದೆ. ನೆಟ್‌ವರ್ಕ್ ಸಮಸ್ಯೆಯಿಂದ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಆಗುತ್ತಿಲ್ಲ. ಮನೆ ಪಾಠಕ್ಕೆ ಹೋದರೆ ಅಲ್ಲೂ ಸೇರಿಸಿಕೊಳ್ಳುವುದಿಲ್ಲ. ಸ್ಮಶಾನದ ಹೊರಭಾಗದಲ್ಲಿ ವಸತಿ ವ್ಯವಸ್ಥೆ ಮಾಡಿಕೊಟ್ಟರೆ ಅನುಕೂಲ’ ಎಂದರು.

‘ಮಕ್ಕಳ ಭವಿಷ್ಯಕ್ಕೆ ಕತ್ತಲೆ ಆವರಿಸುತ್ತಿದೆ. ಸಿಗುವ ಸಂಬಳದಲ್ಲಿ ಅವರನ್ನು ಓದಿಸುವುದು ಕಷ್ಟ. ಹೀಗಿರುವಾಗ ಬಾಡಿಗೆಗೆ ಮನೆ ಪಡೆಯುವುದು ದೂರದ ಮಾತು. ಒಂದೊಮ್ಮೆ ಬಾಡಿಗೆಗಾಗಿ ಮನೆ ಕೇಳಲು ಹೋದರೆ ಎಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದು ವಿಚಾರಿಸುತ್ತಾರೆ. ಸ್ಮಶಾನ ಕಾರ್ಮಿಕರು ಎಂಬುದು ಗೊತ್ತಾದ ಕೂಡಲೇ ಮನೆ ಖಾಲಿ ಇಲ್ಲ ಹೋಗಿ ಅಂತಾರೆ. ಹೀಗೆ ನಾನಾ ಬಗೆಯ ಅವಮಾನಗಳನ್ನೂ ಎದುರಿಸುತ್ತಿದ್ದೇವೆ’ ಎಂದು ಹೆಸರು ಹೇಳಲಿಚ್ಛಿಸದ ಕಾರ್ಮಿಕರೊಬ್ಬರು ನೋವು ತೋಡಿಕೊಂಡರು.

‘ನಮ್ಮ ಮನೆಯಲ್ಲಿ ನೀರು ಸಹ ಕುಡಿಯಲ್ಲ’

‘ಸ್ನೇಹಿತರನ್ನು ಮನೆಗೆ ಕರೆಯಬೇಕು. ಅವರೊಂದಿಗೆ ಸಂತಸದಿಂದ ಸಮಯ ಕಳೆಯಬೇಕು ಎಂಬ ಆಸೆಯೇನೊ ಇದೆ. ಆದರೆ, ಅವರ್‍ಯಾರೂ ಬರುವುದಿಲ್ಲ. ಅಪ್ಪಿ ತಪ್ಪಿ ಬಂದರೂ ಒಂದು ಲೋಟ ನೀರು ಕುಡಿಯುವುದಕ್ಕೂ ಹಿಂದೆ ಮುಂದೆ ನೋಡುತ್ತಾರೆ. ನಾವೂ ಮನುಷ್ಯರಲ್ಲವೇ. ನಮ್ಮನ್ನೇಕೆ ಅಷ್ಟು ಕೀಳಾಗಿ ಕಾಣುತ್ತಾರೆ’ ಎಂದು ಕಲ್ಲಹಳ್ಳಿ ನಿವಾಸಿ ಸತ್ಯ ಪ್ರಶ್ನಿಸಿದರು.

‘ನಮ್ಮನ್ನು ಮದುವೆಯಾಗೋಕೆ ಹುಡುಗರು ಹಿಂದೇಟು ಹಾಕುತ್ತಾರೆ. ಸ್ಮಶಾನದಿಂದ ಹೊರಗೆ ಮನೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎನ್ನುತ್ತಾರೆ. ಅಭಿಪ್ರಾಯ ತಿಳಿಸುವುದಾಗಿ ಹೇಳಿ ಹೋಗುವ ಕೆಲವರು ಬಳಿಕ ತಿರುಗಿಯೂ ನೋಡುವುದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಹೆಣಗಳನ್ನು ಸುಡುವುದು, ಸತ್ತವರ ಅಂತ್ಯಕ್ರಿಯೆ ನೆರವೇರಿಸುವುದು ಪುಣ್ಯದ ಕೆಲಸ. ಆ ಸೌಭಾಗ್ಯವನ್ನು ಭಗವಂತ ನಮಗೆ ಕರುಣಿಸಿದ್ದಾನೆ. ಅಷ್ಟೇ ಸಾಕು’ ಎಂದರು.

ಬೇಡಿಕೆ ಈಡೇರದಿದ್ದರೆ ಪ್ರತಿಭಟನೆ

‘ಕೇಂದ್ರ ಮಾಹಿತಿ ತಂತ್ರಜ್ಞಾನ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಕೆಲ ದಿನಗಳ ಹಿಂದೆ ಮನೆಗೆ ಭೇಟಿ ನೀಡಿ ನಮ್ಮ ಕಾರ್ಯವನ್ನು ಶ್ಲಾಘಿಸಿದ್ದಾರೆ. ನಮ್ಮ ಬೇಡಿಕೆ ಈಡೇರಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಸೂಚಿಸಿದ್ದಾರೆ. ಇದರಿಂದ ಖುಷಿಯಾಗಿದೆ’ ಎಂದು ಸೌರಿ ರಾಜ ಹೇಳಿದರು.

‘ಬೇಡಿಕೆ ಈಡೇರದಿದ್ದರೆ ಬೆಂಗಳೂರಿನ ಎಲ್ಲಾ ಚಿತಾಗಾರಗಳಲ್ಲೂ ಒಂದು ದಿನದ ಮಟ್ಟಿಗೆ ಕೆಲಸ ಸ್ಥಗಿತಗೊಳಿಸಿ ಪ್ರತಿಭಟಿಸುವುದು ಅನಿವಾರ್ಯ’ ಎಂದು ಎಚ್ಚರಿಸಿದರು.

ಪಶು ವಿ.ವಿ ಜಾಗದಲ್ಲಿ ಪುಷ್ಪ ಮಾರುಕಟ್ಟೆಗೆ 10 ಎಕರೆ

ಬೆಂಗಳೂರು: ರಾಜ್ಯದ ರೈತರು ಬೆಳೆದ ಹೂವುಗಳ ಮಾರಾಟಕ್ಕಾಗಿ ಮಾರುಕಟ್ಟೆ ನಿರ್ಮಿಸಲು ಹೆಬ್ಬಾಳದಲ್ಲಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಸೇರಿದ ಜಾಗದಲ್ಲಿ 10 ಎಕರೆ ಜಾಗವನ್ನು ಗುತ್ತಿಗೆ ಆಧಾರದಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸುವ ಸಂಬಂಧ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಕ್ರಮವನ್ನು ದಕ್ಷಿಣ ಭಾರತ ಪುಷ್ಪ ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್ ಸ್ವಾಗತಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಹಲವು ವರ್ಷಗಳಿಂದ ರಾಜ್ಯದ ರೈತರು ಬೆಳೆದ ಹೂವುಗಳನ್ನು ಮಾರಾಟ ಮಾಡಲು ಮಾರುಕಟ್ಟೆ ವ್ಯವಸ್ಥೆ ಇರಲಿಲ್ಲ. ಕೆ.ಆರ್.ಮಾರುಕಟ್ಟೆಯಲ್ಲಿ ಸರಿಯಾದ ಜಾಗವಿಲ್ಲದೆ ಇಕ್ಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು. ಆದ್ದರಿಂದ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನಲ್ಲಿ ಲಭ್ಯವಿರುವ ಜಾಗ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆವು’ ಎಂದು ಹೇಳಿದ್ದಾರೆ.

ರಾಜ್ಯ ಸರ್ಕಾರ 2021–22ನೇ ಸಾಲಿನ ಆಯವ್ಯಯದಲ್ಲಿ ಪುಷ್ಪ ಮಾರುಕಟ್ಟೆ ಸ್ಥಾಪನೆ ವಿಚಾರ ಸರ್ಕಾರ ಘೋಷಣೆ ಮಾಡಿತ್ತು. ಆದರೆ, ಅದಕ್ಕೆ ಪೂರಕ ಕೆಲಸಗಳು ಆಗಿರಲಿಲ್ಲ. ಇದೀಗ ದಿಟ್ಟ ಕ್ರಮ ತೆಗೆದುಕೊಂಡಿದೆ ಎಂದು ದಕ್ಷಿಣ ಭಾರತದ ಪುಷ್ಪ ಬೆಳೆಗಾರರ ಸಂಘದ ನಿರ್ದೇಶಕ ಶ್ರೀಕಾಂತ್ ಬೊಲ್ಲಂಪಲ್ಲಿ ಹೇಳಿದ್ದಾರೆ.

ನೈಸ್ ರಸ್ತೆಯ ಬಳಿ ಮಕ್ಕಳು ಸೈಕಲ್ ವೀಲಿಂಗ್ ಮಾಡುತ್ತಿರುವ ದೃಶ್ಯ ಭಾನುವಾರ ಕಂಡುಬಂತು ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

17 ಐಷಾರಾಮಿ ಕಾರುಗಳ ಜಪ್ತಿ

ಬೆಂಗಳೂರು: ಬಾಲಿವುಡ್ ನಟರೊಬ್ಬರಿಗೆ ಸೇರಿದೆ ಎನ್ನಲಾದ ರೋಲ್ಸ್ ರಾಯ್ಸ್ ಹಾಗೂ ಇತರ 16 ಐಷಾರಾಮಿ ಕಾರುಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಭಾನುವಾರ ಜಪ್ತಿ ಮಾಡಿದ್ದಾರೆ.

ನಗರದ ಯು.ಬಿ.ಸಿಟಿ ಸಮೀಪ ಈ ಕಾರುಗಳನ್ನು ನಿಲುಗಡೆ ಮಾಡಲಾಗಿತ್ತು. ಅಧಿಕಾರಿಗಳು ಪರಿಶೀಲಿಸಿದಾಗ ಸೂಕ್ತ ದಾಖಲೆಗಳು ಇಲ್ಲದಿರುವುದು ಗೊತ್ತಾಗಿದೆ. ಹೀಗಾಗಿ ಇವುಗಳನ್ನು ವಶಕ್ಕೆ ಪಡೆಯಲಾಗಿದೆ. ರೋಲ್ಸ್ ರಾಯ್ಸ್ ಕಾರು ಮಹಾರಾಷ್ಟ್ರದಲ್ಲಿ ನೋಂದಣಿಯಾಗಿರುವುದು ಪರಿಶೀಲನೆ ವೇಳೆ ತಿಳಿದುಬಂದಿದೆ.

‘ಕಾರುಗಳ ಚಾಲಕರನ್ನು ಕರೆದು ವಿಚಾರಿಸಿದಾಗ ಅವರ ಬಳಿ ಸೂಕ್ತ ದಾಖಲೆಗಳು ಇರಲಿಲ್ಲ. ಈ ಕಾರುಗಳು ಯಾರಿಗೆ ಸೇರಿವೆ ಎಂಬುದೂ ಗೊತ್ತಿಲ್ಲ. ಹೀಗಾಗಿ ಅವುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಾರಿಗೆ ಇಲಾಖೆ ಆಯುಕ್ತ ಎನ್.ಶಿವಕುಮಾರ್ ತಿಳಿಸಿದ್ದಾರೆ.

ಅಂಬರ್‌ಗ್ರೀಸ್ ಜಪ್ತಿ

ಬೆಂಗಳೂರು: ಸುಗಂಧ ದ್ರವ್ಯ ಹಾಗೂ ಡ್ರಗ್ಸ್ ತಯಾರಿಕೆಗೆ ಬಳಸುವ ತಿಮಿಂಗಿಲಿನ ವಾಂತಿಯನ್ನು (ಅಂಬರ್‌ಗ್ರೀಸ್) ಅಕ್ರಮವಾಗಿ ಮಾರಲು ಯತ್ನಿಸುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚೆನ್ನೈ ನಿವಾಸಿಯಾದ ಆರೋಪಿ, ಸಹಚರನ ಜೊತೆ ಅಂಬರ್‌ಗ್ರೀಸ್ ತೆಗೆದುಕೊಂಡು ನಗರಕ್ಕೆ ಬಂದಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ. ಸಹಚರ ತಪ್ಪಿಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಕೋವಿಡ್ ಸೋಂಕು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕೆ

‘ಸರ್ಕಾರದಿಂದ ನಿರೀಕ್ಷೆ ಮಾಡುವಂತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್‌ನಿಂದ ಮೃತಪಟ್ಟವರ ಕುಟುಂಬ ಅಥವಾ ಬದುಕುಳಿದು ಸಂಕಷ್ಟ ಅನುಭವಿಸುತ್ತಿರುವವರು ರಾಜ್ಯ ಸರ್ಕಾರದಿಂದ ಯಾವುದನ್ನೂ ನಿರೀಕ್ಷೆ ಮಾಡುವಂತಿಲ್ಲ. ಈ ಸರ್ಕಾರ ಯಾರ ನೆರವಿಗೂ ಇಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದರು.

ಕೊರೊನಾ ವಾರಿಯರ್ಸ್‌ಗಳಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ನೇತೃತ್ವದಲ್ಲಿ ಭಾನುವಾರ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಕೆಲವರು ಪಕ್ಷ, ಅಧಿಕಾರ ಆಸೆ ಇಲ್ಲದೆ ವಾರಿಯರ್ಸ್‌ಗಳಾಗಿ ಕೆಲಸ ಮಾಡಿದ್ದಾರೆ. ಇನ್ನೊಬ್ಬರಿಗೆ ನೇರವಾಗಿ ಮಾನವೀಯ ಧರ್ಮ ಉಳಿಸಿದ್ದಾರೆ. ಅಂಥವರಿಗೆ ನಿಜವಾದ ಗೌರವ ಸಲ್ಲಬೇಕು’ ಎಂದರು.

‘ಕೋವಿಡ್‌ನಿಂದ ರಾಜ್ಯದಲ್ಲಿ 3 ಲಕ್ಷಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಆದರೆ, ಪರಿಹಾರ ನೀಡಬೇಕಾಗುತ್ತದೆ ಎಂದು ಕೇವಲ 37 ಸಾವಿರ ಜನ ಸತ್ತಿದ್ದಾರೆ ಎಂದು ತೋರಿಸುತ್ತಿದ್ದಾರೆ. ನಾವು ಪಕ್ಷದ ವತಿಯಿಂದ ಡೆತ್ ಆಡಿಟ್ ಮಾಡಿಸಿ, ಮಾಹಿತಿ ಪಡೆದು ಮೃತರ ಕುಟುಂಬಗಳಿಗೆ ಪರಿಹಾರ ಕೊಡಿಸಲು ಅರ್ಜಿ ಹಾಕಿಸುತ್ತಿದ್ದೇವೆ’ ಎಂದರು.

ಸಲೀಂ ಅಹ್ಮದ್ ಮಾತನಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ನೇತೃತ್ವದಲ್ಲಿ ಭಾನುವಾರ ನಡೆದ ಅಭಿನಂದನಾ ಸಮಾರಂಭದಲ್ಲಿ 52 ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ವೈಯಕ್ತಿಕವಾಗಿ ಸೇವೆ ಮಾಡಿದ 76 ಕೊರೊನಾ ವಾರಿಯರ್ಸ್‌ಗಳನ್ನು ಸನ್ಮಾನಿಸಲಾಯಿತು. ಡಿ.ಕೆ. ಶಿವಕುಮಾರ್ ಇದ್ದರು

‘ಕಾನೂನು ದುರ್ಬಳಕೆ’

‘ವಿನಯ್ ಕುಲಕರ್ಣಿ ಪಕ್ಷದ ಹಿರಿಯ ನಾಯಕ. ಅವರ ಮೇಲೆ ಕೋವಿಡ್ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸಿರುವುದು ಸಂತೋಷ. ಆದರೆ, ಜನಾಶೀರ್ವಾದ ಯಾತ್ರೆ ಮೂಲಕ ಕೋವಿಡ್ ನಿಯಮ ಉಲ್ಲಂಘಿಸಿರುವ ಕೇಂದ್ರ ಸಚಿವರ ವಿರುದ್ಧ ಯಾಕೆ ಪ್ರಕರಣ ದಾಖಲಿಸಿಲ್ಲ. ಸರ್ಕಾರ ತನಗೆ ಬೇಕಾದ ರೀತಿ ಕಾನೂನು ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಡಿ.ಕೆ. ಶಿವಕುಮಾರ್ ಕಿಡಿಕಾರಿದರು. ಶಾಸಕ ಜಮೀರ್ ಅವರ ಬಗ್ಗೆ ಕೇಳಿದ ಪ್ರಶ್ನೆಗೆ, 'ಇ.ಡಿ ದಾಳಿ ವಿಚಾರವಾಗಿ ಜಮೀರ್ ಸ್ಪಷ್ಟನೆ ನೀಡಿದ್ದಾರೆ. ನಿರಪರಾಧಿಗಳಿಗೆ, ರಾಜಕೀಯ ದ್ವೇಷದ ದಾಳಿಗೆ ಒಳಗಾದವರಿಗೆ ನಾವು ಸ್ಪಂದಿಸಬೇಕು. ಅದನ್ನು ಮಾಡುತ್ತೇವೆ’ ಎಂದರು.

52 ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಗೂ ವೈಯಕ್ತಿಕವಾಗಿ ಸೇವೆ ಮಾಡಿದ 76 ವಾರಿಯರ್ಸ್‌ಗಳನ್ನು ಸನ್ಮಾನಿಸಲಾಯಿತು.

ಮೌಲಾನಾ ಸಗೀರ್ ಅಹ್ಮದ್ ರಷಾದಿ, ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್, ಕಿಮ್ಸ್‌ನ ಮಾಜಿ ಪ್ರೊಫೆಸರ್ ಡಾ. ಆಂಜನಪ್ಪ, ಮೌಲಾನಾ ಮಕ್ಸೂದ್ ಇಮ್ರಾನ್ ರಷಾದಿ, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ನಾರಾಯಣ ಸ್ವಾಮಿ, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸಯೀದ್ ಅಹ್ಮದ್, ಕೆಪಿಸಿಸಿ ಮಾಜಿ ಕಾರ್ಯದರ್ಶಿ ಚಾಂದ್ ಪಾಷಾ, ಮೆಹ್ರೋಝ್ ಖಾನ್, ಟಿ.ಎಂ. ಶಹೀದ್ ತೆಕ್ಕಿಲ್ ಇದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.24 ಕೋಟಿ ▲	3.24 ಕೋಟಿ
ಸಕ್ರಿಯ ಪ್ರಕರಣ	1.79 ಕೋಟಿ ▲	3.28 ಲಕ್ಷ ▼
ಗುಣಮುಖ	19.01 ಕೋಟಿ ▲	3.16 ಕೋಟಿ
ಸಾವು	44.42 ಲಕ್ಷ ▲	4.34 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.66 ಲಕ್ಷ ▼	25,320 ▼
ಗುಣಮುಖ	4.76 ಲಕ್ಷ ▼	43,773 ▲
ಸಾವು	8,766 ▼	382 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 28,388 ಬ್ರೆಜಿಲ್ ▼; 90,782 ಅಮೆರಿಕ ▼; 31,965 ಬ್ರಿಟನ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 74.11 ಅಮೆರಿಕ ▲; 13.08 ಬ್ರಿಟನ್ ▼; 6.36 ಇರಾನ್ ▼

(ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.35 ಲಕ್ಷ ಮಹಾರಾಷ್ಟ್ರ; 34,709 ತಮಿಳುನಾಡು ▲; 25,079 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 64.24 ಮಹಾರಾಷ್ಟ್ರ ▲; 38.14 ಕೇರಳ ▲; 26.00 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

16 ಮನೆಗಳಲ್ಲಿ ಕಳ್ಳತನ: ಬಂಧನ

ಬೆಂಗಳೂರು: ನಗರದ 16 ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಆಗ್ನೇಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ವಿವಿಧ ಠಾಣೆಗಳ ವ್ಯಾಪಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳನ್ನು ಸುದ್ದಗುಂಟೆಪಾಳ್ಯ ಹಾಗೂ ಮೈಕೊ ಲೇಔಟ್ ಠಾಣೆ ಪೊಲೀಸರು ಪ್ರತ್ಯೇಕವಾಗಿ ತನಿಖೆ ಕೈಗೊಂಡು ಭೇದಿಸಿದ್ದಾರೆ. ಆರೋಪಿಗಳಿಂದ ₹ 58 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 1.50 ಲಕ್ಷ ಮೌಲ್ಯದ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಅಂಗಳದಲ್ಲಿ ರಂಗೋಲಿ ಹಾಕಿರದ ಹಾಗೂ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಅಂಥ ಮನೆಗಳ ಬಾಗಿಲು ಮುರಿದು ಹಾಗೂ ನಕಲಿ ಕೀ ಬಳಸಿ ಬಾಗಿಲು ತೆರೆದು ಕಳ್ಳತನ ಮಾಡುತ್ತಿದ್ದರು.’

‘ಜನಾಶೀರ್ವಾದ ಯಾತ್ರೆಗೆ ಆಕ್ಷೇಪ’

ಎಚ್.ವಿಶ್ವನಾಥ್

ಮೈಸೂರು: ‘ಎಲ್ಲಾ ರಾಜಕೀಯ ಸಭೆ, ಮೆರವಣಿಗೆಗಳನ್ನು ನಿಲ್ಲಿಸಬೇಕು. ಕೋವಿಡ್ ಹರಡಲು ಇದೇ ಪ್ರಮುಖ ಕಾರಣ’ ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಅವರು ತಮ್ಮದೇ ಪಕ್ಷದ ಜನಾಶೀರ್ವಾದ ಯಾತ್ರೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಕೋವಿಡ್ ಆತಂಕ ದೂರವಾಗಿಲ್ಲ. ಇಂತಹ ಸಮಯದಲ್ಲಿ ಜನರನ್ನು ಗುಂಪು ಸೇರಿಸುವ ಕಾರ್ಯಕ್ರಮ ಆಯೋಜಿಸಬಾರದು. ಶಾಲೆ, ಕಾಲೇಜು ಆರಂಭವಾದರೆ ಕೋವಿಡ್ ಹರಡಲ್ಲ. ರಾಜಕೀಯ ಸಮಾರಂಭಗಳೇ ಸೋಂಕು ಹರಡಲು ಪ್ರಮುಖ ಕಾರಣ’ ಎಂದು ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

ದಸರಾ ಪ್ರಾಧಿಕಾರ ಏಕಿಲ್ಲ?: ‘ಜಾತಿಗೊಂದರಂತೆ ಪ್ರಾಧಿಕಾರ ರಚಿಸುವ ಸರ್ಕಾರ, ದಸರಾ ಪ್ರಾಧಿಕಾರ ರಚಿಸಲು ಮೀನ ಮೇಷ ಎಣಿಸುತ್ತಿರುವುದು ಏಕೆ? ಈ ಬಗ್ಗೆ ಸರ್ಕಾರದ ಮೇಲೆ ಹಲವು ವರ್ಷಗಳಿಂದ ಒತ್ತಡ ಹೇರಿದರೂ ಪ್ರಯೋಜನ ಆಗಿಲ್ಲ. ಪ್ರಾಧಿಕಾರ ರಚನೆಯ ಬಳಿಕವೇ ಈ ಬಾರಿ ನಾಡಹಬ್ಬಕ್ಕೆ ತಯಾರಿ ನಡೆಯಲಿ’ ಎಂದು ಒತ್ತಾಯಿಸಿದರು.

ಪ್ರತಾಪಸಿಂಹ ಕೊಡುಗೆ ಅಲ್ಲ: ‘ಮೈಸೂರು– ಬೆಂಗಳೂರು ದಶಪಥ ಯೋಜನೆ ನಿಮ್ಮದಲ್ಲ. ಯಾವಾಗಲೋ ಜಾರಿಯಾದ ಯೋಜನೆಯನ್ನು ನಿಮ್ಮದು ಎಂದರೆ ಹೇಗೆ?’ ಎಂದು ತಮ್ಮದೇ ಪಕ್ಷದ ಸಂಸದ ಪ್ರತಾಪಸಿಂಹ ಅವರನ್ನು ಕುಟುಕಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,35,036 ▲ ಒಟ್ಟು ಸೋಂಕಿತರು (12,34,769 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,762 ▼	12,11,314 ▲	15,959 ▲

ದಿನದ ಏರಿಕೆ

ಹೊಸ ಪ್ರಕರಣ	267 ▲
ಗುಣಮುಖ	300 ▼
ಸಾವು	2 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಬಿಜೆಪಿಯಿಂದ ತಾಲಿಬಾನ್ ಸಂಸ್ಕೃತಿ’

ವಿ.ಎಸ್. ಉಗ್ರಪ್ಪ

ಚಿತ್ರದುರ್ಗ: ‘ರಾಜ್ಯದಲ್ಲಿ ಬಿಜೆಪಿ ನಾಯಕರಿಂದ ತಾಲಿಬಾನ್ ಸಂಸ್ಕೃತಿ ಹುಟ್ಟಿಕೊಂಡಿದೆ. ಇದಕ್ಕೆ ಯಾದಗಿರಿ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಆ ಪಕ್ಷದ ಕಾರ್ಯಕರ್ತರು ಗಾಳಿಯಲ್ಲಿ ಹಾರಿಸಿದ ಗುಂಡು ಸಾಕ್ಷಿಯಾಗಿದೆ’ ಎಂದು ಕೆಪಿಸಿಸಿ ವಕ್ತಾರ ವಿ.ಎಸ್. ಉಗ್ರಪ್ಪ ವಾಗ್ದಾಳಿ ನಡೆಸಿದರು.

‘ಸಾರ್ವಜನಿಕ ಸ್ಥಳದಲ್ಲಿ ಬಿಜೆಪಿ ಕಾರ್ಯಕರ್ತರು ನಾಡಬಂದೂಕು ಪ್ರದರ್ಶಿಸಿ, ಗಾಳಿಯಲ್ಲಿ ಹಾರಿಸಿದ್ದಾರೆ. ಇದನ್ನು ತಡೆಯುವ ವಿಚಾರದಲ್ಲಿ ಗೃಹ ಸಚಿವರು, ಅಲ್ಲಿನ ಪೊಲೀಸರು ವಿಫಲರಾಗಿದ್ದಾರೆ’ ಎಂದು ದೂರಿದರು.

‘ಈ ಪ್ರಕರಣವನ್ನು ಕೇಂದ್ರದ ಸಚಿವರು ಸಂಸ್ಕೃತಿ ಎನ್ನುತ್ತಾರೆ. ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಅತಿ ಸಂತೋಷವಾದಾಗ ನಮ್ಮ ಕಡೆ ಜನ ಈ ರೀತಿ ಮಾಡುತ್ತಾರೆ ಎಂದು ಸಮರ್ಥಿಸಿಕೊಂಡಿದ್ದಾರೆ. ಹಾಗಾದರೆ ಕೋಣವನ್ನು ಕಡಿಯುವ, ಈ ಹಿಂದೆಲ್ಲಾ ಬಹುಪತ್ನಿತ್ವದ ಸಂಸ್ಕೃತಿ, ಪರಂಪರೆ ದೇಶದೊಳಗೆ ಇತ್ತು. ಇದಕ್ಕೆ ಸರ್ಕಾರ ಸಮ್ಮತಿ ಸೂಚಿಸುವುದೇ’ ಎಂದು ಪ್ರಶ್ನಿಸಿದರು.

₹ 76.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಮಾದಕ ವಸ್ತು ಸಾಗಣೆ ಹಾಗೂ ಮಾರಾಟ ವಿರುದ್ಧ ಕಾರ್ಯಾಚರಣೆ ನಡೆಸಿರುವ ಆಗ್ನೇಯ ವಿಭಾಗದ ಪೊಲೀಸರು, ₹ 76.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

‘ಹುಳಿಮಾವು ಠಾಣೆ ವ್ಯಾಪ್ತಿಯ ಟಿ. ಜಾನ್ ಕಾಲೇಜು ಬಳಿ ಗಾಂಜಾ ಮಾರುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 61.50 ಲಕ್ಷ ಮೌಲ್ಯದ 102 ಕೆ.ಜಿ 500 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

14 ವಾಹನ ಕದ್ದಿದ್ದವ ಬಂಧನ

ಬೆಂಗಳೂರು: ನಗರದ ಹಲವೆಡೆ ದ್ವಿಚಕ್ರ ವಾಹನ ಕಳವು ಮಾಡಿದ್ದ ಆರೋಪಿಯನ್ನು ಬೇಗೂರು ಪೊಲೀಸರು ಬಂಧಿಸಿದ್ದಾರೆ.

‘ಕದ್ದ ವಾಹನದಲ್ಲಿ ಸುತ್ತಾಡುತ್ತಿದ್ದ ವೇಳೆಯಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 19 ಲಕ್ಷ ಮೌಲ್ಯದ 14 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬನಶಂಕರಿ, ಜೆ.ಪಿ.ನಗರ, ಕುಮಾರಸ್ವಾಮಿ ಲೇಔಟ್, ಪುಟ್ಟೇನಹಳ್ಳಿ, ಹುಳಿಮಾವು, ಗಿರಿನಗರ, ಕೋಣನಕುಂಟೆ, ಮೈಕೊ ಲೇಔಟ್ ಹಾಗೂ ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದ.’ ಎಂದೂ ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಉದ್ಘಾಟನೆ: ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ, 2021–22ನೇ ಸಾಲಿನ ಉನ್ನತ ಶಿಕ್ಷಣದ ಪ್ರವೇಶಾತಿ, ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ, ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣ, ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿದ ರೂವಾರಿಗಳಿಗೆ ಸನ್ಮಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಷ್ಟ್ರೀಯ ಶಿಕ್ಷಣ ನೀತಿ ಉದ್ಘಾಟನೆ: ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ವಿಶೇಷ ಆಹ್ವಾನಿತರು: ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ಎ. ನಾರಾಯಣಸ್ವಾಮಿ, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಸಿ. ನಾಗೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸನ್ಮಾನ: ಕೆ. ಕಸ್ತೂರಿರಂಗನ್, ಎಂ.ಕೆ. ಶ್ರೀಧರ್, ಟಿ.ವಿ. ಕಟ್ಟಿಮನಿ, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ನವೋದ್ಯಮ ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿಗಳು: ಎಂ.ಆರ್. ಜಯರಾಮ್, ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಉಪಸ್ಥಿತಿ: ಬಿ.ಎಸ್. ರಾಮಪ್ರಸಾದ್, ಸಮರ್ಥ ರಾಘವ ನಾಗಭೂಷಣ, ಮುರಳಿಕೃಷ್ಣನ್ ಗೋಪಾಲಕೃಷ್ಣನ್, ಆಯೋಜನೆ ಹಾಗೂ ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂಎಸ್‌ಆರ್ ನಗರ, ಬೆಳಿಗ್ಗೆ 11.30

ಇನ್ಫೊಸಿಸ್ ಒಪಿಡಿ ಬ್ಲಾಕ್ ಹಾಗೂ ವಿವಿಧ ಘಟಕಗಳ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ.ಕೆ. ಸುಧಾಕರ್, ಸುಧಾ ಮೂರ್ತಿ, ತೇಜಸ್ವಿ ಸೂರ್ಯ, ಉದಯ್ ಗರುಡಾಚಾರ್, ರಶ್ಮಿ ಮಹೇಶ್, ಡಾ.ಸಿ. ರಾಮಚಂದ್ರ, ಆಯೋಜನೆ ಹಾಗೂ ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಡಾ.ಎಂ.ಎಚ್. ಮರಿಗೌಡ ರಸ್ತೆ, ಮಧ್ಯಾಹ್ನ 1

‘ದರ್ಪಣ’ ಸಾಕ್ಷ್ಯಚಿತ್ರ ಪ್ರದರ್ಶನ: ‘ವಿಶ್ವನಾಥ್ ಪ್ರಸಾದ್ ತಿವಾರಿ’, ನಿರ್ದೇಶನ: ಅಮರನಾಥ್, ಆಯೋಜನೆ ಮತ್ತು ಸ್ಥಳ: ಸಾಹಿತ್ಯ ಅಕಾಡೆಮಿ, ಸೆಂಟ್ರಲ್ ಕಾಲೇಜು ಆವರಣ, ಸಂಜೆ 5

ನೂತನ ಶಿಕ್ಷಣ ನೀತಿ ಕುರಿತ ಸರಣಿ: ‘ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಸಮಾನ ಅವಕಾಶ’: ಬಿ. ಶ್ರೀಪಾದ ಭಟ್, ಆಯೋಜನೆ: ಸಮುದಾಯ ಕರ್ನಾಟಕ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

MARUTI SUZUKI AUTHORISED DEALERS: BENGALURU: RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, PH: 8884442299. VARUN MOTORS: MALLESHWARAM, HEBBAL, 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. The terms and conditions are subject to change without any prior notice. For more details, please contact your nearest ARENA dealership. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Offers vary across variants. Maruti Suzuki India Limited reserves the right to discontinue offers without notice. Above offers are valid till 31st August, 2021.

'ಜಾತಿ ಗಣತಿ ಬಗ್ಗೆ ಮಾತನಾಡಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಜಾತಿ ಗಣತಿ ವಿಷಯ ಸದ್ಯ ಕೋರ್ಟ್‌ನಲ್ಲಿ ಇರುವುದರಿಂದ ಹೆಚ್ಚು ಮಾತನಾಡುವುದು ಸೂಕ್ತವಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಜಾತಿ ಗಣತಿ ವರದಿಯನ್ನು ಹಿಂದಿನ ಆಯೋಗ ಸರಿ ಪರಿಶೀಲಿಸುತ್ತಿದೆ. ಕೋರ್ಟ್‌ನಲ್ಲಿ ವಿಷಯ ಇರುವುದರಿಂದ ಇತ್ಯರ್ಥಕ್ಕೆ ಕಾಲಾವಕಾಶವಿದೆ. ಆ ಕುರಿತು ವಿರೋಧ ಪಕ್ಷದವರಷ್ಟೇ ಅಲ್ಲ, ಯಾರೂ ಬೇಕಾದರೂ ಪ್ರಧಾನಿ ಅವರನ್ನು ಭೇಟಿ ಆಗಬಹುದು' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಗುಂಡು ಹೊಡೆದರೂ ಸಾರ್ವಜನಿಕ ಗಣೇಶ ಚತುರ್ಥಿ ಆಚರಣೆ ಮಾಡುತ್ತೇವೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಗೆ ಪ್ರತಿಯಾಗಿ, 'ಅವರ ಬಗ್ಗೆ ನಾನೇನು ಹೇಳುವುದಿಲ್ಲ. ಅವರನ್ನೇ ಕೇಳಿ' ಎಂದು ಪ್ರತಿಕ್ರಿಯಿಸಿದರು.

ದಾಖಲೆ ನಿರ್ಮಿಸಿದ ೯ರ ಪೋರ

ಹೊಸಪೇಟೆ (ವಿಜಯನಗರ): ವಿಷ್ಣು ಸಹಸ್ರನಾಮವನ್ನು ಹನ್ನೊಂದು ನಿಮಿಷಗಳಲ್ಲಿ ಹೇಳಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್–2021'ರಲ್ಲಿ ತನ್ನ ಹೆಸರು ಸೇರುವಂತೆ ಮಾಡಿದ್ದಾನೆ ನಗರದ ಬಾಲಕ.

ಕೆ. ತೇಜಸ್

ಇಲ್ಲಿನ ಗೋಕುಲ ನಗರದ 9 ವರ್ಷದ ಪೋರ ಕೆ. ತೇಜಸ್ ದಾಖಲೆ ನಿರ್ಮಿಸಿದಾತ. ನಗರದ ಚೈತನ್ಯ ಟೆಕ್ನೊ ಶಾಲೆಯಲ್ಲಿ 4ನೇ ತರಗತಿಯಲ್ಲಿ ಓದುತ್ತಿರುವ ತೇಜಸ್, ಅನಿಲ್‌ಕುಮಾರ್, ಪದ್ಮಾವತಿ ದಂಪತಿ ಮಗ.

ಬೆಂಗಳೂರಿನ ಚಾಮರಾಜಪೇಟೆಯ ಮನೆಯೊಂದರಲ್ಲಿ ತಮ್ಮನಿಗೆ ಸಹೋದರಿಯರು ರಾಖಿ ಕಟ್ಟುವ ಮೂಲಕ ರಕ್ಷಾ ಬಂಧನ ಹಬ್ಬವನ್ನು ಭಾನುವಾರ ಆಚರಿಸಿದರು – ಪ್ರಜಾವಾಣಿ ಚಿತ್ರ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.18	5,871	5,545
ಹಾರಂಗಿ	2,859	2,857.69	2,412	1,695
ಕಬಿನಿ	2,284	2,283.25	3,500	3,500
ಹೇಮಾವತಿ	2,922	2,919.24	2,805	4,895
ಲಿಂಗನಮಕ್ಕಿ	1,819	1,812.65	7,406	-
ಸೂಪಾ (ಮೀ)	564	554.63	4,283	4,283
ಮಾಣಿ	594.36	585.64	1,258	-
ತುಂಗಭದ್ರಾ	1,633	1,632.99	14,285	13,865
ಮಲಪ್ರಭಾ	2,079.50	2,078	2,045	494
ಘಟಪ್ರಭಾ	2,175	2,175	3,600	3,600
ಭದ್ರಾ	186	185	4,208	4,208
ಆಲಮಟ್ಟಿ (ಮೀ)	519.60	519.60	17,554	17,554
ನಾರಾಯಣಪುರ (ಮೀ)	492.25	491.90	14,000	13,000

* ನೆಲಮಟ್ಟದಿಂದ

ಫಾರಂ ಜಿ: ಆಸಕ್ತಿಯ ಅಭಿವ್ಯಕ್ತಿಗೆ ಆಹ್ವಾನ (EOI)

[ಭಾರತೀಯ ದಿವಾಳಿತನ ಮತ್ತು ದಿವಾಳಿ ಘೋಷಣೆ ಮಂಡಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ವಿಧಾಯಕಗಳು, 2016ರ ವಿಧಾಯಕ 36ಎ(1)ರ ಅಡಿಯಲ್ಲಿ]

ಸಂಬಂಧಪಟ್ಟ ವಿವರಗಳು

1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್
2.	ಸಾಲಗಾರ ಸಂಸ್ಥೆ ರಚನೆಯಾದ ದಿನಾಂಕ	16 ಮಾರ್ಚ್, 2007
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯ ರಚನೆಯಾಗಿದೆ/ ನೋಂದಾವಣೆಯಾಗಿದೆ	ROC- ಬೆಂಗಳೂರು
4.	ಸಾಲಗಾರ ಸಂಸ್ಥೆಯ ಕಾರ್ಪೊರೇಟ್ ಗುರುತಿನ ಸಂಖ್ಯೆ/ ಸೀಮಿತ ಹೊಣೆಗಾರಿಕೆ ಗುರುತಿನ ಸಂಖ್ಯೆ	U85110KA2007PTC068050
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದರೆ) ವಿಳಾಸ	2371/3, ಎಚ್.ಎ.ಎಲ್. ಏರ್ಪೋರ್ಟ್ – ವರ್ತೂರು ಮುಖ್ಯ ರಸ್ತೆ, ಮುನ್ನೆ ಕೊಳಲು, ಮಾರತಹಳ್ಳಿ ಅಂಚೆ, ಬೆಂಗಳೂರು– 560037.
6.	ಸಾಲಗಾರ ಸಂಸ್ಥೆಯ ದಿವಾಳಿತನ ಪ್ರಕ್ರಿಯೆ ಆರಂಭವಾದ ದಿನಾಂಕ	16 ಮಾರ್ಚ್, 2021
7.	ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸಿದ ದಿನಾಂಕ (EOI ಗೆ)	23 ಆಗಸ್ಟ್, 2021
8.	ಸಂಹಿತೆಯ ಕಲಮು 25(2) (ಎಚ್) ಅಡಿಯಲ್ಲಿ ರೆಸಲ್ಯೂಷನ್ ಅಪ್ಲಿಕೆಂಟ್ ಆಗಲು ಇರುವ ಅರ್ಹತೆಗಳನ್ನು ಪಡೆದುಕೊಳ್ಳಲು	rp.yashomati@beleyur.com ಗೆ ಇಮೇಲ್ ಕಳುಹಿಸಿ ವಿವರಗಳನ್ನು ಪಡೆದುಕೊಳ್ಳಬಹುದು
9.	ಕಲಮು 29(ಎ) ಅಡಿಯಲ್ಲಿ ಅನ್ವಯವಾಗುವ ಅನರ್ಹತಾ ಮಾನದಂಡಗಳ ಲಭ್ಯತೆ	ಕಲಮು 29ಎ, ಮತ್ತು ಐ & ಬಿ ಸಂಹಿತೆ 2016 ರ ಅನ್ವಯವಾಗುವ ನಿಬಂಧನೆಗಳ ಅನ್ವಯ. ಐಬಿಬಿಐ ವೆಬ್ ಸೈಟಿನಲ್ಲಿ ಲಭ್ಯ. https://ibbi.gov.in/legal-framework
10.	ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಸ್ವೀಕರಿಸಲು ಕೊನೆಯ ದಿನಾಂಕ	7 ಸೆಪ್ಟೆಂಬರ್, 2021
11	ಸಂಭಾವ್ಯ ಪರಿಹಾರದ ಯೋಜನೆಯ ಅಭ್ಯರ್ಥಿಗಳ ಹಂಗಾಮಿ ಪಟ್ಟಿಯನ್ನು ಪ್ರಕಟಿಸುವ ದಿನಾಂಕ	13 ಸೆಪ್ಟೆಂಬರ್, 2021
12	ಸಂಭಾವ್ಯ ಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಕೊನೆಯ ದಿನಾಂಕ	18 ಸೆಪ್ಟೆಂಬರ್, 2021
13	ಸಂಭಾವ್ಯ ಪರಿಹಾರ ಯೋಜನೆಯ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ	20 ಸೆಪ್ಟೆಂಬರ್, 2021
14	ಮಾಹಿತಿ ಪತ್ರ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ಪರಿಹಾರ ಯೋಜನೆಗಳಿಗೆ ವಿನಂತಿ ಸಲ್ಲಿಸಲು ಸಂಭಾವ್ಯ ಪರಿಹಾರ ಅಭ್ಯರ್ಥಿಗಳಿಗೆ ನೀಡಿರುವ ದಿನಾಂಕ	20 ಸೆಪ್ಟೆಂಬರ್, 2021
15	ಪರಿಹಾರ ಯೋಜನೆಗಾಗಿ ವಿನಂತಿ, ಮೌಲ್ಯಮಾಪನ ಮ್ಯಾಟ್ರಿಕ್ಸ್, ಮಾಹಿತಿ ಪತ್ರ ಮತ್ತು ಇನ್ನೂ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳುವ ಬಗೆ	ಪರಿಹಾರ ವೃತ್ತಿಪರರು, (RP) ಸಾಲಿಗರ ಸಮಿತಿಯು ಪರಿಹಾರ ವೃತ್ತಿಪರರು ಸಾಲಗಾರರ ಸಮಿತಿಯಲ್ಲಿ ಹೇಳಿರುವಂತಹ ಅರ್ಹತಾ ಮಾನದಂಡಗಳ ಪ್ರಕಾರ ಹಾಗೂ ಐ & ಬಿ ಸಂಹಿತಿ 2016ರ ಕಲಮು 29ಎ ಅನ್ವಯ ಅರ್ಹರಾಗಿರುವ ಅಭ್ಯರ್ಥಿಯೊಂದಿಗೆ (ಗಳೊಂದಿಗೆ) ಮಾಹಿತಿ ಪತ್ರ, ಪರಿಹಾರ ಯೋಜನೆಗಾಗಿ ಕೋರಿಕೆ ಮತ್ತು ಮೌಲ್ಯಮಾಪನ ಮ್ಯಾಟಿಕ್ಸ್ ಇವುಗಳನ್ನು ಐ & ಬಿ ಸಂಹಿತಿ 2016ರ ಕಲಮು 29(2) ಅನ್ವಯ ಗೌಪ್ಯತೆಯ ಒಪ್ಪಂದವೊಂದನ್ನು ಪಡೆದುಕೊಂಡು ಹಂಚಿಕೊಳ್ಳುತ್ತಾರೆ.
16	ಪರಿಹಾರ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	20 ಅಕ್ಟೋಬರ್, 2021
17	ಪರಿಹಾರ ಯೋಜನೆಗಳನ್ನು ಪರಿಹಾರ ವೃತ್ತಿಪರರಿಗೆ (RP) ಸಲ್ಲಿಸುವ ವಿಧಾನ	rp.yashomati@beleyur.com ಗೆ ಸಾಫ್ಟ್ ಕಾಪಿ ಮೂಲಕ ಅಥವಾ ಸ್ಪೀಡ್ ಪೋಸ್ಟ್/ರಿಜಿಸ್ಟರ್ಡ್ ಅಂಚೆ ಅಥವಾ ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸಂಖ್ಯೆ 21ರಲ್ಲಿ ಹೇಳಿರುವ ವಿಳಾಸಕ್ಕೆ ಖುದ್ದಾಗಿ ತಲುಪಿಸುವುದು
18	ಪರಿಹಾರ ಯೋಜನೆಯನ್ನು(ಗಳನ್ನು) ತೀರ್ಪುಗಾರ ಪ್ರಾಧಿಕಾರದ ಅನುಮೋದನೆಗಾಗಿ ಕಳುಹಿಸಲು ಅಂದಾಜು ದಿನಾಂಕ	09 ನವೆಂಬರ್, 2021
19	ಪರಿಹಾರ ವೃತ್ತಿಪರರ ಹೆಸರು ಮತ್ತು ನೋಂದಾವಣಿ ಸಂಖ್ಯೆ	ಶ್ರೀ ರವೀಂದ್ರ ಬೆಳೆಯೂರ್ ಐಬಿಬಿಐ/ಐಪಿಎ–001/ಐಪಿ–ಪಿ00189/2017–2018/10368
20	ಮಂಡಲಿಯಲ್ಲಿ ನೋಂದಾಯಿಸಿಕೊಂಡಿರುವಂತೆ (RP) ಪರಿಹಾರ ವೃತ್ತಿಪರರ ಹೆಸರು, ವಿಳಾಸ ಮತ್ತು ಇಮೇಲ್	ಶ್ರೀ ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್: ravi@beleyur.com
21	ಇನ್ನು ಮುಂದೆ ಪತ್ರ ವ್ಯವಹಾರಗಳಿಗೆ ಬಳಸಬೇಕಾದ (RP) ಪರಿಹಾರ ವೃತ್ತಿಪರರ ಹೆಸರು, ವಿಳಾಸ ಮತ್ತು ಇಮೇಲ್	ಶ್ರೀ ರವೀಂದ್ರ ಬೆಳೆಯೂರ್ ಪರಿಹಾರ ವೃತ್ತಿಪರರು, 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011, ದೂರವಾಣಿ: +91 80 2654 0193 ಇಮೇಲ್:rp.yashomati@beleyur.com
22	ಇನ್ನೂ ಹೆಚ್ಚಿನ ಮಾಹಿತಿ ಎಲ್ಲಿ, ಯಾರೊಂದಿಗೆ ಲಭ್ಯವಿವೆ?	ಹೆಚ್ಚಿನ ವಿವರಗಳನ್ನು ಪರಿಹಾರ ವೃತ್ತಿಪರರಿಂದ ಕೋರಿ ಪಡೆದುಕೊಳ್ಳಬಹುದು/ http://www.yashomatihospital.com
23	ನಮೂನೆ ಜಿ ಪ್ರಕಟಗೊಂಡ ದಿನಾಂಕ	23 ಆಗಸ್ಟ್, 2021

ಸಹಿ/–
ರವೀಂದ್ರ ಬೆಳೆಯೂರ್
ಪರಿಹಾರ ವೃತ್ತಿಪರರು
ಯಶೋಮತಿ ಹಾಸ್ಪಿಟಲ್ಸ್ ಪ್ರೈವೇಟ್ ಲಿಮಿಟೆಡ್, ಸಿಐಆರ್‌ಪಿ ಅಡಿಯಲ್ಲಿ

ದಿನಾಂಕ: 21 ಆಗಸ್ಟ್, 2021
ಸ್ಥಳ: ಬೆಂಗಳೂರು

ಪಿಡಬ್ಲ್ಯುಡಿ, ಪಂಚಾಯತ್‌ರಾಜ್ ಇಲಾಖೆಗಳ ಬೇರ್ಪಡಿಸುವ ಪ್ರಕ್ರಿಯೆ

ಅಭಿಮತ ಪಡೆಯಲು ಮತ್ತೆ ಸಭೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳನ್ನು ಬೇರ್ಪಡಿಸುವ ಪ್ರಕ್ರಿಯೆಯ ಭಾಗವಾಗಿ ಈ ಮೂರೂ ಇಲಾಖೆಗಳ ಅಧಿಕಾರಿ, ಸಿಬ್ಬಂದಿಯ ಅಭಿಮತ (ಇಚ್ಛಾ ಪತ್ರ) ಪಡೆದು ವಿಲೀನ ಪೂರ್ಣಗೊಂಡ ಬಳಿಕ ಇದೀಗ ಮತ್ತೆ ಲೋಕೋಪಯೋಗಿ ಇಲಾಖೆಯಿಂದ ಅಭಿಮತ ಪಡೆಯುವ ಬಗ್ಗೆ ಚರ್ಚಿಸಲು ಸೋಮವಾರ (ಆ. 23) ಸಭೆ ಆಯೋಜಿಸಲಾಗಿದೆ. ಇದಕ್ಕೆ ಜಲಸಂಪನ್ಮೂಲ ಇಲಾಖೆಯ ಎಂಜಿನಿಯರ್‌ಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಮೂರೂ ಇಲಾಖೆಗಳನ್ನು ಈಗಾಗಲೇ ನಿಯಮಾನುಸಾರ ಬೇರ್ಪಡಿಸಲಾಗಿದೆ. ಮೂರೂ ಇಲಾಖೆಯಿಂದ ಎಲ್ಲ ವೃಂದದ ಎಂಜಿನಿಯರ್‌ಗಳು ಮತ್ತು ಸಿಬ್ಬಂದಿಯಿಂದ ಆನ್‌ಲೈನ್ ಮೂಲಕ ಎರಡು ಬಾರಿ ಅಭಿಮತ ಪಡೆದು ಇಲಾಖೆಗಳಿಗೆ ವಿಲೀನಗೊಳಿಸಿ, ಅಂತಿಮ ಸೇವಾ ಜ್ಯೇಷ್ಠತಾ ಪಟ್ಟಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಮಾತೃ ಇಲಾಖೆಗೆ 118 ಎಂಜಿನಿಯರ್‌ಗಳು

ಜಲಸಂಪನ್ಮೂಲ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 118 ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳನ್ನು 2021 ಮೇ 27ರಂದು ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಲಾಗಿದೆ. ಇಲಾಖೆಗಳ ಬೇರ್ಪಡಿಸುವಿಕೆಯ ಸಂದರ್ಭದಲ್ಲಿ ಈ ಎಂಜಿನಿಯರ್‌ಗಳು ಜಲಸಂಪನ್ಮೂಲ ಇಲಾಖೆಯಲ್ಲಿಯೇ ಮುಂದುವರಿಯುವುದಾಗಿ ಅಭಿಮತ ಪತ್ರ ಸಲ್ಲಿಸಿದ್ದರು. ಆದರೆ, 'ಈ ಎಂಜಿನಿಯರ್‌ಗಳಿಗೆ ಸ್ಥಳ ನಿಯುಕ್ತಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಹುದ್ದೆಗಳು ಲಭ್ಯ ಇಲ್ಲ. ಹೀಗಾಗಿ, ಇಲಾಖೆಗಳ ಬೇರ್ಪಡಿಸುವಿಕೆ ಪೂರ್ಣಗೊಳ್ಳುವರೆಗೂ ಅವರನ್ನು ಜಲಸಂಪನ್ಮೂಲ ಇಲಾಖೆಯಲ್ಲಿಯೇ ಮುಂದುವರಿಸಬೇಕು' ಎಂದು ಲೋಕೋಪಯೋಗಿ ಸಚಿವರಾಗಿದ್ದ ಸಂದರ್ಭದಲ್ಲಿ ಗೋವಿಂದ ಕಾರಜೋಳ ಅವರು ಅಂದಿನ ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು.

ಅದರಂತೆ ಬಡ್ತಿ ಕೂಡಾ ನೀಡಲಾಗಿದೆ.

'ಯಾವುದೇ ಅಭಿಮತ ಸಲ್ಲಿಸದ ಅಧಿಕಾರಿ, ಸಿಬ್ಬಂದಿಯನ್ನು ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಯಲ್ಲಿಯೇ ಮುಂದುವರಿಸಬೇಕು' ಎಂದು 2020ರ ಸೆ.4 ರಂದು ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ನಡೆದಿದ್ದ ಇಲಾಖಾ ಬೇರ್ಪಡಿಸುವಿಕೆ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೂ, ಇದೀಗ ಮತ್ತೆ ಮೂರೂ ಇಲಾಖೆಗಳ ಅಧಿಕಾರಿಗಳು, ನೌಕರರನ್ನು ಬೇರ್ಪಡಿಸಲು ಸಭೆ ಕರೆಯಲಾಗಿದೆ. ಬೇರ್ಪಡಿಸುವಿಕೆ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಮತ್ತೊಮ್ಮೆ ಅಭಿಮತ ಪಡೆಯಲು ಅವಕಾಶ ನೀಡಬಾರದು' ಎಂದು ಎಂಜಿನಿಯರ್‌ಗಳು ಆಗ್ರಹಿಸಿದ್ದಾರೆ.

'ಈಗಾಗಲೇ ಜಲಸಂಪನ್ಮೂಲ ಇಲಾಖೆಯಲ್ಲಿ ಇಲಾಖಾ ಪದೋನ್ನತಿ ಸಭೆಯಲ್ಲಿ (ಡಿಪಿಸಿ) ತೆಗೆದುಕೊಂಡಿರುವ ತೀರ್ಮಾನದಂತೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಸ್ಥಳ ನಿಯುಕ್ತಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಬೇಕು. ನಿಯಮ 32 ರಡಿ (ತಾತ್ಕಾಲಿಕ) ಬಡ್ತಿ ನೀಡಿರುವ ಎಂಜಿನಿಯರ್‌ಗಳಿಗೆ ನಿಯಮ 42ರಂತೆ (ಶಾಶ್ವತ ಬಡ್ತಿ) ಕ್ರಮಬದ್ಧಗೊಳಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

ಜಲಸಂಪನ್ಮೂಲ ಇಲಾಖೆ ಆರಂಭ ಆದಾಗಿನಿಂದಲೂ ಲೋಕೋಪಯೋಗಿ ಇಲಾಖೆಯಿಂದ ಪ್ರತ್ಯೇಕಿಸಬೇಕು ಎಂಬ ಬೇಡಿಗೆ ಇತ್ತು. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಗೋವಿಂದ ಕಾರಜೋಳ ಅವರು 40 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದರು. ಇದೀಗ ಅವರೇ ಜಲ ಸಂಪನ್ಮೂಲ ಖಾತೆಯನ್ನು ವಹಿಸಿಕೊಂಡಿದ್ದಾರೆ. ಎರಡು ಬಾರಿ ಅಭಿಮತ ಪಡೆದ ಬಳಿಕ ಮತ್ತೆ ಅಭಿಮತ ಪಡೆಯಲು ಅವಕಾಶ ನೀಡದಂತೆ ಸಚಿವರಿಗೆ ಮನವಿ ಸಲ್ಲಿಸಲು ಎಂಜಿನಿಯರ್‌ಗಳ ಸಂಘ ತೀರ್ಮಾನಿಸಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕ ಖರೀದಿಸಿದೆ

ಎಸ್ಸೆಸ್ಸೆಲ್ಸಿ ನಂತರ ಶಿಕ್ಷಣ ಮುಂದುವರಿಸಲು ಆರ್ಥಿಕ ಸಮಸ್ಯೆ ಎದುರಾಗಿತ್ತು. ಶೈಕ್ಷಣಿಕ ನೆರವು ಬಂದಿದ್ದರಿಂದ ಬಹಳ ಖುಷಿಯಾಯಿತು. ಹಣದಿಂದ ಅಗತ್ಯ ಪುಸ್ತಕಗಳನ್ನು ಖರೀದಿಸಿದೆ. ವಾಣಿಜ್ಯ ವಿಭಾಗದಲ್ಲಿ ಶಿಕ್ಷಣ ಮುಂದುವರಿಸಿದ್ದು, ಚಾರ್ಟರ್ಡ್ ಅಕೌಂಟೆಂಟ್ ಆಗುವ ಗುರಿ ಇದೆ.

ಜೆ.ಕೋಕಿಲ, ಬನ್ನೇರುಘಟ್ಟ ರಸ್ತೆ, ಬೆಂಗಳೂರು

ಪುಸ್ತಕ ಖರೀದಿಸಲು ಸಾಧ್ಯವಾಯಿತು

'ಪ್ರಜಾವಾಣಿ' ಸ್ಕಾಲರ್‌ಶಿಪ್‌ನಿಂದ ದ್ವಿತೀಯ ಪಿಯುಸಿ ಪುಸ್ತಕಗಳನ್ನು ಖರೀದಿಸಲು ಅನುಕೂಲವಾಯಿತು. ಆರ್ಥಿಕ ಸಂಕಷ್ಟದಲ್ಲಿ ಇರುವ ನನ್ನಂಥ ವಿದ್ಯಾರ್ಥಿಗೆ ನೆರವು ನೀಡಿರುವ ಪ್ರಜಾವಾಣಿಗೆ ಕೃತಜ್ಞನಾಗಿದ್ದೇನೆ. ಐಎಎಸ್ ಅಧಿಕಾರಿಯುವುದು ನನ್ನ ಗುರಿ. ಅಧಿಕಾರಿಯಾದ ಮೇಲೆ ನಾನೂ ಬಡ ವಿದ್ಯಾರ್ಥಿಗಳಿಗೆ ನೆರವಾಗುವೆ.

ದರ್ಶನ ಕಟ್ಟಿಮನಿ, ಭಾಲ್ಕಿ, ಬೀದರ್ ಜಿಲ್ಲೆ

ಅಧಿವೇಶನದ ಬಳಿಕ ರಾಜ್ಯದಾದ್ಯಂತ ಪ್ರವಾಸ: ದೇವೇಗೌಡ

ನದಿ ಯೋಜನೆಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ, ಮಹದಾಯಿ ಹಾಗೂ ಮೇಕೆದಾಟು ಯೋಜನೆಗಳನ್ನು ಕರ್ನಾಟಕದ ಹಿತಕ್ಕೆ ತಕ್ಕಂತೆ ರೂಪಿಸಲು ಒತ್ತಾಯಿಸಿ ಜಾತ್ಯತೀತ ಜನತಾದಳ (ಜೆಡಿಎಸ್) ಪಕ್ಷದ ವತಿಯಿಂದ ರಾಜ್ಯದಾದ್ಯಂತ ಪಾದಯಾತ್ರೆ ನಡೆಯಲಿದೆ.

'ನದಿ ನೀರು ಯೋಜನೆಗಳಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಈ ನಿಟ್ಟಿನಲ್ಲಿ ಹೋರಾಟ ನಡೆಸಲಿದೆ. ವಿಧಾನಮಂಡಲ ಅಧಿವೇಶನ ಮುಗಿಯುತ್ತಿದ್ದಂತೆ ರಾಜ್ಯದಾದ್ಯಂತ ಪಾದಯಾತ್ರೆ ನಡೆಯಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣದ ನಿಗದಿ ಪ್ರಮಾಣ ಇಳಿಕೆಯಾಗಿದೆ. ಈ ನದಿ ನೀರು ಯೋಜನೆಗಾಗಿ ಅವರ ಪಕ್ಷದ ನಾಯಕರೊಂದಿಗೆ ಮಾತನಾಡುವುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ. ಸಮಸ್ಯೆ ಬಗೆಹರಿಸುವುದಾಗಿಯೂ ಹೇಳಿದ್ದಾರೆ. ಸಮಸ್ಯೆ ಪರಿಹಾರವಾದರೆ ಒಳ್ಳೆಯದು. ಇಲ್ಲದಿದ್ದರೆ ನಮ್ಮ ಹೋರಾಟ ಮುಂದುವರಿಯುತ್ತದೆ' ಎಂದರು.



ಎಚ್.ಡಿ. ದೇವೇಗೌಡ

'ತಮಿಳುನಾಡು ಮಾತು ಕೇಳಿ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ. ಈ ವಿಷಯದಲ್ಲಿ ಬಿಜೆಪಿ ಸರ್ಕಾರದ ಬಗ್ಗೆ ನನಗೆ ಬೇಸರ ಇದೆ' ಎಂದೂ ಅವರು ಹೇಳಿದರು.

'ಮೇಕೆದಾಟು, ಮಹದಾಯಿ ಯೋಜನೆಗಳ ವಿಚಾರದಲ್ಲಿ ನಮಗೆ ನ್ಯಾಯ ಸಿಗಬೇಕು. ಕಾಂಗ್ರೆಸ್–ಬಿಜೆಪಿಗೆ ಇಂತಹ ಹೋರಾಟ ಮಾಡಲು ಆಗುವುದಿಲ್ಲ. ಜೆಡಿಎಸ್‌ನಿಂದಲೇ ಈ ಹೋರಾಟ ನಡೆಯಬೇಕು. ಪಾದಯಾತ್ರೆಗೆ ನಾನು ಚಾಲನೆ ನೀಡುತ್ತೇನೆ. ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಹೋರಾಟ ಮುಂದುವರಿಯಲಿದೆ' ಎಂದರು.

'ಪಾದಯಾತ್ರೆ ಮುಗಿದ ಬಳಿಕ ಪ್ರಧಾನಿ ಬಳಿಗೆ ನಿಯೋಗ ತೆಗೆದುಕೊಂಡು ಹೋಗಿ ಮನವಿ ಪತ್ರ ನೀಡುತ್ತೇವೆ. ಒಂದು ವೇಳೆ ರಾಜ್ಯ ಸರ್ಕಾರವೇ ಪ್ರಧಾನಿ ಬಳಿಗೆ ನಿಯೋಗ ತೆಗೆದುಕೊಂಡು ಹೋಗುವುದಾದರೆ ಅವರ ಜೊತೆಗೆ ನಮ್ಮ ಪಕ್ಷ ಹೋಗಲೂ ಸಿದ್ಧವಿದೆ' ಎಂದರು.

ಹೋರಾಟದಿಂದಲೇ ಅಧಿಕಾರಕ್ಕೆ: 'ರಾಜ್ಯದಲ್ಲಿ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕೆ ಇಲ್ಲ ಎನ್ನುತ್ತಾರೆ. 2023ಕ್ಕೆ ಜೆಡಿಎಸ್ ಇರುವುದೇ ಇಲ್ಲ ಎಂದೂ ಹೇಳುತ್ತಾರೆ. ಹೋರಾಟದ ಮೂಲಕವೇ ಪಕ್ಷದ ಅಸ್ತಿತ್ವ ಉಳಿಸಿಕೊಳ್ಳುತ್ತೇವೆ. 2023 ರಲ್ಲಿ ಅಧಿಕಾರಕ್ಕೆ ಬರುವ ಮೂಲಕ ವಿರೋಧಿಗಳಿಗೆ ಉತ್ತರ ನೀಡುತ್ತೇವೆ' ಎಂದೂ ದೇವೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಅಧಿವೇಶನ– ಅಸಮಾಧಾನ: 'ಸಂಸತ್ ಅಧಿವೇಶನದಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶವೇ ಸಿಗುತ್ತಿಲ್ಲ. ಸಂವಿಧಾನ ತಿದ್ದುಪಡಿ ಮಸೂದೆ ಕುರಿತು ಮೂರು ತಾಸು ಚರ್ಚೆಗೆ ಅವಕಾಶ ನೀಡಿದ್ದು ಬಿಟ್ಟರೆ, ಉಳಿದ ಮಸೂದೆಗಳ ಬಗ್ಗೆ ಚರ್ಚೆಯೇ ನಡೆಯಲಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಚರ್ಚೆಗಿಂತ ಗದ್ದಲವೇ ಮುಖ್ಯವಾಗುತ್ತಿದೆ. ಈ ಸಲದ ಕಲಾಪವೇ ವ್ಯರ್ಥವಾಯಿತು' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಬಾಲಕಿ ಸೇರಿ ಒಂದೇ ಕುಟುಂಬದ ಮೂವರು ನೀರುಪಾಲು

ಬಾಗಲಕೋಟೆ: ಮಲಪ್ರಭಾ ನದಿಯಲ್ಲಿ ಮುಳುಗಿ ಒಂದೇ ಕುಟುಂಬದ ಮೂವರು ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದ ಬಳಿ ಭಾನುವಾರ ನೀರು ಪಾಲಾಗಿದ್ದಾರೆ.

ವಿಶ್ವನಾಥ್ ಮಾವಿನಮರದ (40) ಹಾಗೂ ಅವರ ಅತ್ತಿಗೆ ಶ್ರೀದೇವಿ ಮಾವಿನ ಮರದ (32), ಪುತ್ರಿ ನಂದಿನಿ (12) ನೀರಲ್ಲಿ ಕೊಚ್ಚಿಹೋಗಿದ್ದಾರೆ. ಇವರು ಮೂಲತಃ ಗುಳೇದಗುಡ್ಡ ತಾಲ್ಲೂಕಿನ ಕೋಟೆಕಲ್ ಗ್ರಾಮದವರಾಗಿದ್ದು, ಗದಗ ಜಿಲ್ಲೆಯ ರೋಣದಲ್ಲಿ ವಾಸವಾಗಿದ್ದರು.

ಬಾದಾಮಿಯ ಬನಶಂಕರಿ ದೇವಿ ದೇವಸ್ಥಾನಕ್ಕೆ ತೆರಳಿ ದೇವಿ ದರ್ಶನ ಪಡೆದಿದ್ದರು. ನಂತರ ಶಿವಯೋಗಮಂದಿರಕ್ಕೆ ತೆರಳಿದ್ದರು. ಅಲ್ಲಿ ಉಪಹಾರ ಸೇವಿಸಲು ಮಲಪ್ರಭಾ ನದಿ ದಡದಲ್ಲಿ ಕುಳಿತಿದ್ದರು. ಊಟ ಮಾಡಿ, ಬಾಲಕಿ ನಂದಿನಿ ನದಿಯಲ್ಲಿ ಕೈ ತೊಳೆಯಲು ಹೋಗಿ ಜಾರಿ ನೀರಿಗೆ ಬಿದ್ದಿದ್ದಾಳೆ. ಅವಳನ್ನು ರಕ್ಷಿಸಲು ವಿಶ್ವನಾಥ್ ಹಾಗೂ ಶ್ರೀದೇವಿ ನೀರಿಗೆ ಇಳಿದಿದ್ದಾರೆ ಎನ್ನಲಾಗಿದೆ.

ಸ್ಥಳೀಯ ಈಜುಗಾರರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಹುಡುಕಾಟ ನಡೆಸಿ ವಿಶ್ವನಾಥ್ ಹಾಗೂ ಶ್ರೀದೇವಿ ಅವರ ಶವ ಹೊರಕ್ಕೆ ತೆಗೆದಿದ್ದಾರೆ. ಆದರೆ ಬಾಲಕಿ ನೀರಲ್ಲಿ ಕೊಚ್ಚಿ ಹೋಗಿದ್ದಾಳೆ.

ತಮಿಳುನಾಡಿಗೆ ಬಸ್ ಸಂಚಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಿಂದ ತಮಿಳುನಾಡಿಗೆ ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಸಂಚಾರ ಸೋಮವಾರದಿಂದ (ಆ.23) ಪುನರಾರಂಭವಾಗಲಿದೆ.

ಸೇವೆ ಒದಗಿಸಲು 250 ಬಸ್‌ಗಳು ಸಜ್ಜಾಗಿವೆ. ಕರ್ನಾಟಕದಿಂದ ತಮಿಳುನಾಡಿನ ಹೊಸೂರು, ವೆಲ್ಲೂರು, ತಿರುವಣ್ಣಾಮಲೈ, ವಿಲ್ಲುಪುರ, ಕೊಯಮತ್ತೂರು, ತಿರುನಲ್ಲೂರ್, ತಿರುಚ್ಚಿ, ಮಧುರೈ, ಕುಂಭಕೋಣಂ, ಕಾಂಚಿಪುರಂ ಹಾಗೂ ಊಟಿ ಸೇರಿದಂತೆ ಪ್ರಮುಖ ನಗರಗಳಿಗೆ ಬಸ್‌ಗಳು ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ಹೇಳಿದೆ.

ಕೋವಿಡ್ ನಿರ್ಬಂಧಗಳ ಕಾರಣದಿಂದ ಏ.27ರಿಂದ ತಮಿಳುನಾಡಿಗೆ ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು.

ಮೈಸೂರು: ನಕಲಿ ದಾನಪತ್ರ ಸೃಷ್ಟಿ– ನಾಲ್ವರ ಬಂಧನ

ಮೈಸೂರು: ಸತ್ತ ವ್ಯಕ್ತಿಯ ಹೆಸರಿನಲ್ಲಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನನ್ನು ನಕಲಿ ದಾನಪತ್ರ ಸೃಷ್ಟಿಸಿ ಲಪಟಾಯಿಸಲು ಯತ್ನಿಸಿದ ನಾಲ್ವರನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮೈಸೂರು ತಾಲ್ಲೂಕು ರಮ್ಮನಹಳ್ಳಿ ಗ್ರಾಮ ಸಹಾಯಕ ಸಿದ್ದಯ್ಯ, ಚಿನ್ನಸ್ವಾಮಿ, ಸುಶೀಲಮ್ಮ, ಪತ್ರಬರಹಗಾರ ಮಲ್ಲಹಳ್ಳಿ ಮಂಚಪ್ಪ ಬಂಧಿತರು.

'ತಾಲ್ಲೂಕು ಕಚೇರಿಯಲ್ಲಿ ಖಾತೆ ಬದಲಾವಣೆ ಮಾಡಿಸುವ ಸಂದರ್ಭದಲ್ಲಿ ಗ್ರಾಮದ ಮಂಜುನಾಥ್, ಸಾಮಾಜಿಕ ಕಾರ್ಯಕರ್ತ ಬಿ.ಎನ್.ನಾಗೇಂದ್ರ ಅವರು ಅಕ್ರಮ ನಡೆದಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು. ಈ ಸಂಬಂಧ ನಾಲ್ವರನ್ನು ಗುರುವಾರ (ಆ.19) ಬಂಧಿಸಲಾಗಿದೆ' ಎಂದು ನರಸಿಂಹರಾಜ ಠಾಣೆ ಪೊಲೀಸರು ತಿಳಿಸಿದರು. 'ತಾಲ್ಲೂಕಿನ ಕಸಬಾ ಹೋಬಳಿ ಕೆಸರೆ ಗ್ರಾಮ ಸರ್ವೆ ನಂ.244/2 ರ 4 ಎಕರೆ 4 ಗುಂಟೆ ಜಮೀನು ಎನ್.ಆರ್. ಮೊಹಲ್ಲಾದ ಗಾಣಿಗರ ಬೀದಿ ನಿವಾಸಿ ಎ.ಚೆಲುವರಾಜ್ ಅವರಿಗೆ ಸೇರಿದ್ದಾಗಿದೆ. ಅವರು 1986ರಲ್ಲಿ ಮೃತರಾದರು. ಪಾಳು ಬಿದ್ದಿರುವುದನ್ನು ಗಮನಿಸಿದ ನಾಲ್ವರು ಭೂಮಿ ಕಬಳಿಸಲು ಯತ್ನಿಸಿದ್ದರು. ಆ.ಸೆಲ್ವರಾಜ್ ಎಂದು ಹೆಸರು ಬದಲಾಯಿಸಿ ಅವರು ಲಕ್ಷ್ಮಮ್ಮ ಎಂಬುವರಿಗೆ ದಾನಪತ್ರ ಮಾಡಿದಂತೆ 2019 ರಲ್ಲಿ ದಾಖಲೆ ಸೃಷ್ಟಿಮಾಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಸಹಭಾಗಿತ್ವದ ಒಂದು ಉದ್ಯಮ)
ಇ–ಮೇಲ್: bmrcl@dataone.in ವೆಬ್‌ಸೈಟ್: www.bmrc.co.in
ಸಂ: ಬಿಎಂಆರ್‌ಸಿಎಲ್/ವೈಟ್‌ಫೀಲ್ಡ್, ಹೆಬ್ಬಗೋಡಿ & ಕೊತ್ತನೂರು ಡಿಪೋ/ಎಂ&ಪಿ–ಎಲ್20 ದಿನಾಂಕ: 23.08.2021

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು, **ಬಿಎಂಆರ್‌ಸಿಎಲ್ ಹಂತ-2 ಯೋಜನೆಯ ವೈಟ್‌ಫೀಲ್ಡ್, ಹೆಬ್ಬಗೊಡಿ ಮತ್ತು ಕೊತ್ತನೂರು ಡಿಪೋಗಳಿಗೆ ಸಿಂಕ್ರೊನೈಸ್ ಮಾಡಿದ ಮೊಬೈಲ್ ಲಿಫ್ಟಿಂಗ್ ಜಾಕ್‌ಗಳ ವಿನ್ಯಾಸ, ತಯಾರಿಕೆ, ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಚಾಲನೆಗಾಗಿ** ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್ (ಎಲ್‌ಸಿಬಿ) ಮೂಲಕ ಅರ್ಹ ತಯಾರಕರು ಅಥವಾ ತಯಾರಕರ ಭಾರತೀಯ ಅಂಗಸಂಸ್ಥೆ ಅಥವಾ ಓಇಎಂನ ಅಧಿಕೃತ ಭಾರತೀಯ ತಯಾರಕರ ಏಕೈಕ ಟೆಂಡರ್‌ದಾರರು ಅಥವಾ ಉದ್ಯಮ/ಒಕ್ಕೂಟವಾಗಿ (ಸಮೂಹ) ಏಕ ಹಂತ, ದ್ವಿ ಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳ ಬೆಲೆ (ಹಿಂತಿರುಗಿಸಲಾಗದ) **ರೂ.29500/- (25,000+4500) (ಜಿಎಸ್‌ಟಿ@18%)**. ದಸ್ತಾವೇಜುಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಅವಧಿ: **25.08.2021 ರಿಂದ 15.09.2021 ರ ಮಧ್ಯರಾತ್ರಿವರೆಗೆ.** ಸ್ಪಷ್ಟೀಕರಣ ಕೋರಲು ಕೊನೆಯ ದಿನಾಂಕ: **18.09.2021.** ಬಿಡ್‌ಪೂರ್ವ ಸಭೆ: **22.09.2021.** ಟೆಂಡರ್ ಸಲ್ಲಿಸಲು ದಿನಾಂಕ: **15.10.2021, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **15.10.2021 ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ **www.bmrc.co.in** ಗೆ ಭೇಟಿ ನೀಡಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್

ನಿಧನ ವಾರ್ತೆ

ಶತಾಯುಷಿ ಗುರುವ ಕೊರಗ

ಉಡುಪಿ: ಬುಡಕಟ್ಟು ಕೊರಗ ಸಮುದಾಯದ ಹಿರಿಯ ಕಲಾವಿದ, ಶತಾಯುಷಿ ಗುರುವ ಕೊರಗ (105) ಭಾನುವಾರ ಹಿರಿಯಡಕದ ಗುಡ್ಡೆಯಂಗಡಿಯ ಬಲ್ಲೋಡಿಯಲ್ಲಿ ನಿಧನರಾದರು.

ಮೃತರಿಗೆ ಮೂವರು ಪುತ್ರಿಯರು ಇದ್ದಾರೆ. ಸ್ವತಃ ಡೋಲು ಸಿದ್ಧಪಡಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಗುರುವ ಕೊರಗರು ಡೋಲು ಬಾರಿಸುವಲ್ಲಿಯೂ ನಿಷ್ಣಾತರಾಗಿದ್ದರು. ತುಳುನಾಡಿನ ಜಾನಪದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಕರಾವಳಿಯ ಪ್ರಮುಖ ಕಲಾವಿದರಲ್ಲಿ ಅವರು ಒಬ್ಬರಾಗಿದ್ದರು.

12ನೇ ವಯಸ್ಸಿಗೆ ಡೋಲು ಬಾರಿಸುವುದನ್ನು ಕಲಿತ ಗುರುವರು ಜಾತ್ರೆ, ಉತ್ಸವ, ಕಂಬಳ, ಕೋಲ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಡೋಲು ಬಾರಿಸುತ್ತಿದ್ದರು. ಶತಾಯುಷಿಯಾಗಿದ್ದರೂ ಡೋಲು ಬಾರಿಸುವ ಉತ್ಸಾಹ ಕುಂದಿರಲಿಲ್ಲ. ಗುರುವ ಕೊರಗ ಅವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ತುಳು ಜಾನಪದ ಗೌರವ ಪ್ರಶಸ್ತಿಗಳು ಬಂದಿವೆ.

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು, ಸಂತೇಮರಹಳ್ಳಿ ಹೊಬಳಿ, ಕುದೇರು (ಅಂಚೆ) ಚಾಮರಾಜನಗರ – 571 316
[PHONE NO. 08226- 234848, FAX NO. 08226-234040 E-mail: admnchamul@gmail.com]
ಸಂಖ್ಯೆ:ಚಾಮುಲ್/ಆಡಳಿತ/ಪ್ಯಾಕಿಂಗ್/ಇ–ಟೆಂಡರ್/02/2021 ದಿನಾಂಕ: 23.08.2021

ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಕುದೇರು ಡೇರಿಯಲ್ಲಿ ಹಾಲು, ಮೊಸರು, ಮಜ್ಜಿಗೆ, ಲಸ್ಸಿ, ಎಸ್.ಎಂ.ಪಿ/ಡಬ್ಲ್ಯೂ.ಎಂ.ಪಿ ಪ್ಯಾಕಿಂಗ್, ಕ್ರೇಟ್ ವಾಷಿಂಗ್, ಶೈತ್ಯಾಗಾರದ ಕ್ಲೀನಿಂಗ್ ಮತ್ತು ಹಾಲಿನ ಉತ್ಪನ್ನಗಳ ರವಾನೆಯ ಕೆಲಸಗಳಿಗೆ ದ್ವೈವಾರ್ಷಿಕ ಅವಧಿಗೆ ಅರ್ಹ ಗುತ್ತಿಗೆದಾರರಿಂದ ESI ಮತ್ತು PF ಕೋಡ್ ನಂ. ಹೊಂದಿರುವ, ಸೇವಾ ತೆರಿಗೆ, ವೃತ್ತಿ ತೆರಿಗೆ, ಆದಾಯ ತೆರಿಗೆ ನೊಂದಣಿಯಾದ ಹಾಗೂ ಕಾರ್ಮಿಕ ಇಲಾಖೆಯಿಂದ ಪರವಾನಗಿ ಹೊಂದಿರುವ ಮತ್ತು e-procurement portal of Govt.of Karnaraka ಇಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ವಿವರ ಮತ್ತು ವೇಳಾ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

1) ತಾಂತ್ರಿಕ ಟೆಂಡರ್ ದಸ್ತಾವೇಜು (Access to E-Tender) ಲಭ್ಯತೆ: ದಿನಾಂಕ 23.08.2021 ರಿಂದ
2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 22.09.2021 ರ 16.00 ಘಂಟೆಯವರೆಗೆ.
3) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ / ಸಮಯ: 24.09.2021 ರಂದು 11.00 ಘಂಟೆಗೆ.
4) ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ / ಸಮಯ: 27.09.2021 ರಂದು 16.00 ಘಂಟೆಗೆ.
5) ಟೆಂಡರ್ ತೆರೆಯುವ ಸ್ಥಳ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ; ಕುದೇರು, ಸಂತೇಮರಳ್ಳಿ ಹೋಬಳಿ, ಕುದೇರು (ಅಂಚೆ), ಚಾಮರಾಜನಗರ–571316.

ಟೆಂಡರ್ ಸಂಬಂಧ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://eproc.karnataka.govt.in ನಲ್ಲಿ ಪಡೆಯಲು/ಪರಿಶೀಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ)–7760968421 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಒಳನೋಟ: ಭೂಗಳ್ಳರ ಜಾಲ

ಬೆಂಗಳೂರು: 'ಭೂಕಬಳಿಕೆಗೆ 'ರಾಜಿ ಡಿಕ್ರಿ' ಕೈಚಳಕ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಆ.22) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ

ನಕಲಿ ದಾಖಲೆಗಳನ್ನು ಸೃಷ್ಟಿಸಿ, ಭೂಮಿ ಕೊಳ್ಳೆ ಹೊಡೆಯುವುದನ್ನು ತಡೆಯಬೇಕಿದೆ. ಆದರೆ, ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್ ಸೇರಿದಂತೆ ಅರೆನ್ಯಾಯಿಕ ಅಧಿಕಾರಿಗಳು ನೀಡುವ ಆದೇಶಗಳು ಭೂ ಅಕ್ರಮಗಳಿಗೆ ಅನುವು ಮಾಡಿಕೊಡುತ್ತಿವೆ. ನ್ಯಾಯಾಲಯಗಳು ಕೂಡ ಭ್ರಷ್ಟಾಚಾರದ ನೆಲೆಯಾಗುತ್ತಿರುವುದು ಭೂಗಳ್ಳರಿಗೆ ಹುಲ್ಲುಗಾವಲಿನಂತೆ ಆಗಿದೆ. ಇದಕ್ಕೆ ಕಡಿವಾಣ ಹಾಕಲು ಎಲ್ಲ ದಾಖಲೆಗಳನ್ನು ಸ್ಕ್ಯಾನ್ ಮಾಡಿಸಿ, ಡಿಜಿಟಲೀಕರಣ ಮಾಡಬೇಕು.

ನವೀನ್, ಮೈಸೂರು

ರಕ್ಷಕರೇ ಭಕ್ಷಕರಾಗಿದ್ದಾರೆ

ಬೇಲಿಯೇ ಎದ್ದು ಹೊಲ ಮೇಯ್ದಂತೆ ಎನ್ನುವಂತೆ ರಕ್ಷಕರೇ ಭಕ್ಷಕರಾಗಿ ಭೂಗಳ್ಳತನಕ್ಕೆ ಕಾರಣರಾಗುತ್ತಿರುವುದು ನಿಜಕ್ಕೂ ಶೋಚನೀಯ. ಸರ್ಕಾರಿ ನೌಕರರೇ ಅಕ್ರಮವನ್ನು ಪೋಷಿಸಿ, ಬೆಳೆಸುತ್ತಿರುವುದು ವಿಪರ್ಯಾಸ. ಕೆರೆಗಳು ಹಾಗೂ ಗೋಮಾಳಗಳು ಭೂಕಬಳಿಕೆದಾರರ ಪಾಲಾಗುತ್ತಿವೆ. ಒತ್ತುವರಿ ತೆರವಿಗೆ ಸರ್ಕಾರವು ಕಠಿಣ ಕ್ರಮ ಕೈಗೊಳ್ಳಬೇಕು.

ಜಿ.ಪಿ. ಬಿರಾದಾರ, ವಿಜಯಪುರ

ಭೂಕಬಳಿಕೆಗೆ ಕಡಿವಾಣ ಅಗತ್ಯ

ಭೂಮಾಫಿಯ ಹೆಮ್ಮರವಾಗಿ ಬೆಳೆದಿದೆ. ಸರ್ಕಾರಿ ಭೂಮಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸುವ ವ್ಯವಸ್ಥಿತ ಜಾಲವಿದೆ. ಈ ಜಾಲವನ್ನು ಮಟ್ಟ ಹಾಕುವ ಮೂಲಕ ಸರ್ಕಾರಿ ಭೂಮಿಯನ್ನು ಸರ್ಕಾರ ರಕ್ಷಿಸಬೇಕಿದೆ. ನಕಲಿ ವ್ಯಾಜ್ಯ ಹೂಡಿ, ಖಾಸಗಿ ಆಸ್ತಿ ಲಪಟಾಯಿಸುವ ಪ್ರಕರಣಗಳೂ ನಡೆಯುತ್ತಿವೆ. ವ್ಯವಸ್ಥೆಯು ಪೂರಕವಾಗಿರುವುದರಿಂದ ಹಣ ಇದ್ದರೆ ಏನು ಬೇಕಾದರೂ ಮಾಡಬಹುದು ಎಂಬಂತಾಗಿದೆ. ವ್ಯವಸ್ಥೆಯಲ್ಲಿನ ಲೋಪವನ್ನು ಸರಿಪಡಿಸಿ, ಭೂಕಬಳಿಕೆಗೆ ಕಡಿವಾಣ ಹಾಕಬೇಕು.

ಗುರುಮೂರ್ತಿ ಜಿ.ಬಿ., ಚಿತ್ರದುರ್ಗ

ಅವ್ಯವಹಾರಗಳಿಗೆ ಕಡಿವಾಣ ಸಾಧ್ಯ

ಭೂಕಬಳಿಕೆಗೆ ಕಡಿವಾಣ ಹಾಕಲು ಎಲ್ಲ ತರಹದ ಸ್ವತ್ತುಗಳ ಡಿಜಿಟಲೀಕರಣ ಆಗಬೇಕು. ಪ್ರತಿಯೊಂದು ಸ್ವತ್ತಿನ ಮಾಲೀಕರ ದೂರವಾಣಿಯ ಸಂಖ್ಯೆಯನ್ನು ನಮೂದಿಸಬೇಕು. ಸ್ವತ್ತಿನ ಕುರಿತ ದಾಖಲಾತಿಗಳಲ್ಲಿ ಯಾವುದೇ ರೀತಿಯ ಬದಲಾವಣೆಯಾಗಬೇಕಿದ್ದರೆ ಭೂಮಾಲೀಕರಿಗೆ ಮೊಬೈಲ್ ಸಂಖ್ಯೆಗೆ ಸಂದೇಶ ಕಳಿಸಿ, ಒಟಿಪಿ ಪಡೆದ ನಂತರ ಬದಲಾವಣೆ ಮಾಡುವಂತಾಗಬೇಕು. ಭೂಮಾಲೀಕರು ಸ್ವತ್ತು ಖರೀದಿ ಮಾಡಿ, ಮೈಮರೆಯದೇ ಪ್ರತಿವರ್ಷ ಕಡ್ಡಾಯವಾಗಿ ಭೂಕಂದಾಯ ತುಂಬಿ, ಸ್ವತ್ತಿನ ದಾಖಲಾತಿ ಪ್ರತಿಯನ್ನು ಪರಿಶೀಲಿಸುತ್ತಿರಬೇಕು. ನಿರ್ದಿಷ್ಟ ಅವಧಿಯೊಳಗೆ ಕಟ್ಟಡ ನಿರ್ಮಾಣ ಮಾಡದೆ ಹೋದರೆ ಆ ಸ್ವತ್ತನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು, ಅವಶ್ಯಕತೆ ಇರುವವರಿಗೆ ಹರಾಜು ಮಾಡಬೇಕು. ಇದೇ ರೀತಿ, ವಿವಿಧ ಕ್ರಮಗಳನ್ನು ಕೈಗೊಂಡಲ್ಲಿ ಅನೇಕ ಅವ್ಯವಹಾರಗಳಿಗೆ ಕಡಿವಾಣ ಹಾಕಲು ಸಾಧ್ಯ.

ಸುನೀಲ ಸಾಣಿಕೊಪ್ಪ, ಬೆಳಗಾವಿ

ಗ್ರಾಮೀಣ ಪ್ರದೇಶದಲ್ಲೂ ಕಳ್ಳಗೈ

ಭೂಗಳ್ಳರು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲೂ ತಮ್ಮ ಕಳ್ಳಗೈಯನ್ನು ಚಾಚಿದ್ದಾರೆ. ಅಕ್ರಮ–ಸಕ್ರಮದ ಹೆಸರಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಸರ್ಕಾರಿ ಭೂಪ್ರದೇಶವನ್ನು ವ್ಯವಸ್ಥಿತವಾಗಿ ತಮ್ಮ ಹೆಸರಿಗೆ ಹಾಗೂ ತಮ್ಮವರ ಹೆಸರಿಗೆ ಹಸ್ತಾಂತರಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಕೆಲವು ಪಟ್ಟಭದ್ರ ಕಾಣದ ಕೈಗಳು, ರಾಜಕಾರಣಿಗಳ ಹಿಂಬಾಲಕರು, ನಕಲಿ ದಾಖಲೆ ಸೃಷ್ಟಿಕರ್ತರ ಕೈಚಳಕದಿಂದ ಸರ್ಕಾರಿ ಭೂಪ್ರದೇಶ ಮಾತ್ರವಲ್ಲದೆ ಅಮಾಯಕ ಜನರ ಭೂಮಿಯೂ ಕಬಳಿಕೆಯಾಗಿದೆ. ಸ್ವಾತಂತ್ರ್ಯ ದೊರಕಿ 75 ವರ್ಷಗಳಾದರೂ ಕಾಗದ ಪತ್ರಗಳ ಮೋಸದಿಂದ ಅಮಾಯಕರು ಭೂಗಳ್ಳರ ಆಹಾರವಾಗುತ್ತಿರುವುದು ಸೋಜಿಗದ ಸಂಗತಿ.

ಸುರೇಶ್ ಎಂ., ಹೂವಿನ ಹಡಗಲಿ

ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಿ

ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರವೇ ಭೂಕಬಳಿಕೆ ಹೆಚ್ಚಲು ಕಾರಣ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನ್ಯಾಯಾಲಯಗಳು ಅಕ್ರಮವನ್ನು ಸಕ್ರಮಗೊಳಿಸುವ ತಾಣವಾಗಿರುವುದು ವಿಪರ್ಯಾಸ. ದುರ್ಬಲರು ತಮ್ಮ ಭೂಮಿಯನ್ನು ಕಳೆದುಕೊಂಡು ಬೀದಿಗೆ ಬೀಳುತ್ತಿದ್ದಾರೆ. ವ್ಯವಸ್ಥೆ ಸರಿಗೊಳ್ಳಬೇಕಾದರೆ ಭ್ರಷ್ಟಾಚಾರಕ್ಕೆ ನೀರೆಯುತ್ತಿರುವ ಅಧಿಕಾರಿಗಳ ಮೇಲೆ ಮೊದಲು ಕ್ರಮ ಜರುಗಿಸಬೇಕು.

ಬಿ.ಎಸ್. ಹಲಗತ್ತಿ, ಬೆಳಗಾವಿ

ಸಾಧ್ಯವೇ ಇಲ್ಲ ಎಂದುಕೊಂಡರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಸಾಧನೆಗೆ ಪ್ರಯತ್ನವೇ ಮೂಲ.

ಶಾಲಾರಂಭ: ಮಾನಸಿಕ ಸಿದ್ಧತೆಯೂ ಇರಲಿ

ಭಾರತಿ ಎ. ಕೊಪ್ಪ

'ರಜಾ ಮಜಾ' ಎಂಬ ಆಸೆಯು ಮಕ್ಕಳಲ್ಲಿ ಸಾಮಾನ್ಯ. ಆದರೆ ಈಗ ಸುದೀರ್ಘ 20 ತಿಂಗಳುಗಳ ಕಾಲ ರಜಾದ ಮಜಾವನ್ನು ಪಡೆದ ಪುಟಾಣಿಗಳಿಗೆ 'ರಜೆ' ಯು 'ಸಜೆ' ಎಂಬಂತಾಗಿದೆ. 6 ನೇ ತರಗತಿಯ ಮೇಲ್ಪಟ್ಟ ಮಕ್ಕಳು ಈ ನಡುವೆ ಶಾಲೆಗೆ ಹೋದರೂ, ಅದು ಕೇವಲ ಮೂರು ತಿಂಗಳು ಮಾತ್ರ. ಕೋವಿಡ್ ಸಂಕಟದಿಂದ ಮನೆಯಲ್ಲಿಯೇ ಕುಳಿತ ಮಕ್ಕಳಿಗೆ, ಮಕ್ಕಳ ಪೋಷಕರಿಗೆ ಈಗ ಶಾಲಾರಂಭದ ಗಳಿಗೆಯು ಬರುತ್ತಿರುವುದು ಒಂದು ನವೋಲ್ಲಾಸವೇ ಸರಿ. ಕೆಲವರಲ್ಲಿ ಕೊರೊನಾ ಭಯವಿರುವುದು ಸಹಜ. ಆದರೂ ಶಾಲೆಗೆ ಹೋಗಬೇಕು ಎಂಬ ಆಶಯವನ್ನು ಹೊಂದಿದ ವಿದ್ಯಾರ್ಥಿಗಳಿಗೆ ಶಾಲಾರಂಭದ ಸುದ್ದಿಯು ಹೊಸ ಹುರುಪನ್ನು ನೀಡಿದೆ. ಶಾಲಾರಂಭಕ್ಕೆ ಒಂದಿನಿತು ಮಾನಸಿಕ ಸಿದ್ಧತೆಯ ಜೊತೆಗೆ ಆರೋಗ್ಯ ಕಾಳಜಿಯ ಸಿದ್ಧತೆಯೂ ಅತ್ಯಗತ್ಯ.

ಮನಸ್ಸು ಸನ್ನದ್ಧವಾಗಲಿ: ಸುದೀರ್ಘ ಅವಧಿಯನ್ನು ಮನೆಯಲ್ಲಿ, ಕುಟುಂಬದ ವಾತಾವರಣದಲ್ಲಿ ಕಳೆದ ಮನಸ್ಸನ್ನು ಶಾಲಾ ವಾತಾವರಣಕ್ಕೆ ಅಣಿಗೊಳಿಸಬೇಕಿದೆ. ನಿಗದಿತ ಸಮಯದ ಪಾಠ, ಶಿಕ್ಷಕರ ಮುಖಾಮುಖಿ ಪಾಠಗಳಿಗೆ ಮನಸ್ಸು ಕ್ರಿಯಾಶೀಲವಾಗಿ ತೆರೆದುಕೊಳ್ಳಬೇಕಿದೆ. ಭೌತಿಕ ತರಗತಿಯಲ್ಲಿ ಆರೋಗ್ಯ ಕಾಳಜಿಯೂ ಅನಿವಾರ್ಯವಾದುದರಿಂದ ಸ್ನೇಹಿತರೊಂದಿಗೆ ಹಾಗೂ ಶಿಕ್ಷಕರೊಂದಿಗೆ ದೈಹಿಕವಾಗಿ ಅಂತರವನ್ನು ಕಾಪಾಡಿಕೊಂಡು, ಕಲಿಕೆಯಲ್ಲಿ ತೊಡಗಲು ಮಾನಸಿಕವಾಗಿ ತಯಾರಿ ಮಾಡಿಕೊಳ್ಳಬೇಕಿದೆ. ಸ್ನೇಹಿತರ ಜೊತೆ ಹರಟೆ ಹೊಡೆಯುವುದು, ಕಲಿಕಾ ವಿಷಯಗಳನ್ನು ಚರ್ಚಿಸುವುದು ಇವೆಲ್ಲವೂ ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗಗಳೇ ಆದರೂ, ಎಂದಿನಂತೆ ಅತಿ ಹತ್ತಿರದಲ್ಲಿ ಕುಳಿತು ಮಾತನಾಡುವುದು, ತಮಾಷೆಯಾಗಿ ಬೆರೆಯುವುದು ಎಲ್ಲವೂ ಕಷ್ಟ. ಈ ನಿಟ್ಟಿನಲ್ಲಿ ಆರೋಗ್ಯ ಕಾಳಜಿಯೊಂದಿಗೆ ಕಲಿಕೆಯ ಪ್ರಾಧಾನ್ಯತೆಗೆ ಮನವು ಅಣಿಗೊಳ್ಳಬೇಕಿದೆ.

> ಶಾಲಾ ಪುನರಾರಂಭವನ್ನು ಸಂತಸದಿಂದ ಸ್ವೀಕರಿಸಿದರೆ, ಶಿಕ್ಷಣವು ಆಸಕ್ತಿಯುತವಾಗಿ ಸಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇದಕ್ಕೆ ಸಾಕಷ್ಟು ಸಿದ್ಧತೆಯೂ ಅಗತ್ಯ.

ದೈನಂದಿನ ಚಟುವಟಿಕೆಗಳು ಚುರುಕಾಗಲಿ: ಮನೆಯಲ್ಲೇ ಇರುವಾಗ ದೈನಂದಿನ ಚಟುವಟಿಕೆಗಳಾದ ಮುಂಜಾನೆ ಏಳುವುದು, ಸ್ನಾನ, ತಿಂಡಿ ಇವೆಲ್ಲವೂ ಆಮೆ ವೇಗದಲ್ಲಿ ನಡೆಯುತ್ತಿದ್ದವು. ಶಾಲಾ ಕೆಲಸಗಳಾದ ನೋಟ್ಸ್, ಹೋಮ್‌ವರ್ಕ್, ಪ್ರಾಜೆಕ್ಟ್ ವರ್ಕ್‌ಗಳೆಲ್ಲವನ್ನೂ ಯಶಸ್ವಿಯಾಗಿ ಮಾಡಲು ಬೆಳಿಗ್ಗೆ ಬೇಗನೇ ಏಳುವ ಅಭ್ಯಾಸವನ್ನು ರೂಢಿಸಿಕೊಳ್ಳಲೇಬೇಕಾದ ಅಗತ್ಯತೆ ಇದೆ. ಬೆಳಗಿನ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು, ನಿಗದಿತ ಸಮಯಕ್ಕೆ ಶಾಲೆಯಲ್ಲಿ ಇರುವ ಅಭ್ಯಾಸಕ್ಕೆ ಮತ್ತೆ ಮರುಚಾಲನೆ ನೀಡಬೇಕಿದೆ.

ಸ್ವಚ್ಛತೆಗೆ ಗಮನ: ಕೋವಿಡ್ ಮಧ್ಯೆ ಶಾಲೆಗೆ ತೆರಳಬೇಕಾದುದರಿಂದ ಸ್ವಚ್ಛತೆಯೆಡೆಗೆ ಹೆಚ್ಚಿನ ಗಮನವನ್ನು ನೀಡಬೇಕಿದೆ. ಪ್ರತಿದಿನ ಶಾಲೆಯಿಂದ ಬಂದ ಕೂಡಲೇ ಧರಿಸಿದ ಉಡುಪುಗಳನ್ನು ಬದಲಿಸುವುದು, ಶುಭ್ರ ಉಡುಪನ್ನು ಧರಿಸುವುದು, ಮಾಸ್ಕ್‌ಗಳನ್ನು ಪ್ರತಿದಿನ ತೊಳೆದು ಉಪಯೋಗಿಸುವುದು ಬಹಳ ಉತ್ತಮ. ಶಾಲೆಯಲ್ಲಿನ ಪ್ರತಿ ತರಗತಿಯ ಅವಧಿಯ ನಂತರ ಆಗಾಗ ಸ್ಯಾನಿಟೈಜರ್ ಬಳಕೆ ಮಾಡುವುದು ಆರೋಗ್ಯದ ದೃಷ್ಟಿಯಿಂದ ಒಳಿತು. ಶಾಲಾ ಬ್ಯಾಗ್‌ನಲ್ಲಿ ಒಂದು ಸ್ಯಾನಿಟೈಜರ್ ಬಾಟಲ್ ಮತ್ತು ಒಂದು ಮಾಸ್ಕ್ ಅನ್ನು ಸದಾ ಇಟ್ಟುಕೊಳ್ಳುವುದು ಅಗತ್ಯ. ಧರಿಸಿದ ಮಾಸ್ಕ್ ಒಮ್ಮೊಮ್ಮೆ ಕಿತ್ತು ಹೋದರೆ ಅಥವಾ ಕೆಳಗೆ ಬಿದ್ದರೆ ಅವುಗಳ ಮರುಬಳಕೆ ಕಷ್ಟ. ಆದ್ದರಿಂದ ಒಂದು ಮಾಸ್ಕ್ ಧರಿಸಿದರೂ ಇನ್ನೊಂದು ಮಾಸ್ಕ್ ಅನ್ನು ಬ್ಯಾಗ್‌ನಲ್ಲಿ ಇಟ್ಟುಕೊಳ್ಳುವುದನ್ನು ಮರೆಯಬಾರದು.

ಪುಸ್ತಕಗಳನ್ನು ಜೋಡಿಸಿಕೊಳ್ಳೋಣ: ಈ ಶೈಕ್ಷಣಿಕ ವರ್ಷದಲ್ಲಿ ಶಾಲಾ ಪಠ್ಯಪುಸ್ತಕಗಳ ಮುದ್ರಣವೂ ವಿಳಂಬವಾಗುತ್ತಿದೆ. ಸಮಯಕ್ಕೆ ಸರಿಯಾಗಿ ಪಠ್ಯಪುಸ್ತಕ ಸಿಗಲಿಲ್ಲವೆಂದು ಕಲಿಕೆಯಲ್ಲಿ ಹಿಂದೆ ಉಳಿಯಬಾರದು. ಹಿಂದಿನ ವರ್ಷದ ವಿದ್ಯಾರ್ಥಿಗಳು ಬಳಸಿದ ಪುಸ್ತಕಗಳ ಸಂಗ್ರಹವಿರುತ್ತದೆ. ಆ ಪುಸ್ತಕಗಳನ್ನು 'ಶಾಲಾ ಬುಕ್ ಬ್ಯಾಂಕ್' ನಲ್ಲಿ ಪಡೆದು, ಓದುವುದು ಉತ್ತಮ. ಅವು ಲಭ್ಯವಾಗಿಲ್ಲವಾದರೆ ಕರ್ನಾಟಕ ಪಠ್ಯಪುಸ್ತಕ ಸಂಘದ ktbs.kar.nic.in ವೆಬ್‌ಸೈಟ್‌ನಲ್ಲಿ ಎಲ್ಲಾ ತರಗತಿಗಳ ಪಠ್ಯಪುಸ್ತಕಗಳ ಸಾಫ್ಟ್ ಕಾಪಿ ಲಭ್ಯವಿರುತ್ತದೆ. ಅವುಗಳನ್ನು ಡೌನ್‌ಲೋಡ್ ಮಾಡಿಕೊಂಡು, ಝೆರಾಕ್ಸ್ ಮಾಡಿ ಬಳಸಬಹುದಾಗಿದೆ.

ಕೆಲವು ಅಭ್ಯಾಸಗಳಿಂದ ದೂರವಿರೋಣ: ರಜಾ ಅವಧಿಯಲ್ಲಿ ಟೈಂಪಾಸ್‌ಗೆಂದು ಒಂದಿಷ್ಟು ಅಭ್ಯಾಸಗಳು ಮೈಗೂಡಿರುತ್ತವೆ. ಪದೇಪದೇ ಕುರುಕಲು ತಿಂಡಿ ತಿನ್ನುವುದು, ಹೆಚ್ಚು ಮೊಬೈಲ್ ಗೇಮ್ ಆಡುವುದು, ಸದಾ ಟಿ.ವಿ ನೋಡುವುದು ಸಾಮಾನ್ಯವಾಗಿಬಿಟ್ಟಿತ್ತು. ಶಾಲಾ ಕಲಿಕೆಯ ಚಟುವಟಿಕೆಗಳಿಗೆ ಗಮನ ಕೊಡುವಾಗ ಟಿವಿ ಮೊಬೈಲ್‌ಗಳನ್ನು ಹಿತಮಿತವಾಗಿ ನೋಡುವುದು ಒಳ್ಳೆಯದು. ಕಲಿಕೆಗೆ ಪೂರಕವಾಗಿ ಗ್ರಂಥಾಲಯದಲ್ಲಿನ ಪುಸ್ತಕ ಓದುವುದು ಒಂದು ಉತ್ತಮ ಹವ್ಯಾಸವಾಗಬಲ್ಲದು.

ಉತ್ಸಾಹವಿರಲಿ: ಬಹಳ ದಿನಗಳ ವಿರಾಮದ ನಂತರ ಶಾಲೆಯು ಆರಂಭವಾಗುತ್ತಿರುವುದರಿಂದ ಹೊಸತನ್ನು ಕಲಿಯುವ ಉತ್ಸಾಹವಿರಲಿ. ಕೋವಿಡ್ ಭಯವಿಲ್ಲದೇ, ಎಚ್ಚರ ವಹಿಸಿ ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವ ಆತ್ಮವಿಶ್ವಾಸವಿರಲಿ. ಆನ್‌ಲೈನ್ ಕಲಿಕೆಗಿಂತ ಮುಖಾಮುಖಿ ಕಲಿಕೆಯು ಹೆಚ್ಚು ಫಲಪ್ರದವಾಗುವುದರಿಂದ ಭವಿಷ್ಯದ ಕಲಿಕಾ ಪಯಣವು ಸುಗಮವಾಗಿ ಸಾಗಲು ಈ ಪರಿಸ್ಥಿತಿಗೆ ಹೊಂದಿಕೊಳ್ಳಲೇಬೇಕಾದ ಅವಶ್ಯಕತೆಗೆ ಅಣಿಯಾಗೋಣ.

ಕಲಿಕಾ ಕೊರತೆಯನ್ನು ಸರಿದೂಗಿಸೋಣ: ಆನ್‌ಲೈನ್ ಪಾಠದಲ್ಲಿ ಹಲವು ಅಂಶಗಳು ಅರ್ಥವಾಗದೆ, ಕಲಿಕೆಯಲ್ಲಿ ಹಿನ್ನಡೆ ಉಂಟಾಗಿರಬಹುದು. ಕಷ್ಟವೆನಿಸಿದ ವಿಷಯಾಂಶಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ, ತಿಳಿದುಕೊಳ್ಳುವುದರಲ್ಲಿ ಹಿಂದೇಟು ಹಾಕಬಾರದು. ಸರ್ಕಾರಿ ಶಾಲೆಗಳಲ್ಲಿ ಈಗಾಗಲೇ ಸೇತುಬಂಧದ ಕಲಿಕೆಗೆ ನೀಡಿರುವ ಅಭ್ಯಾಸ ಹಾಳೆಗಳನ್ನು ಮತ್ತೊಮ್ಮೆ ಮನನ ಮಾಡಿಕೊಂಡರೆ ತರಗತಿಯ ಪಾಠಗಳು ಸುಲಭವೆನಿಸುತ್ತವೆ. ಹಿಂದಿನ ತರಗತಿಯಲ್ಲಿ ಬಿಟ್ಟಿರುವ ಕೆಲವು ವಿಷಯಾಂಶಗಳು ಮುಂದಿನ ತರಗತಿಯಲ್ಲಿ ಕಲಿಕೆಗೆ ಪೂರಕವಾಗಿ ಬಂದಾಗ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮುಂದೆ ಸಾಗುವ ಪ್ರಯತ್ನ ಮಾಡಬೇಕಿದೆ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -45

601. ದೆಹಲಿಯನ್ನಾಳಿದ ಮೊಟ್ಟಮೊದಲ ಮಹಾರಾಣಿ
ಎ) ನೂರ್ ಜಹಾನ್
ಬಿ) ಹಮೀದಾ ಬಾನು
ಸಿ) ಮುಮ್ತಾಜ್ ಮಹಲ್
ಡಿ) ರಜಿಯಾ ಸುಲ್ತಾನಾ

602. ಇಂಗ್ಲಿಷ್‌ನ ವರ್ಣಮಾಲೆಯಲ್ಲಿ ಎಷ್ಟು ಪದಗಳು ಕನ್ನಡಿಯಲ್ಲಿ ನೋಡಿದಾಗ ಹಾಗೆಯೇ ಕಾಣುತ್ತವೆ?
ಎ) 9 ಬಿ) 10
ಸಿ) 11 ಡಿ) 12

603. 10 ಜನರು ಎಷ್ಟು ವಿಧದಲ್ಲಿ ಹಸ್ತಲಾಘವ ಮಾಡಬಹುದು?
ಎ) 20 ಬಿ) 25
ಸಿ) 40 ಡಿ) 45

604. ಭಾರತ ಸಂವಿಧಾನಕ್ಕೆ ಮೊದಲ ತಿದ್ದುಪಡಿ ತಂದ ವರ್ಷ ಯಾವುದು?
ಎ) 1950 ಬಿ) 1951
ಸಿ) 1952 ಡಿ) 1953

605. ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯ ಕನಿಷ್ಠ ವಯೋಮಿತಿ ಏನು?
ಎ) 28 ಬಿ) 30
ಸಿ) 35 ಡಿ) 38

606. ವಿಶ್ವದ ಅತೀ ಎತ್ತರದ ಆದಿಯೋಗಿ ಶಿವನ ಪ್ರತಿಮೆ ಯಾವ ರಾಜ್ಯದಲ್ಲಿದೆ?
ಎ) ಉತ್ತರಾಖಂಡ
ಬಿ) ಹಿಮಾಚಲ ಪ್ರದೇಶ
ಸಿ) ತಮಿಳುನಾಡು
ಡಿ) ಮಹಾರಾಷ್ಟ್ರ

607. ಇತ್ತೀಚೆಗೆ ರಾಷ್ಟ್ರೀಯ ಜೀವವೈವಿಧ್ಯತೆ ಸಮ್ಮೇಳನ ಎಲ್ಲಿ ನಡೆಯಿತು?
ಎ) ಚೆನ್ನೈ ಬಿ) ತಿರುವನಂತಪುರಂ
ಸಿ) ಬೆಂಗಳೂರು ಡಿ) ಮನಾಲಿ

608. ಜಿ.ಎಸ್.ಟಿ ಸಮಿತಿ ಸಭೆಯ ಅಧ್ಯಕ್ಷತೆ ಯಾರು ವಹಿಸುತ್ತಾರೆ?
ಎ) ನೀತಿ ಆಯೋಗದ ಉಪಾಧ್ಯಕ್ಷರು
ಬಿ) ಪ್ರಧಾನಮಂತ್ರಿ
ಸಿ) ಹಣಕಾಸು ಸಚಿವ
ಡಿ) ಮುಖ್ಯಮಂತ್ರಿ

609. ಪ್ರಸ್ತುತ ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥ ಯಾರು?
ಎ) ಅಖಿಲ್ ಕುಮಾರ್ ಜ್ಯೋತಿ
ಬಿ) ಟಿ.ಎನ್.ಶೇಷನ್
ಸಿ) ಪಿ.ಎ.ಸಂಗ್ಮಾ
ಡಿ) ಸುಶೀಲ್ ಚಂದ್ರ

610. ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯ ಹೆಸರನ್ನು ಈಗ ಏನೆಂದು ಬದಲಿಸಲಾಗಿದೆ?
ಎ) ಇಂದಿರಾಗಾಂಧಿ ಖೇಲ್ ರತ್ನ
ಬಿ) ಅಟಲ್ ಖೇಲ್ ರತ್ನ
ಸಿ) ಧ್ಯಾನಚಂದ್ ಖೇಲ್ ರತ್ನ
ಡಿ) ನರೇಂದ್ರ ಮೋದಿ ಖೇಲ್ ರತ್ನ

611. ಭಾರತದ ಸಂವಿಧಾನದ 17 ಮತ್ತು 18 ನೇ ವಿಧಿಗಳು ಏನನ್ನು ಪ್ರತಿಪಾದಿಸುತ್ತವೆ?
ಎ) ಸಾಮಾಜಿಕ ಸಮಾನತೆ
ಬಿ) ಆರ್ಥಿಕ ಸಮಾನತೆ
ಸಿ) ರಾಜಕೀಯ ಸಮಾನತೆ
ಡಿ) ಧಾರ್ಮಿಕ ಸಮಾನತೆ

612. ಮಯೋಪಿಯಾ ಇದು ಯಾವುದಕ್ಕೆ ಸಂಬಂಧಿಸಿದೆ?
ಎ) ಕಿವಿಗಳು ಬಿ) ಕಣ್ಣುಗಳು
ಸಿ) ಶ್ವಾಸಕೋಶ ಡಿ) ಮೇಲಿನ ಯಾವುದೂ ಅಲ್ಲ

613. ಭಾರತ ಮತ್ತು ಚೀನಾ ನಡುವಿನ ಗಡಿಗೆ ಸಂಬಂಧಿಸಿದಂತೆ ಚೀನಾ ಯಾವ ರೇಖೆಯನ್ನು ಮಾನ್ಯ ಮಾಡುತ್ತದೆ?
ಎ) ಡ್ಯೂರಾಂಡ್ ರೇಖೆ
ಬಿ) ವಾಸ್ತವಿಕ ನಿಯಂತ್ರಣ ರೇಖೆ
ಸಿ) ಮ್ಯಾಕ್ ಮೋಹನ್ ರೇಖೆ
ಡಿ) ದಿ ಗ್ರೇಟ್ ವಾಲ್ ರೇಖೆ

614. 1930 ರಲ್ಲಿ ಪ್ರಥಮ ಬಾರಿಗೆ ಪಾಕಿಸ್ತಾನದ ಬೇಡಿಕೆ ಇಟ್ಟವರಾರು?
ಎ) ಮೊಹಮ್ಮದ್ ಇಕ್ಬಾಲ್
ಬಿ) ಮುಹಮ್ಮದ್ ಅಲಿ ಜಿನ್ನಾ
ಸಿ) ಶೌಕತ್ ಅಲಿ
ಡಿ) ಖಾನ್ ಅಬ್ದುಲ್ ಗಫಾರ್ ಖಾನ್

615. ವಿಶ್ವಭಾರತಿ ವಿಶ್ವವಿದ್ಯಾಲಯ ಸ್ಥಾಪಿಸಿದವರು ಯಾರು?
ಎ) ಈಶ್ವರಚಂದ್ರ ವಿದ್ಯಾಸಾಗರ
ಬಿ) ಮದನಮೋಹನ ಮಾಳವೀಯ
ಸಿ) ರಾಜಾರಾಂ ಮೋಹನರಾಯ್
ಡಿ) ರವೀಂದ್ರನಾಥ ಟ್ಯಾಗೋರ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 44ರ ಉತ್ತರ: 589. ಎ, 590. ಸಿ, 591. ಸಿ, 592. ಡಿ, 593. ಸಿ, 594. ಎ, 595. ಬಿ, 596. ಎ, 597. ಎ, 598. ಸಿ, 599. ಸಿ

ವಿದ್ಯಾರ್ಥಿ ವೇತನ ಕೈಪಿಡಿ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಎಂಬಿಎ ಸ್ಕಾಲರ್‌ಶಿಪ್ 2021–23

- **ವಿವರ:** ಎಂಬಿಎ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** 2021–23 ಬ್ಯಾಚ್‌ನ ಎಂಬಿಎ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಹೆಚ್ಚಿರಬಾರದು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹ 1 ಲಕ್ಷ
- **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:** 2 ಸೆಪ್ಟೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/IFBMS2

ಒಎನ್‌ಜಿಸಿ ಸ್ಕಾಲರ್‌ಶಿಪ್ 2020–21

- **ವಿವರ:** ಎಸ್‌ಸಿ/ ಎಸ್‌ಟಿ/ ಒಬಿಸಿ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಎಂಜಿನಿಯರಿಂಗ್, ಎಂಬಿಬಿಎಸ್, ಎಂಬಿಎ ಅಥವಾ ಜಿಯೊಫಿಸಿಕ್ಸ್/ ಜಿಯಾಲಜಿಯಲ್ಲಿ ಎಂಎಸ್‌ಸಿ ಮಾಡುತ್ತಿರುವ ಎಸ್‌ಸಿ/ ಎಸ್‌ಟಿ/ ಒಬಿಸಿ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳ ವಯಸ್ಸು 30 ವರ್ಷ ಮೀರಿರಬಾರದು. ಹಿಂದಿನ ಪರೀಕ್ಷೆಯಲ್ಲಿ ಶೇ 60ರಷ್ಟು ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಸಾಮಾನ್ಯ ವರ್ಗ ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ₹ 2 ಲಕ್ಷವನ್ನು ಮೀರಿರಬಾರದು ಮತ್ತು ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳಿಗೆ ₹ 4.5 ಲಕ್ಷ ಮೀರಿರಬಾರದು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹ 48 ಸಾವಿರ
- **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:** 5 ಸೆಪ್ಟೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅಥವಾ ಅಂಚೆ ಮೂಲಕ (ಒಎನ್‌ಜಿಸಿ ಕಚೇರಿ)
- **ಹೆಚ್ಚಿನ ಮಾಹಿತಿಗೆ:** www.b4s.in/praja/OSB8

ಪರೀಕ್ಷೆಯಲ್ಲಿ ಯಶಸ್ಸಿಗೆ ಎಷ್ಟು ಗಂಟೆ ಓದಬೇಕು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ಯಾವುದೇ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಕನಿಷ್ಠ ಎಷ್ಟು ಗಂಟೆಗಳು ಅಭ್ಯಾಸ ನಿರತರಾಗಿರಬೇಕು? ವಿಷಯಾವಾರು ಅಭ್ಯಾಸ ಹೇಗಿರಬೇಕು?**

ಸುನೀಲ್ ಕುಮಾರ್ ಕೆ., ಮಡಿಕೇರಿ

ಪರೀಕ್ಷೆಗಳ ಪ್ರಾಮುಖ್ಯತೆ, ಕಠಿಣತೆಯ ಮಟ್ಟ ಹಾಗೂ ನಿಮ್ಮ ಧ್ಯೇಯ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಸೂಕ್ತ ಕಾರ್ಯತಂತ್ರವನ್ನು ರೂಪಿಸಬೇಕು. ಎಷ್ಟು ಸಮಯ ಓದಬೇಕು ಎನ್ನುವುದಕ್ಕಿಂತ ಓದು ಪರಿಣಾಮಕಾರಿಯಾಗಿರಬೇಕು. ಅದೇ ರೀತಿ ತರಗತಿಗಳಲ್ಲಿ ಪ್ರಶ್ನೆಗಳನ್ನು ಕೇಳುವುದರಿಂದ ವಿಷಯದ ಬಗ್ಗೆ ಒಳನೋಟಗಳು ಲಭಿಸಿ ನಿಮ್ಮಲ್ಲಿ ವಿಮರ್ಶಾತ್ಮಕ ಚಿಂತನಾ ಕೌಶಲದ ಅಭಿವೃದ್ಧಿಯಾಗಿ ಕಲಿಕೆ ಪರಿಪೂರ್ಣವಾಗುತ್ತದೆ.

ಈ ಸಲಹೆಗಳನ್ನು ಗಮನಿಸಿ:

- SQ3R ನಂತಹ ಓದಿನ ತಂತ್ರಗಾರಿಕೆ ಉಪಯುಕ್ತ.
- ಹಿಂದಿನ ಉಪನ್ಯಾಸದ ಟಿಪ್ಪಣಿಗಳನ್ನು ನೋಡಿ ಮುಂದಿನ ಉಪನ್ಯಾಸಕ್ಕೆ ತಯಾರಾಗಿ.
- ಮನಸ್ಸು ಉಲ್ಲಾಸವಾಗಿರುವಾಗ, ಕಠಿಣ ವಿಷಯಗಳು ಮತ್ತು ಕಡಿಮೆ ಆಸಕ್ತಿಯಿರುವ ವಿಷಯಗಳನ್ನು ಓದಿ.
- ದಿನನಿತ್ಯದ ಅಧ್ಯಯನ ವೇಳಾಪಟ್ಟಿಯನ್ನು ಪಾಲಿಸಿ.
- ಆದಷ್ಟು ಶಾಂತ ವಾತಾವರಣದಲ್ಲಿ ಏಕಾಗ್ರತೆಯಿಂದ ಓದಿ.
- ನಿಯಮಿತವಾಗಿ ಸಣ್ಣ ವಿರಾಮಗಳನ್ನು ತೆಗೆದುಕೊಳ್ಳಿ.
- ಏಕಾಗ್ರತೆ ಮತ್ತು ಸ್ಮರಣಶಕ್ತಿಯನ್ನು ಹೆಚ್ಚಿಸುವ ಭ್ರಮರಿ ಪ್ರಾಣಾಯಾಮವನ್ನು ದಿನಕ್ಕೆ 2–3 ಬಾರಿ ಅಭ್ಯಾಸ ಮಾಡಿ.

- **ನಾನು ಹತ್ತನೇ ತರಗತಿಯಲ್ಲಿ ಶೇ 88ರಷ್ಟು ಅಂಕ ಗಳಿಸಿರುವೆ. ಮುಂದೆ ಡಿಪ್ಲೊಮಾ ಸಿಎಸ್‌ನಲ್ಲಿ ಮಾಡಬೇಕು. ಆದರೆ, ಎನ್‌ಇಪಿ ಪ್ರಕಾರ ಭವಿಷ್ಯದಲ್ಲಿ ಏನಾದರೂ ತೊಂದರೆ ಆಗಬಹುದು ಎಂಬ ಭಯವಿದೆ. ದಯಮಾಡಿ ಮಾರ್ಗದರ್ಶನ ನೀಡಿ.**

ಅಮೋಘವರ್ಷ ಯು.ಎ., ಊರು ತಿಳಿಸಿಲ್ಲ.

ಬದುಕಿನ ಕನಸುಗಳು ಮತ್ತು ನಿಮ್ಮ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ವೃತ್ತಿ ಮತ್ತು ಅದರಂತೆ ಕೋರ್ಸ್ ಆಯ್ಕೆಯಿರಲಿ. ಡಿಪ್ಲೊಮಾ ಕೋರ್ಸ್‌ಗಳಿಗೆ ಈ ವರ್ಷದಿಂದಲೇ ಎನ್‌ಇಪಿಯ ನೂತನ ನಿಯಮಗಳು ಅನ್ವಯವಾಗುವುದೆಂದು ಕರ್ನಾಟಕ ಸರ್ಕಾರ ಇತ್ತೀಚೆಗೆ ಘೋಷಿಸಿದೆ. ಹಾಗಾಗಿ, ಭವಿಷ್ಯದ ಕುರಿತು ಆತಂಕ ಪಡಬೇಕಿಲ್ಲ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.
ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.



ಸುಭಾಷಿತ
ಮನಸ್ಸನ್ನು ಸದಾ ತಾರುಣ್ಯಾವಸ್ಥೆಯಲ್ಲಿ ಇಟ್ಟುಕೊಳ್ಳುವುದು ಜೀವನದಲ್ಲಿನ ಮಹತ್ವದ ಸಂಗತಿ.
-ಹೆನ್ರಿ ಫೋರ್ಡ್

ನ್ಯಾಯಮಂಡಳಿ ಸುಧಾರಣಾ ಮಸೂದೆ ಸಂಸತ್ತಿನ ನಡೆ ಸಮಂಜಸವೇ?

ನ್ಯಾಯಮಂಡಳಿ ಸುಧಾರಣಾ ಮಸೂದೆಗೆ ಸಂಸತ್ತು ಮುಂಗಾರು ಅಧಿವೇಶನದಲ್ಲಿ ಅನುಮೋದನೆ ನೀಡಿದೆ. ಇದು, ಸಂಸತ್ತಿನ ಕೆಲವು ನಡವಳಿಕೆಗಳ ಬಗ್ಗೆ, ಸರ್ಕಾರದ ಕೆಲವು ಹೆಜ್ಜೆಗಳ ಬಗ್ಗೆ, ಸಂಸತ್ತು ಮತ್ತು ಸುಪ್ರೀಂ ಕೋರ್ಟ್‌ ನಡುವಿನ ಸಂಬಂಧದ ಬಗ್ಗೆ ಕೆಲವು ಅಹಿತಕರ ಪ್ರಶ್ನೆಗಳು ಮೂಡುವಂತೆ ಮಾಡಿದೆ. ಸುಪ್ರೀಂ ಕೋರ್ಟ್ ಈ ಹಿಂದೆ ಅಸಿಂಧುಗೊಳಿಸಿದ್ದ ಸುಗ್ರೀವಾಜ್ಞೆಯೊಂದರ ಕೆಲವು ಅಂಶಗಳಿಗೆ ಈ ಮಸೂದೆಯು ಮತ್ತೆ ಜೀವ ನೀಡಿದೆ. ಈ ಮಸೂದೆಯ ಬಗ್ಗೆ ಸುಪ್ರೀಂ ಕೋರ್ಟ್ ಕಟು ಮಾತುಗಳನ್ನು ಆಡಿದೆ. ಅಲ್ಲದೆ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್‌.ವಿ. ರಮಣ ಅವರೇ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಸಂಸತ್ತು ಅನುಮೋದನೆ ನೀಡಿರುವ ಮಸೂದೆಯು ಒಂಬತ್ತು ಮೇಲ್ಮನವಿ ನ್ಯಾಯಮಂಡಳಿಗಳನ್ನು ರದ್ದುಪಡಿಸಲು ಅವಕಾಶ ನೀಡುತ್ತದೆ. ನ್ಯಾಯಮಂಡಳಿಗಳ ಸದಸ್ಯರ ಹುದ್ದೆಗಳ ಅರ್ಹತೆ, ಅಧಿಕಾರ ಅವಧಿ ಮತ್ತು ಸೇವೆಗೆ ಸಂಬಂಧಿಸಿ ಸುಗ್ರೀವಾಜ್ಞೆಯಲ್ಲಿ ಇದ್ದ ಕೆಲವು ಅಂಶಗಳಿಗೆ ಮಸೂದೆಯು ಮತ್ತೆ ಜೀವ ನೀಡಿದೆ. ಸುಗ್ರೀವಾಜ್ಞೆಯಲ್ಲಿ ಇದ್ದ ಇಂಥದ್ದೇ ಅಂಶಗಳನ್ನು ಜುಲೈ ತಿಂಗಳಲ್ಲಿ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ನ್ಯಾಯಪೀಠವು, ಅಸಾಂವಿಧಾನಿಕ ಎಂದು ಘೋಷಿಸಿತ್ತು. ಈ ಅಂಶಗಳು ನ್ಯಾಯಾಂಗದ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ನಡೆಸುತ್ತವೆ ಎಂದು ಹೇಳಿತ್ತು. ನ್ಯಾಯಾಂಗದ ಸ್ವಾತಂತ್ರ್ಯವು ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು. ಸರ್ಕಾರಕ್ಕೆ ಎಷ್ಟೇ ಬಹುಮತ ಇದ್ದರೂ, ಮೂಲ ಸ್ವರೂಪವನ್ನು ಬದಲಾಯಿಸಲು ಅವಕಾಶ ಇಲ್ಲ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ನಂತರದಲ್ಲಿ ಈ ವಿಚಾರವಾಗಿ ಗೊಂದಲಗಳು ಉಳಿದಿಲ್ಲ. ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಚ್ಯುತಿ ತರುವ ಸಾಧ್ಯತೆ ಇದ್ದ ಸಂವಿಧಾನ ತಿದ್ದುಪಡಿ ಕಾಯ್ದೆಯನ್ನು ಕೂಡ ಸುಪ್ರೀಂ ಕೋರ್ಟ್ ಈ ಹಿಂದೆ ರದ್ದುಪಡಿಸಿದ ನಿದರ್ಶನ ಇದೆ. 'ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು, ನ್ಯಾಯಯುತವಾಗಿ ಹಾಗೂ ತರ್ಕಬದ್ಧವಾಗಿ ಇರುವುದು ನ್ಯಾಯಾಂಗದ ಹೆಗ್ಗುರುತುಗಳು' ಎಂದು ತ್ರಿಸದಸ್ಯ ಪೀಠವು ಸುಗ್ರೀವಾಜ್ಞೆ ವಿಚಾರವಾಗಿ ಹೇಳಿತ್ತು.

ಸುಪ್ರೀಂ ಕೋರ್ಟ್‌ನಿಂದ ಅಸಾಂವಿಧಾನಿಕ ಎಂದು ಕರೆಸಿಕೊಂಡ ಅಂಶಗಳನ್ನು ಸಂಸತ್ತು ಅಂಗೀಕರಿಸುವುದು ಸರಿಯೇ?

ಸುಗ್ರೀವಾಜ್ಞೆಯಲ್ಲಿ ಹಾಗೂ ಈಗಿನ ಮಸೂದೆಯಲ್ಲಿ ಇರುವ ಕೆಲವು ಅಂಶಗಳ ಒಳಿತು-ಕೆಡುಕುಗಳ ಬಗ್ಗೆ ಗಮನ ಕೊಡಬೇಕಿಲ್ಲ. ನ್ಯಾಯಮಂಡಳಿಗಳ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಇಲ್ಲಿ ಇವೆ. ನ್ಯಾಯಮಂಡಳಿಗಳು ಕೂಡ ನ್ಯಾಯಾಂಗದ ಒಂದು ಭಾಗವೇ ಎಂಬುದನ್ನು ಮರೆಯುವಂತಿಲ್ಲ. ಹಾಗಾಗಿ, ಅವುಗಳ ಸ್ವತಂತ್ರ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಅಲಕ್ಷಿಸಲು ಆಗದು. ಸುಪ್ರೀಂ ಕೋರ್ಟ್‌ನಿಂದ ಅಸಾಂವಿಧಾನಿಕ ಎಂದು ಕರೆಸಿಕೊಂಡ ಅಂಶಗಳನ್ನು ಸಂಸತ್ತು ಅಂಗೀಕರಿಸುವುದು ಸರಿಯೇ ಎಂಬುದು ಚರ್ಚಾರ್ಹ ವಿಷಯ. ಆದರೆ, ಈ ರೀತಿಯಲ್ಲಿ ಮಸೂದೆಯೊಂದಕ್ಕೆ ಅನುಮೋದನೆ ನೀಡುವುದು, ಸಾಂವಿಧಾನಿಕ ನ್ಯಾಯಾಲಯವೊಂದರ ತೀರ್ಮಾನವನ್ನು ಉಪೇಕ್ಷಿಸಿದಂತೆ ಆಗುವುದಿಲ್ಲವೇ? ಇದು ಸಾಂವಿಧಾನಿಕ ವ್ಯವಸ್ಥೆಯೊಂದರ ಬೇರೆ ಬೇರೆ ಅಂಗಗಳ ನಡುವಿನ ಅಧಿಕಾರ ಹಂಚಿಕೆಯ ಸಮತೋಲನವನ್ನು ಕೆಡಿಸಿದಂತೆ ಆಗದೇ? ಸಂಸತ್ತು ಹಾಗೂ ನ್ಯಾಯಾಂಗದ ನಡುವೆ ಯಾವುದೂ ಹೆಚ್ಚಲ್ಲ, ಯಾವುದೂ ಕಡಿಮೆ ಅಲ್ಲ. ಈ ಎರಡೂ ಸಂಸ್ಥೆಗಳು ಸಮಾನ ಸ್ಥಾನ ಹೊಂದಿರುವಂಥವು. ಇವುಗಳ ಪೈಕಿ ಒಂದು ಸಂಸ್ಥೆಯು ಇನ್ನೊಂದರ ಮೇಲೆ ಹಕ್ಕು ಸಾಧಿಸಲು ಯತ್ನಿಸಿದರೆ, ಅದು ಸಂವಿಧಾನವನ್ನು ಉಲ್ಲಂಘಿಸಿದಂತೆ ಆಗುತ್ತದೆ. 'ಸಂಸತ್ತಿನಲ್ಲಿ ಚರ್ಚೆ ನಡೆದಿದ್ದನ್ನು ನಾವು ಕಾಣಲಿಲ್ಲ. ಕಾನೂನು ಮಾಡುವ ಪರಮಾಧಿಕಾರ ಸಂಸತ್ತಿಗೆ ಇದೆ ಎಂಬುದು ನಿಜ. ಈ ನ್ಯಾಯಾಲಯವು ಅಸಿಂಧು ಎಂದು ಹೇಳಿದ್ದರೂ, ಸರ್ಕಾರವು ಮಸೂದೆಯನ್ನು ಮಂಡಿಸಿದ್ದು ಏಕೆ ಎಂಬುದನ್ನು ನಾವು ತಿಳಿಯಬೇಕಿದೆ. ಚರ್ಚೆ ನಡೆದಿದ್ದನ್ನು, ಕಾರಣ ನೀಡಿದ್ದನ್ನು ನಮಗೆ ತೋರಿಸಿ' ಎಂದು ನ್ಯಾಯಾಲಯವು ಈ ಮಸೂದೆಯ ಕುರಿತಾಗಿ ಹೇಳಿದೆ. ನ್ಯಾಯಾಲಯ ಆಡಿರುವ ಮಾತುಗಳಲ್ಲಿ ಗಟ್ಟಿತನ ಇದೆ.

ನ್ಯಾಯಾಲಯದ ನಿರ್ದೇಶನಗಳನ್ನು ಉಪೇಕ್ಷಿಸಿ, ಮಸೂದೆಯೊಂದನ್ನು ರೂಪಿಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ನ್ಯಾಯಾಲಯವು ತೀರ್ಪಿನಲ್ಲಿ ಉಲ್ಲೇಖಿಸಿತ್ತು. 'ಆದೇಶದ ಮೂಲಕ ಗುರುತಿಸಲಾಗಿರುವ ಲೋಪಗಳನ್ನು ಸರಿಪಡಿಸದೆಯೇ, ಕೋರ್ಟ್‌ನ ಆದೇಶವನ್ನು ನಿಷ್ಕ್ರಿಯ ಮಾಡುವುದರಿಂದ ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವಕ್ಕೆ ಅಂತ್ಯಹಾಡಿದಂತೆ ಆಗುತ್ತದೆ. ಕಾನೂನಿಗೆ ಅನುಗುಣವಾಗಿ ಆಡಳಿತ ಎಂಬ ಮಾತಿಗೆ ಯಾವ ಅರ್ಥವೂ ಇಲ್ಲದಂತೆ ಆಗುತ್ತದೆ. ಏಕೆಂದರೆ, ಆಗ ಯಾವುದೇ ಕಾನೂನನ್ನು ಉಲ್ಲಂಘಿಸಲು ಸರ್ಕಾರಕ್ಕೆ ಮುಕ್ತ ವಾತಾವರಣ ಇರುತ್ತದೆ, ಉಲ್ಲಂಘಿಸಿಯೂ ಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು ಎಂದಾಗುತ್ತದೆ' ಎಂದು ಕೋರ್ಟ್ ಹೇಳಿತ್ತು. ಈಗ ಈ ಮಸೂದೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು ಎನ್ನುವ ಕೋರಿಕೆ ಇರುವ ಅರ್ಜಿಯೊಂದು ಕೋರ್ಟ್‌ಗೆ ಸಲ್ಲಿಕೆಯಾಗಿದೆ. ಅರ್ಜಿಯಲ್ಲಿ ಹೇಳಿರುವಂತೆ, ಕಾನೂನು ರೂಪಿಸುವ ವಿಚಾರದಲ್ಲಿ ಸಂಸತ್ತಿಗೆ ಇರುವ ಸಾಂವಿಧಾನಿಕ ಮಿತಿಗಳು ಏನು, ಕಾನೂನುಗಳನ್ನು ಪರಾಮರ್ಶಿಸುವ ವಿಚಾರದಲ್ಲಿ ನ್ಯಾಯಾಂಗಕ್ಕೆ ಇರುವ ಅಧಿಕಾರ ಏನು ಎಂಬ ಪ್ರಶ್ನೆಗಳು ಇಲ್ಲಿ ಅಡಕವಾಗಿವೆ.

ದಿನದ ಟ್ವೀಟ್

ತೆರಿಗೆ ಮೇಲೆ ತೆರಿಗೆ ಸರಿಯೇ?

ಕರ್ನಾಟಕದಲ್ಲಿ ಕಾರು ಖರೀದಿಗೆ ತೆರಿಗೆ ಮೇಲೆ ತೆರಿಗೆ ವಿಧಿಸಲಾಗುತ್ತಿದೆ. ಕಾರಿನ ಎಕ್ಸ್ ಷೋರೂಂ ಬೆಲೆಗೆ ರಸ್ತೆ ತೆರಿಗೆಯನ್ನು ಲೆಕ್ಕ ಹಾಕಬೇಕು. ಆದರೆ ಇಲ್ಲಿ ಎಕ್ಸ್ ಷೋರೂಂ + ಜಿಎಸ್‌ಟಿ ಮೊತ್ತಕ್ಕೆ ಲೆಕ್ಕ ಹಾಕಲಾಗುತ್ತಿದೆ. ಆರ್‌ಟಿಒ ಅಧಿಕಾರಿಗಳನ್ನು ಕೇಳಿದರೆ, ಎಲ್ಲೆಡೆಯೂ ಹೀಗೇ ನಡೆಯುತ್ತಿದೆ ಎನ್ನುತ್ತಾರೆ. ತಮ್ಮ ತಪ್ಪನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿಲ್ಲ.

ಡಾ. ಜಗದೀಶ್ ಜೆ. ಹಿರೇಮಠ, ವೈದ್ಯ

ಕಿಡಿನುಡಿ

'ಅಖಂಡ ಹಿಂದೂಸ್ತಾನ' ಆಗಬೇಕು ಎಂದು ನಾವು ಭಾವಿಸಿದರೂ ಅದು ಸಾಧ್ಯವಾಗಿಲ್ಲ. ಆದರೆ ಭರವಸೆ ಮಾತ್ರ ಶಾಶ್ವತವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಅಖಂಡ ಹಿಂದೂಸ್ತಾನ' ಬೇಕಾಗಿದ್ದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಅದಕ್ಕಾಗಿ ಅವರು, ಪಾಕಿಸ್ತಾನದ ಸುಮಾರು 11 ಕೋಟಿ ಮುಸ್ಲಿಮರ ಬಗ್ಗೆ ಯಾವ ಯೋಜನೆ ಹೊಂದಿದ್ದಾರೆ ಎಂಬುದನ್ನು ತಿಳಿಸಬೇಕು.

ಸಂಜಯ್ ರಾವುತ್, ಶಿವಸೇನಾ ಸಂಸದ

25 ವರ್ಷಗಳ ಹಿಂದೆ
ಶುಕ್ರವಾರ, 23-8-1996

- **ಹುಬ್ಬಳ್ಳಿ ಬಂದ್ ಯಶಸ್ವಿ; ಅಶ್ರುವಾಯು, ಬಂಧನ**

ಹುಬ್ಬಳ್ಳಿ, ಆ. 22– ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಇದೇ ಪ್ರಥಮ ಬಾರಿಗೆ ಇಂದು ಹುಬ್ಬಳ್ಳಿಗೆ ಭೇಟಿ ನೀಡಿದ ಪ್ರಧಾನಿ ಎಚ್‌.ಡಿ.ದೇವೇಗೌಡ ಅವರು ಒಂದೆಡೆ ಜನತಾದಳ ಕಾರ್ಯಕರ್ತರಿಂದ ಶಾಂತಿಯುತ ಸ್ವಾಗತ ಪಡೆದರಾದರೂ ಮತ್ತೊಂದೆಡೆ ಅಂಗಡಿಗಳನ್ನು ಮುಚ್ಚಿ ಬಂದ್ ಆಚರಿಸಿದ ಜನತೆಯಿಂದ ಪ್ರತಿಭಟನೆ ಎದುರಿಸಬೇಕಾಯಿತು.

ಪಾಟೀಲ ಪುಟ್ಟಪ್ಪ ನೇತೃತ್ವದ ಉತ್ತರ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಮತ್ತು ಬಿಜೆಪಿ ಬೆಂಬಲಿತ ಉತ್ತರ ಕರ್ನಾಟಕ ಅಭಿವೃದ್ಧಿ ಸಂಘರ್ಷ ಸಮಿತಿ ಹುಬ್ಬಳ್ಳಿ-ಧಾರವಾಡದಲ್ಲಿ ನೈರುತ್ಯ ರೈಲ್ವೆ ವಲಯ ಹಾಗೂ ಹೈಕೋರ್ಟ್ ಪೀಠ ಸ್ಥಾಪನೆ ಸೇರಿದಂತೆ ಉತ್ತರ ಕರ್ನಾಟಕದ ಅಭಿವೃದ್ಧಿ ಕಾರ್ಯಗಳ ನಿರ್ಲಕ್ಷ್ಯವನ್ನು ಪ್ರತಿಭಟಿಸಿ ಪ್ರಧಾನಿ ಭೇಟಿ ಸಂದರ್ಭದಲ್ಲಿ ಹುಬ್ಬಳ್ಳಿ ಬಂದ್ ಹಾಗೂ ಕರಾಳ ದಿನ ಆಚರಿಸುವಂತೆ ನೀಡಿದ್ದ ಕರೆಗೆ ಪೂರ್ಣ ಬೆಂಬಲ ವ್ಯಕ್ತಗೊಂಡಿತು.

- **ಲಂಡನ್‌ನಲ್ಲಿ ಸುಖ್‌ರಾಂ ಪತ್ತೆ**

ನವದೆಹಲಿ, ಆ. 22 (ಯುಎನ್‌ಐ, ಪಿಟಿಐ)– ಟೆಲಿಕಾಂ ಹಗರಣದ ಮುಖ್ಯ ಆರೋಪಿಯೆಂದು ಗುರುತಿಸಲಾಗಿರುವ ಕೇಂದ್ರದ ಮಾಜಿ ಸಚಿವ ಸುಖ್‌ರಾಂ ಅವರನ್ನು ಲಂಡನ್‌ನಲ್ಲಿ ಪತ್ತೆ ಹಚ್ಚಲಾಗಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

50 ವರ್ಷಗಳ ಹಿಂದೆ
ಸೋಮವಾರ, 23-8-1971

- **ಮುಚ್ಚಿದ ಕೈಗಾರಿಕಾ ಘಟಕಗಳ ಸ್ವಾಧೀನಕ್ಕೆ ಸರ್ಕಾರಕ್ಕೆ ಅಧಿಕಾರ**

ಚನ್ನಪಟ್ಟಣ, ಆ. 22– ಮುಚ್ಚಲಾದ ಕೈಗಾರಿಕಾ ಘಟಕಗಳನ್ನು ಮಾರುಕಟ್ಟೆ ದರದಲ್ಲಿ ಪರಿಹಾರ ನೀಡದೆ ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲು, ಬರುವ ಲೋಕಸಭೆ ಅಧಿವೇಶನದಲ್ಲಿ ಸಂವಿಧಾನವನ್ನು ಮತ್ತೆ ತಿದ್ದುಪಡಿ ಮಾಡಲಾಗುವುದು.

ಕೇಂದ್ರ ಉಕ್ಕು ಖಾತೆ ಸಚಿವ ಮೋಹನಕುಮಾರ ಮಂಗಳಂರವರು ಇಲ್ಲಿ ಇಂದು ವಕೀಲರ ಸಂಘದಲ್ಲಿ ಭಾಷಣ ಮಾಡುತ್ತ ಈ ವಿಚಾರ ತಿಳಿಸಿದರು.

ಸಂವಿಧಾನದ 31(ಎ) ವಿಧಿಯನ್ನು ಬದಲಾಯಿಸುವ ಈ ತಿದ್ದುಪಡಿಯು ಇತ್ತೀಚೆಗೆ ಅಂಗೀಕರಿಸಲಾದ ಸಂವಿಧಾನ ತಿದ್ದುಪಡಿ ಮಸೂದೆಗಿಂತ ಹೆಚ್ಚು ವ್ಯಾಪಕ ಪರಿಣಾಮಗಳನ್ನುಂಟು ಮಾಡುವುದೆಂದೂ ಹೇಳಿದರು.

ಕನಸು ಕಾಣಲು ಕರ ತೆರಬೇಕಿಲ್ಲ ಎಂಬುದೇ ನೆಮ್ಮದಿಯ ವಿಚಾರ!

ಹೊಸ ಪೀಳಿಗೆಗೆ ಹಳೆ ರಾಜಕೀಯ ಮಾದರಿ

ವಿಶ್ಲೇಷಣೆ
ಚಂದ್ರಕಾಂತ ವಡ್ಡು

ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಇತ್ತೀಚೆಗೆ ನಡೆಸಿದ ದಾಳಿಯ ಸಂದರ್ಭದಲ್ಲಿ, ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಅವರ ಅರಮನೆಯಂತಹ ಮನೆಯ ವೈಭವವು ದೇಶದಾದ್ಯಂತ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ತಮ್ಮ ಪಕ್ಷದ ಶಾಸಕರಿಗೆ ಧೈರ್ಯ ತುಂಬಲು ಜಮೀರ್ ಮನೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭೇಟಿ ನೀಡಿದ್ದರು. ಆಗ ಅವರಿಬ್ಬರೂ ಕುಳಿತಿದ್ದ ಬಂಗಾರ ವರ್ಣದ ಕುರ್ಚಿಗಳು ಮಾಧ್ಯಮದಲ್ಲಿ ವಿಶೇಷ ಆಕರ್ಷಣೆಗೆ ಒಳಗಾದವು. ಇಷ್ಟಾಗಿಯೂ ತಾವು ದುಡಿದು ಕಟ್ಟಿಸಿದ ಮನೆ ಬಗ್ಗೆ ಹೊಟ್ಟೆಕಿಚ್ಚಿನಿಂದ ಕೆಲವರು ಇ.ಡಿಗೆ ಹಚ್ಚಿಕೊಟ್ಟಿದ್ದಾರೆ ಎಂಬುದೇ ಜಮೀರ್ ವಾದ.

ಈ ಹಿಂದೆ, ಗಾಲಿ ಜನಾರ್ದನ ರೆಡ್ಡಿ ಅವರ ಬಳ್ಳಾರಿಯ ಮನೆ ಮೇಲೆ ಸಿಬಿಐ ದಾಳಿ ನಡೆದಾಗ, ಅಲ್ಲಿದ್ದ ಬಂಗಾರದ ಕುರ್ಚಿ ಅಧಿಕಾರಿಗಳನ್ನೇ ಬೆರಗುಗೊಳಿಸಿತ್ತು. ರೆಡ್ಡಿ ಅವರು ತಿರುಪತಿ ತಿಮ್ಮಪ್ಪನಿಗೆ ₹ 43 ಕೋಟಿ ಮೌಲ್ಯದ ವಜ್ರದ ಕಿರೀಟ ಅರ್ಪಿಸಿದ್ದು ಕೂಡಾ ಜನರ ನೆನಪಿನಿಂದ ದೂರವಾಗಿರಲಾರದು. ಇವು ಪ್ರಸಕ್ತ ರಾಜಕಾರಣ ಮತ್ತು ರಾಜಕಾರಣಿಗಳ ಶ್ರೀಮಂತಿಕೆಯ ಸಾಂಕೇತಿಕ ನಿದರ್ಶನಗಳಷ್ಟೇ. ಶೋಧಿಸಲು ಹೊರಟರೆ ಇವರಷ್ಟೇ ಅಥವಾ ಇವರನ್ನು ಮೀರಿಸುವ ರಾಜಕೀಯ ಕುಬೇರರು ಬೇಕಾದಷ್ಟು ಜನ ಎಲ್ಲೆಡೆ ಸಿಗುತ್ತಾರೆ.

ಸಂಪತ್ತಿನ ಕ್ರೋಡೀಕರಣದಲ್ಲಿ ಅಷ್ಟೇಯಲ್ಲ, ಭಂಡತನದ ಪ್ರದರ್ಶನದಲ್ಲೂ ರಾಜಕಾರಣಿಗಳು ಬಹಳ ಮುಂದಿದ್ದಾರೆ. ಕೊಲೆ ಆರೋಪದಲ್ಲಿ ಬೆಳಗಾವಿಯ ಹಿಂಡಲಗ ಜೈಲು ಸೇರಿದ್ದ ಮಾಜಿ ಸಚಿವ ವಿನಯ ಕುಲಕರ್ಣಿ ಒಂಬತ್ತು ತಿಂಗಳ ನಂತರ ಜಾಮೀನಿನ ಮೇಲೆ ಬಿಡುಗಡೆಯಾದಾಗ ದೊರಕಿದ ಅದ್ದೂರಿ ಸ್ವಾಗತ ಇದಕ್ಕೆ ಒಂದು ತಾಜಾ ನಿದರ್ಶನ.

ಜೈಲು ಬಳಿ ಸ್ವತಃ ಹಾಜರಾದ ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್, ಆರೋಪಿ ವಿನಯ ಕುಲಕರ್ಣಿ ಹಣೆಗೆ ತಿಲಕವಿಟ್ಟು, ಬಾಯಿಗೆ ಸಿಹಿ ತಿನ್ನಿಸಿ ಸ್ವಾಗತಿಸಿದ್ದಾರೆ. ಈ ಮೊದಲು ಡಿ.ಕೆ.ಶಿವಕುಮಾರ್ ತಿಹಾರ್ ಜೈಲಿನಿಂದ, ಬಿ.ಎಸ್.ಯಡಿಯೂರಪ್ಪ ಅವರು ಪರಪ್ಪನ ಅಗ್ರಹಾರ ಕಾರಾಗೃಹದಿಂದ ಹೊರಬಂದಾಗಲೂ ಇಂತಹದೇ ಸಂಭ್ರಮದ ಸ್ವಾಗತ ಸಿಕ್ಕಿದ್ದನ್ನು ಮರೆಯಲಾಗದು.

ಇವು ಸಮಕಾಲೀನ ಸಂದರ್ಭದ ರಾಜಕೀಯ ಶೈಲಿಯ ಬಿಡಿ ಪ್ರಕರಣಗಳಾಗಿದ್ದರೆ ತಲೆ ಕೆಡಿಸಿಕೊಳ್ಳಬೇಕಿರಲಿಲ್ಲ. ಆದರೆ ಇವು ಒಂದು ಇಡೀ ಊನ ವ್ಯವಸ್ಥೆಯ ಪ್ರತಿಬಿಂಬವಾದರೆ...? ಇಂತಹ ವ್ಯಕ್ತಿತ್ವಗಳು, ಸನ್ನಿವೇಶಗಳು, ದೃಶ್ಯಗಳು ಅನುಕರಣೀಯ ಮಾದರಿಗಳಾಗಿ ಸಮಾಜದಲ್ಲಿ ಬೇರಿಳಿಸಿದರೆ...? ಹೌದು, ನಾವು ಇಂತಹದೊಂದು ಅನಾಹುತಕಾರಿ ಸ್ಥಿತಿಗೆ ಸಾಕ್ಷಿಯಾಗುವ ಪ್ರಮೇಯ ಏರ್ಪಟ್ಟಿದೆ. ತಿರಸ್ಕಾರಕ್ಕೆ ಯೋಗ್ಯವಾದ ತಪ್ಪು ನಡೆಗಳನ್ನು ಅನಿವಾರ್ಯವಾಗಿಯೋ ಅಸಹಾಯಕತೆಯಿಂದಲೋ ಅಮಾಯಕತೆಯಿಂದಲೋ ಒಪ್ಪಿಕೊಳ್ಳುವ, ಸಹಿಸಿಕೊಳ್ಳುವ ವಿಚಿತ್ರ ಸ್ಥಿತಿಯಿದು.

ಇದಕ್ಕೆ ಪರ್ಯಾಯ ಮಾದರಿಗಳನ್ನು ಹುಡುಕಲು ನಾವು ಕೊಂಕಣ ಸುತ್ತುವ ಅಗತ್ಯವಿಲ್ಲ; ಅನೇಕ ನಿಸ್ವಾರ್ಥ ಜೀವಿಗಳು ಕೆಲವೇ ವರ್ಷಗಳ ಹಿಂದೆ ನಮ್ಮ ನಡುವೆಯೇ ನಡೆದಾಡಿ ಅಂತಹ ಆದರ್ಶದ ಜಾಡು ಬಿಟ್ಟುಹೋಗಿದ್ದಾರೆ:

ಎಂಬತ್ತರ ದಶಕದ ಆ ದಿನಗಳು. ಜನತಾ ಪಕ್ಷ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದಿತ್ತು. ಒಮ್ಮೆ ಜೆ.ಎಚ್. ಪಟೇಲ್, ಎಂ.ಚಂದ್ರಶೇಖರ್ ಮತ್ತು ಎಂ.ಪಿ.ಪ್ರಕಾಶ್ ಅವರು ಕಾರಿನಲ್ಲಿ ಹೊಸಪೇಟೆ ಮಾರ್ಗವಾಗಿ ಪಯಣಿಸುತ್ತಿದ್ದರು. ದಾರಿಯಲ್ಲಿ ಹಗರಿಬೊಮ್ಮನಹಳ್ಳಿ ಬಳಿ 'ಬಾಚಿಗೊಂಡನಹಳ್ಳಿ' ಹೆಸರಿನ ಫಲಕ ಕಾಣಿಸುತ್ತದೆ. ಅಲ್ಲಿಂದ ಕೆಲವೇ ಕಿಲೊ ಮೀಟರು ದೂರದ ಆ ಹಳ್ಳಿಯ ಹೆಸರು ಕಾರಿನಲ್ಲಿದ್ದ ಮೂವರೂ ರಾಜಕಾರಣಿಗಳ ಗಮನ ಸೆಳೆದು ಥಟ್ಟನೇ ಕಾರು ನಿಲ್ಲಿಸಲು ಸೂಚಿಸುತ್ತಾರೆ. ಪರಸ್ಪರ ಮುಖ ನೋಡಿಕೊಂಡರು. ಮೌನದಲ್ಲೇ ಒಮ್ಮತಕ್ಕೆ ಬಂದರು.

ತಾವು ಹೊರಟಿದ್ದ ಊರು ತಲುಪಲು, ಕಾರ್ಯಕ್ರಮದಲ್ಲಿ ಭಾಗವಹಿಸಲು ಒಂದಿಷ್ಟು ತಡವಾದರೂ ಪರವಾಗಿಲ್ಲ, ಫಲಕದಲ್ಲಿ ಬಾಣದ ಗುರುತು ತೋರಿದ ಹಳ್ಳಿಗೆ ಹೋಗಿಯೇ ಸೈ ಎಂಬ ಅವರ ನಿರ್ಣಯದಲ್ಲಿ ದೃಢತೆ ಇತ್ತು, ಪ್ರೀತಿ- ಅಭಿಮಾನ ಬೆರೆತಿತ್ತು. ಅದಕ್ಕೆ ಕಾರಣ ಆ ಊರಿನ ಹೆಸರಿನೊಂದಿಗೆ ಗುರುತಿಸಿಕೊಂಡು ಜನಾನುರಾಗಿ ರಾಜಕಾರಣದಲ್ಲಿ ಛಾಪು ಮೂಡಿಸಿದ್ದ ವ್ಯಕ್ತಿ. ಅವರ ಹೆಸರು ಕೆ.ಚನ್ನಬಸವನಗೌಡ.

ಈ ಮೂವರು ನಾಯಕರು ಬಾಚಿಗೊಂಡನಹಳ್ಳಿ ತಲುಪಿ ಗೌಡರ ಮನೆ ಪ್ರವೇಶಿಸುತ್ತಾರೆ. ಅವರ ಅನಿರೀಕ್ಷಿತ ಆಗಮನ ಹಿರಿಯರಾದ ಚನ್ನಬಸವನಗೌಡ ಅವರಿಗೆ ಖುಷಿ ಜೊತೆಗೆ ಒಂದಿಷ್ಟು ಸಂದಿಗ್ಧಕ್ಕೂ ಕಾರಣವಾಗುತ್ತದೆ. ಅವರ ಮನೆಯಲ್ಲಿ ಇದ್ದುದು ಕಟ್ಟಿಗೆಯ ಒಂದೂವರೆ ಕುರ್ಚಿಗಳು ಮಾತ್ರ; ಒಂದು ಹಳೆಯ ಪೂರ್ಣ ಕುರ್ಚಿ. ಇನ್ನೊಂದು ಕೈ ಮುರಿದ ಅರ್ಧ ಕುರ್ಚಿ. ಇದು ಅಷ್ಟೊತ್ತಿಗಾಗಲೇ ಮೂರು ಬಾರಿ ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದ, ಹಾಲಿ ಶಾಸಕರಾಗಿದ್ದ ಹಿರಿಯ ರಾಜಕಾರಣಿಯ ಮನೆ.

ಅತಿಥಿಗಳು ಮುಜುಗರ ಅನುಭವಿಸಿದರೇ ಹೊರತು ಗೌಡರ ವರ್ತನೆಯಲ್ಲಿ ಇನಿತೂ ಸಂಕೋಚ ಇಣುಕಲಿಲ್ಲ. ಎಲ್ಲರನ್ನೂ ಎಂದಿನಂತೆ ಸಹಜವಾಗಿಯೇ ಬರಮಾಡಿಕೊಂಡರು. ಕೊನೆಗೆ ನೆಲದ ಮೇಲೆ ಹಾಸಿದ ಕಡ್ಡಿಚಾಪೆ ಮೇಲೆ ಕುಳಿತು ಮಾತುಕತೆಯಲ್ಲಿ ಮುಳುಗಿದರು ಘಟಾನುಘಟಿ ನಾಯಕರು.

ಮತ್ತೊಂದು ಪ್ರಸಂಗ: 1983ನೇ ಇಸವಿಯ ಒಂದು ಮುಂಜಾನೆ. ಚನ್ನಬಸವನಗೌಡರು ಹಗರಿಬೊಮ್ಮನಹಳ್ಳಿಯಲ್ಲಿ ಸರ್ಕಾರಿ ಕೆಂಪು ಬಸ್ಸು ಹತ್ತಿ ಕುಳಿತಿದ್ದರು. ಬಸ್ಸು ನಿಧಾನವಾಗಿ ಚಲಿಸತೊಡಗಿತು. ರಸ್ತೆಯ ಇನ್ನೊಂದು ಬದಿಯಿಂದ ವ್ಯಕ್ತಿಯೊಬ್ಬ ಚಾಲಕನತ್ತ ಕೈಬೀಸುತ್ತಾ, ಬಸ್ಸು ನಿಲ್ಲಿಸುವಂತೆ ಕೂಗುತ್ತಾ ಓಡೋಡಿಬಂದ. ಆತ ಅಂಚೆ ಇಲಾಖೆ ನೌಕರ. ಬಸ್ ಒಳಗೆ ಗೌಡರ ಬಳಿ ಸಾಗಿದ ಆತ ಅವರ ಹೆಸರಿಗೆ ಬಂದಿದ್ದ ಟೆಲಿಗ್ರಾಂ ವಿತರಿಸಿದ. ಜನತಾ ಪಕ್ಷದ ಆಗಿನ ಅಧ್ಯಕ್ಷರಾಗಿದ್ದ ಎಸ್.ಆರ್.ಬೊಮ್ಮಾಯಿ ಅವರು ಕಳುಹಿಸಿದ್ದ ಆ ಟೆಲಿಗ್ರಾಂ ಗೌಡರನ್ನು ಕೂಡ್ಲಿಗಿ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ಸಂದೇಶ ಹೊತ್ತು ತಂದಿತ್ತು.

ಬಸ್ ಇಳಿದ ಗೌಡರು ನಾಮಪತ್ರ ಸಲ್ಲಿಸಲು ತಾಲ್ಲೂಕು ಕಚೇರಿಗೆ ತೆರಳಿದರು. ಅಲ್ಲಿ ಸೇರಿದ ಹಿತೈಷಿಗಳೇ ₹ 250 ಸಂಗ್ರಹಿಸಿ ಠೇವಣಿ ಕಟ್ಟಿದರು. ಚುನಾವಣೆ ಪ್ರಚಾರಕ್ಕೆ ಸಂಗ್ರಹವಾದ ₹ 85 ಸಾವಿರದಲ್ಲಿ ಕೊನೆಗೆ ₹ 70 ಸಾವಿರ ಖರ್ಚಾಗಿ ಉಳಿದ ₹ 15 ಸಾವಿರವನ್ನು ಗೌಡರಿಗೆ ಹಿಂದಿರುಗಿಸಲು ಹೋದಾಗ, 'ಅದು ಸಾರ್ವಜನಿಕರ ಹಣ, ನಾನು ಮುಟ್ಟಲ್ಲ' ಎಂದು ಹೇಳಿದರು.

ಆ ಚುನಾವಣೆಯಲ್ಲಿ ಗೌಡರು 423 ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ಜಯ ಸಾಧಿಸಿದರು. ಅಭಿನಂದಿಸಲು ಬಂದ ಅಭಿಮಾನಿಗಳಿಗೆ ಅವರು ಹೇಳಿದ್ದು: 'ನಾನು ಚುನಾವಣೆಗೆ ನಿಂತಿಲ್ಲ, ನಾನು ಗೆದ್ದಿಲ್ಲ. ನೀವೇ ನಿಲ್ಲಿಸಿದಿರಿ, ನೀವೇ ಗೆದ್ದಿರಿ'.

ಕೆಲವರು ಬಹುತೇಕರಂತೆ ಮಾತುಗಳಲ್ಲಿ, ಬರವಣಿಗೆಗಳಲ್ಲಿ ಸಂದೇಶ ನೀಡುವುದಿಲ್ಲ; ಅವರ ಬದುಕೇ ಒಂದು ಸಂದೇಶ. ನಶಿಸಿಹೋದ ಇಂತಹ ತಲೆಮಾರಿಗೆ ಸೇರಿದವರು ಬಾಚಿಗೊಂಡನಹಳ್ಳಿ ಚನ್ನಬಸವನಗೌಡರು. 'ನಾನೊಬ್ಬ ಸಾರ್ವಜನಿಕ' ಹೆಸರಿನಲ್ಲಿ ಪ್ರಕಟವಾಗಿರುವ ಗೌಡರ ಆತ್ಮಕತೆಯ ಪ್ರತಿಗಳು ಪುಸ್ತಕದ ಅಂಗಡಿಗಳಲ್ಲಿ, ಅವರ ಬದುಕಿನ ಸಂದೇಶಗಳು ಬದಲಾದ ರಾಜಕಾರಣದಲ್ಲಿ ಲಭ್ಯವಿಲ್ಲ!

ಕೆ.ಚನ್ನಬಸವನಗೌಡರ ಆತ್ಮಕತೆಯ ಪುಸ್ತಕ ಮತ್ತು ಆ ಪೀಳಿಗೆಯ ಆದರ್ಶದ ರಾಜಕಾರಣ ಮರುಪ್ರಕಟಣೆ ಕಾಣಲಿ, ಹೊಸ ತಲೆಮಾರಿಗೆ ಹಳೆಯ ರಾಜಕಾರಣದ ಮಾದರಿ ನಿಲುಕಲಿ ಎಂದು ಕನಸು ಕಾಣಲು ಕರ ತೆರಬೇಕಿಲ್ಲ ಎಂಬುದೇ ಒಂದಿಷ್ಟು ನೆಮ್ಮದಿಯ ವಿಚಾರ!



ಚುರುಮುರಿ

ಖುಷಿಗೊಂದು ಗುಂಡು!
• ಸುಮಂಗಲಾ

ಪೇಪರೋದುತ್ತಿದ್ದ ಬೆಕ್ಕಣ್ಣ ಬಲು ಗಂಭೀರವಾಗಿ 'ನಂಗೂ ಒಂದು ಬಂದೂಕು ಕೊಡಿಸು' ಎಂದಿತು.

'ಎದಕ್ಕಲೇ... ನೀಯೇನ್ ಅಫ್ಘಾನಿಸ್ತಾನಕ್ಕೆ ಹೋಕ್ಕೀಯೇನು', ನಾನು ಗಾಬರಿಬಿದ್ದೆ.

'ಇಲ್ಲವಾ...' ಎಂದು ಬಾಯಿಬಾಯಿ ಬಡಿದುಕೊಂಡಿತು. 'ಅಲ್ಲಿಗೆ ತಪ್ಪಿನೂ ಹೋಗಂಗಿಲ್ಲ. ಅಲ್ಲೋದ್ರೆ ನಾ ಹೆಣ್ಣು ಬೆಕ್ಕುಗಳ ಜೊತಿಗೆ ಆಡೂದು, ಕುಣಿಯೂದು ಎಲ್ಲ ಬಿಡಬೇಕಾಗತೈತಿ. ಒಂದೊಂದೇ ಕುಣಿಕೆ ಬಿಗಿ ಮಾಡ್ಕೋತ ನೂರಾರು ವರ್ಷ ಹಿಂದಕ್ಕೆ ಹೋಗ್ತಾರ' ಎಂದಿತು.

'ಮತ್ತೆ ಬಂದೂಕು ಎದಕ್ಕೆ...'

'ಏನರ ಭಾಳ ಖುಷಿಯಾದಾಗ ಗುಂಡು ಹಾರಿಸೂಣು ಅಂತ'.

'ಖುಷಿಯಾದಾಗ ರಾತ್ರಿ ಕುಂತು ಗುಂಡು ಹಾಕೂದು ಗೊತ್ತೈತಿ... ಇದೇನಲೇ ಗುಂಡು ಹಾರಿಸೂದು...' ಎಂದೆ ಅಚ್ಚರಿಯಿಂದ.

'ನಮ್ಮ ಹೊಸಾ ಗೃಹ ಸಚಿವ್ರು ಹೇಳ್ಯಾರ. ಅಗದಿ ಭಯಂಕರ ಖುಷಿಯಾದಾಗ ಗಾಳ್ಯಾಗ ಗುಂಡು ಹಾರಿಸೂ ಸಂಪ್ರದಾಯ ಮಲೆನಾಡು, ಕೊಡಗಿನ ಕಡಿಗಿ ಐತಿ ಅಂತ. ಹಳೇ ಸಂಪ್ರದಾಯ ಬಿಡಬಾರದು'.

'ಖುಷಿಯಾಗಾಕ ಏನು ಉಳಿದೈತಲೇ... ಅಕ್ಕಿ, ಬ್ಯಾಳಿ, ತರಕಾರಿ, ಗ್ಯಾಸು, ಪೆಟ್ರೋಲು ಎಲ್ಲಾನೂ ತುಟ್ಟಿಯಾಗೈತಿ. ಜೀವನಾ ವಜ್ಜೆಯಾಗೇದ, ಕೊರೊನಾ ಇನ್ನಾ ಪೂರಾ ಹೋಗಿಲ್ಲ. ಮಕಾಡೆ ಮಲಗಿದ್ದ ವ್ಯಾಪಾರ ವಹಿವಾಟು ಈಗೊಂಚೂರು ಎದ್ದೈತಿ ಅಷ್ಟೆ, ಎಲ್ಲಾ ಸರಿಯಾಗಾಕ ಇನ್ನಾ ಎಷ್ಟು ವರ್ಷ ಆಗತೈತಿ ಗೊತ್ತಿಲ್ಲ. ನಿಮ್ಮ ಆನಂದಮಾಮಾ ಬ್ಯಾರೆ ಕುರ್ಚಿ ಕೊಡೂತನಕ ದಗದ ಮಾಡಲ್ಲಂತ ಮೂತಿ ಉಬ್ಬಿಸ್ಯಾನ. ನಾ ಹೈಕಮಾಂಡ್ ಆಜ್ಞೆ ಕೇಳಲಾ ಅಥವಾ ಕುರ್ಚಿ ಕ್ಯಾತೆಗಾರರ ಪ್ರಲಾಪ ಕೇಳಲಾ ಅಂತ ಬೊಮ್ಮಾಯಿ ಅಂಕಲ್ಲಿಗೆ ಚಿಂತೆಯಾಗೈತಿ. ಯಾರಿಗಿ ಖುಷಿ ಐತಿ' ಎಂದೆ.

'ನೀ ಏನರ ಒಂದು ಗೋಳಿನ ಪುರಾಣ ಹಚ್ಚಬ್ಯಾಡ. ಇಷ್ಟಕೊಂದು ಶಾಸಕರು ಮಂತ್ರಿ ಕುರ್ಚಿನೇ ಬೇಕಂತ ಡಿಮ್ಯಾಂಡಿಟ್ಟಾರ ಅಂದ್ರ ಅವ್ರೆಲ್ಲಾರಿಗೂ ಜನರ ಸೇವಾ ಮಾಡಾಕೆ ಎಷ್ಟು ತುಡಿತ ಐತಿ ಅಂತ ಭಾಳ ಖುಷಿಪಡಬಕು' ಎಂದು ಕೊನೆಗೊಂದು ಮಾತಿನ ಗುಂಡು ಎಸೆಯಿತು!

ಸಂಗತ

ಕೃಷಿಭೂಮಿ ಮತ್ತು ನಿವೇಶನದ ಹವಣಿಕೆ

ನಿವೇಶನಗಳ ಸಲುವಾಗಿ ಕೃಷಿಭೂಮಿ ಖರೀದಿಸುವ ದಂಧೆ ವ್ಯಾಪಕವಾಗಿದೆ

• ರಾಜಕುಮಾರ ಕುಲಕರ್ಣಿ

ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿರುವ ನನ್ನ ಮಿತ್ರನಿಗೆ ನಗರದಲ್ಲಿ ಸ್ವಂತ ಮನೆ ಕಟ್ಟಿಕೊಳ್ಳುವಾಸೆ. ನಿವೇಶನ ಖರೀದಿಸಲು ₹ 20 ಲಕ್ಷದಿಂದ 25 ಲಕ್ಷದ ಅಗತ್ಯ ಎದುರಾಯಿತು. ಹಳ್ಳಿಯಲ್ಲಿರುವ ಎರಡು ಎಕರೆ ಕೃಷಿಭೂಮಿಯನ್ನು ಮಾರಾಟ ಮಾಡಿ, ಬಂದ ಹಣದಿಂದ ನಗರದಲ್ಲಿ 30x40 ಅಡಿಗಳ ಅಳತೆಯ ನಿವೇಶನ ಖರೀದಿಸಿದ. ಈಗ ಮನೆ ಕಟ್ಟಲು, ಉಳಿದಿರುವ ಎರಡು ಎಕರೆ ಕೃಷಿಭೂಮಿಯನ್ನು ಮಾರಾಟ ಮಾಡುವ ಹವಣಿಕೆಯಲ್ಲಿದ್ದಾನೆ.

ಒಂದು ಅಂದಾಜಿನಂತೆ, ನಗರ ಪ್ರದೇಶದಲ್ಲಿನ ಎರಡು ಗುಂಟೆಗಳ ನಿವೇಶನದ ಮೌಲ್ಯ ಗ್ರಾಮೀಣ ಪ್ರದೇಶದಲ್ಲಿನ 80 ಗುಂಟೆಗಳ ಕೃಷಿಭೂಮಿ ಮೌಲ್ಯಕ್ಕೆ ಸರಿಸಮವಾಗಿದೆ. ನಗರೀಕರಣದ ದಾಹಕ್ಕೆ ಕೃಷಿ ಭೂಮಿ ಬಲಿಯಾಗುತ್ತಿದೆ. ರೈತರಿಂದ ಕೃಷಿಭೂಮಿಯನ್ನು ಖರೀದಿಸಿ ನಿವೇಶನಗಳಾಗಿ ಪರಿವರ್ತಿಸಿ ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ. ಅಚ್ಚರಿಯೆಂದರೆ, ಕೆಲವೊಮ್ಮೆ ಸಂಬಂಧಿಸಿದ ಇಲಾಖೆಯಿಂದ ಒಪ್ಪಿಗೆಯನ್ನೇ ಪಡೆಯದೆ ಕೃಷಿಭೂಮಿಯನ್ನು ನಿವೇಶನಗಳಾಗಿ ಪರಿವರ್ತಿಸುತ್ತಾರೆ.

ಪರಿಚಿತರೊಬ್ಬರು ನಗರವೊಂದರ ಹೊರವಲಯದಲ್ಲಿರುವ ಕೃಷಿಭೂಮಿಯಲ್ಲಿ ಮನೆ ಕಟ್ಟಿಕೊಳ್ಳಲೆಂದು ಇತ್ತೀಚೆಗೆ ₹ 3 ಲಕ್ಷಕ್ಕೆ ಒಂದು ಗುಂಟೆ ಜಾಗ ಖರೀದಿಸಿದರು. ಅವರ ಪ್ರಕಾರ, ಮಧ್ಯವರ್ತಿಯು ₹ 50 ಲಕ್ಷಕ್ಕೆ ರೈತನಿಂದ ಐದು ಎಕರೆ ಕೃಷಿಭೂಮಿ ಖರೀದಿಸಿ ನಂತರ ಪ್ರತೀ ಒಂದು ಗುಂಟೆ ವಿಸ್ತೀರ್ಣದ ಜಾಗವನ್ನು ₹ 3 ಲಕ್ಷಕ್ಕೆ ಮಾರಾಟ ಮಾಡಿದ್ದಾನೆ. ಅದು ಅಕ್ರಮ ಎಂದು ಗೊತ್ತಿದ್ದೂ ಜನ ಅಲ್ಲಿ ನಿವೇಶನಗಳನ್ನು ಖರೀದಿಸಿದ್ದಾರೆ. ಮುಂದೊಂದು ದಿನ ಸರ್ಕಾರ ಅಕ್ರಮವನ್ನು ಸಕ್ರಮಗೊಳಿಸಬಹುದೆನ್ನುವ ದೂರದ ಆಸೆ ಅವರದು. ರೈತನಿಂದ ₹ 50 ಲಕ್ಷಕ್ಕೆ ಆ ಕೃಷಿಭೂಮಿಯನ್ನು ಖರೀದಿಸಿದ ಮಧ್ಯವರ್ತಿಗೆ ಒಂದೆರಡು ತಿಂಗಳುಗಳಲ್ಲೇ ₹ 4 ಕೋಟಿಯಿಂದ 5 ಕೋಟಿಯ ನಿವ್ವಳ ಲಾಭವಾಗಿದೆ.

ನಗರ ಪ್ರದೇಶಗಳಲ್ಲಿ ವಸತಿ ಸಮಸ್ಯೆ ಪರಿಹರಿಸಲು ಸರ್ಕಾರದ ಗೃಹಮಂಡಳಿಯಿಂದ ಕಡಿಮೆ ಬೆಲೆಗೆ ಮನೆ ಅಥವಾ ನಿವೇಶನ ಒದಗಿಸುವ ವ್ಯವಸ್ಥೆ ಚಾಲ್ತಿಯಲ್ಲಿದೆ. ಇಲ್ಲಿಯೂ ಸರ್ಕಾರ ವಸತಿ ಪ್ರದೇಶಕ್ಕಾಗಿ ಕೃಷಿಭೂಮಿಯನ್ನೇ ವಶಪಡಿಸಿಕೊಳ್ಳುತ್ತದೆ. ಒಂದು ಸಾವಿರ ನಿವೇಶನಗಳಿದ್ದರೆ ಬೇಡಿಕೆ ಕೋರಿ ಒಂದು ಲಕ್ಷ ಅರ್ಜಿಗಳು ಬಂದಿರುತ್ತವೆ. ಈಗಾಗಲೇ ಸ್ವಂತ ಮನೆ ಅಥವಾ ನಿವೇಶನ ಇರುವವರೂ ಅರ್ಜಿ ಗುಜರಾಯಿಸುತ್ತಾರೆ. ಕಡಿಮೆ ಬೆಲೆಗೆ ಖರೀದಿಸಿದ ನಿವೇಶನ ಭವಿಷ್ಯದಲ್ಲಿ ಆರ್ಥಿಕವಾಗಿ ಲಾಭ ತಂದುಕೊಡಬಹುದೆನ್ನುವ ದೂರಾಲೋಚನೆ ಅವರದು. ಇಲಾಖೆಯ ಅಧಿಕಾರಿಗಳಿಗೆ ಒಂದಿಷ್ಟು ಕಾಣಿಕೆ ಸಂದಾಯ ಮಾಡಿ ನಿವೇಶನಗಳನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಕಾರ್ಖಾನೆಗಳು, ವಿಶ್ವವಿದ್ಯಾಲಯಗಳು, ಸರ್ಕಾರದ ಆಡಳಿತ ಕಚೇರಿಗಳು ಇವೆಲ್ಲವುಗಳ ಸ್ಥಾಪನೆಗೆ ಸಾವಿರಾರು ಎಕರೆ ಕೃಷಿಭೂಮಿ ಬಳಕೆಯಾಗುತ್ತಿದೆ. ರಸ್ತೆಗಳ ಅಗಲೀಕರಣ, ಹೆದ್ದಾರಿಗಳ ನಿರ್ಮಾಣದಲ್ಲಿಯೂ ಕೃಷಿಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತದೆ. ನಗರ ಪ್ರದೇಶಗಳಿಗೆ ಸಮೀಪದಲ್ಲಿರುವ ಹಳ್ಳಿಗಳ ಕೃಷಿಭೂಮಿಯಲ್ಲಿ ಇಟ್ಟಿಗೆ ಕಾರ್ಖಾನೆಗಳು, ಕಂಕರ್ ಉತ್ಪಾದನೆ ಕೇಂದ್ರಗಳು, ರೆಸಾರ್ಟ್‌ಗಳು ಮತ್ತು ಡಾಬಾಗಳು ಕಾರ್ಯನಿರ್ವಹಿಸುತ್ತಿವೆ. ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ಎಡ-ಬಲದ ಕೃಷಿ ಭೂಮಿಯಲ್ಲಿ ಸಾಲುಸಾಲು ಮನೆಗಳು ಮತ್ತು ವಾಣಿಜ್ಯ ಸಂಕೀರ್ಣಗಳು ನಿರ್ಮಾಣಗೊಳ್ಳುತ್ತಿರುವುದು ಪ್ರತೀ ಹಳ್ಳಿಯಲ್ಲೂ ಕಂಡುಬರುವ ಸಾಮಾನ್ಯ ದೃಶ್ಯ.

ಭೂಮಿ ಈಗ ಹಣ ಹೂಡಿಕೆಯ ಉತ್ಪಾದನಾ ಕ್ಷೇತ್ರವಾಗಿ ಬಂಡವಾಳದಾರರನ್ನು ಆಕರ್ಷಿಸುತ್ತಿದೆ. ಆರ್ಥಿಕ ಸ್ಥಿತಿವಂತರು ಭೂಮಿ ಖರೀದಿಗಾಗಿ ಹಣ ಹೂಡುತ್ತಿದ್ದಾರೆ. ಸ್ವಂತದ ಮನೆಯಿದ್ದೂ ಲಾಭದ ದೃಷ್ಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನಗಳನ್ನು ಖರೀದಿಸುವ ದುರಾಸೆ ಜನರಲ್ಲಿ ಹೆಚ್ಚುತ್ತಿದೆ. ಇದನ್ನೇ ಬಂಡವಾಳವಾಗಿಟ್ಟುಕೊಂಡು ಉದ್ಯಮಿಗಳು ರೈತರಿಂದ ಕಡಿಮೆ ಬೆಲೆಗೆ ಕೃಷಿಭೂಮಿಯನ್ನು ಖರೀದಿಸಿ ನಿವೇಶನಗಳನ್ನಾಗಿಸಿ ಮಾರಾಟ ಮಾಡುತ್ತಿದ್ದಾರೆ. ಕಪ್ಪುಹಣ ಭೂಮಿ ಖರೀದಿಗಾಗಿ ಹರಿದು ಬರುತ್ತಿದೆ. ಕೃಷಿಭೂಮಿ ಅಥವಾ ನಿವೇಶನದ ಖರೀದಿ ಸಂದರ್ಭ ಕೈಬದಲಾಗುವ ಹಣ ಮತ್ತು ನೋಂದಣಿ ಇಲಾಖೆಯಲ್ಲಿ ದಾಖಲಿಸುವ ಬೆಲೆ ನಡುವೆ ತುಂಬ ವ್ಯತ್ಯಾಸವಿರುತ್ತದೆ. ಖರೀದಿಸುವಾತ ಪಾವತಿಸುವ ಒಟ್ಟುಹಣ ನೋಂದಣಿ ಇಲಾಖೆಯಲ್ಲಿ ದಾಖಲಾಗುವುದೇ ಇಲ್ಲ. ಇದು ಸರ್ಕಾರದಿಂದ ಶ್ರೀಸಾಮಾನ್ಯನವರೆಗೆ ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ.



ವರ್ಷದಿಂದ ವರ್ಷಕ್ಕೆ ಕೃಷಿಭೂಮಿ ಕ್ಷೀಣಿಸುತ್ತಿರುವುದು ಮುಂದೊಂದು ದಿನ ತೀವ್ರ ಆಹಾರ ಕ್ಷಾಮವನ್ನು ಸೃಷ್ಟಿಸಲಿದೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ಈಗಲಾದರೂ ಸರ್ಕಾರ ಮತ್ತು ಸಾರ್ವಜನಿಕರು ಎಚ್ಚೆತ್ತುಕೊಳ್ಳಬೇಕು. ಈ ಬೆಳವಣಿಗೆಯನ್ನು ನಿಯಂತ್ರಿಸುವ ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು.

ಕೃಷಿಕರಲ್ಲದವರು ಕೃಷಿಭೂಮಿ ಖರೀದಿಸಲು ಅನುಕೂಲವಾಗುವಂತೆ ಇತ್ತೀಚೆಗೆ ಕಾಯ್ದೆಗೆ ಸರ್ಕಾರ ತಿದ್ದುಪಡಿ ತಂದಿದೆ. ನಿಜಕ್ಕೂ ಇದು ಆತಂಕಪಡುವ ಬೆಳವಣಿಗೆ. ಈಗಾಗಲೇ ವರ್ಷದಿಂದ ವರ್ಷಕ್ಕೆ ಕೃಷಿ ಭೂಮಿಯ ವ್ಯಾಪ್ತಿ ಕ್ಷೀಣಿಸುತ್ತಿದೆ. ಕಾಯ್ದೆಯಲ್ಲಾದ ತಿದ್ದುಪಡಿಯಿಂದಾಗಿ ಬಂಡವಾಳದಾರರು ಕೃಷಿಭೂಮಿಯನ್ನು ಖರೀದಿಸಿ ಅದನ್ನು ವಸತಿ ಪ್ರದೇಶಗಳಾಗಿ ಪರಿವರ್ತಿಸಲು ಹಳ್ಳಿಗಳಿಗೆ ಲಗ್ಗೆಯಿಡಲಿದ್ದಾರೆ. ನಿವೇಶನಗಳನ್ನು ಖರೀದಿಸಲು ಸ್ಥಿತಿವಂತರು ಪೈಪೋಟಿಗಿಳಿಯುವರು. ಇವರುಗಳ ನಡುವೆ, ವರ್ಷವಿಡೀ ಮಣ್ಣಲ್ಲಿ ಮಣ್ಣಾಗಿ ದುಡಿದರೂ ನಾಲ್ಕು ಕಾಸು ಕಾಣದ ರೈತರು, ಬಂಡವಾಳದಾರರ ಆಮಿಷಕ್ಕೆ ಬಲಿಯಾಗಿ ಕೃಷಿಭೂಮಿಯನ್ನು ಪರಭಾರೆ ಮಾಡಿ ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿದ್ದಾರೆ.

ವಾಚಕರ ವಾಣಿ

ಬೆಟ್ಟಗುಡ್ಡಗಳನ್ನೇ ಬಿಡದವರು...

ನಕಲಿ ವ್ಯಾಜ್ಯ ಹೂಡಿ ಭೂಕಬಳಿಕೆ ಮಾಡುತ್ತಿರುವವರ ಕುರಿತ ವರದಿ (ಪ್ರ.ವಾ., ಆ. 22) ಪ್ರಕಟವಾಗಿದೆ. ಭೂಕಬಳಿಕೆ ಬಹಳ ಹಿಂದಿನಿಂದಲೂ ನಡೆಯುತ್ತಿದ್ದು, ಸರ್ಕಾರ ಈಗಲಾದರೂ ಅದನ್ನು ಸರಿಯಾಗಿ ಪರಾಂಬರಿಸಬೇಕು. ಬೆಟ್ಟಗುಡ್ಡಗಳನ್ನೇ ಬಿಡದ ದಲ್ಲಾಳಿಗಳು ಇನ್ನು ಬೆಂಗಳೂರಿನಂತಹ ನಗರದಲ್ಲಿ ಖಾಲಿ ಜಾಗವನ್ನು ಸುಮ್ಮನೆ ಬಿಟ್ಟಾರೆಯೇ? ಇದಕ್ಕೆ ಮುಖ್ಯವಾಗಿ ಸಬ್ ರಿಜಿಸ್ಟ್ರಾರ್ ಹಾಗೂ ಅಧಿಕಾರಿಗಳೇ ಕಾರಣ. ಅವರ ಗಮನಕ್ಕೆ ಬಾರದೆ ಆ ಸ್ಥಳಗಳು ಬಿಕರಿಯಾಗುವುದು ಅಸಾಧ್ಯ. ಮೊದಲು ಅಂತಹ ಕೆಟ್ಟ ಹುಳುಗಳನ್ನು ಇಲಾಖೆಯಿಂದ ತೆಗೆದರೆ ಎಲ್ಲವೂ ಸುಲಲಿತವಾಗುತ್ತವೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಕನಸು ಛಿದ್ರಗೊಳಿಸಿದ ವಿಭಜನೆ

ದೇಶ 'ವಿಭಜನೆಯ ಕ್ರೌರ್ಯದ ನೆನಪಿನ ದಿನ' ಆಚರಣೆಗೆ ವಿರೋಧ ವ್ಯಕ್ತಪಡಿಸಿರುವ ಕೆ.ಪಿ.ಸುರೇಶ್ ಅವರ ಲೇಖನವನ್ನು (ಪ್ರ.ವಾ., ಆ. 21) ಓದಿ ಮನಸ್ಸಿಗೆ ಅಹಿತವಾಯಿತು. ದೇಶ ವಿಭಜನೆಯು ಕೋಟ್ಯಂತರ ಜನರ ಕನಸುಗಳನ್ನು, ಭಾವೈಕ್ಯ ಭಾವನೆಗಳನ್ನು ಛಿದ್ರಗೊಳಿಸಿತು. ಎಷ್ಟೋ ಪ್ರದೇಶಗಳು ವಿಭಜನೆಯಿಂದ ದಾಯಾದಿಗಳಂತಾಗಿ ಸಾಮಾಜಿಕ, ಆರ್ಥಿಕ ಹಿನ್ನಡೆ ಅನುಭವಿಸುವಂತೆ ಆಗಿರುವುದು ಸತ್ಯವೇ ಆಗಿದೆ. ಹೀಗಿದ್ದಾಗ್ಯೂ ಇಡೀ ಲೇಖನದಲ್ಲಿ ಪ್ರಧಾನಿಯವರನ್ನು ತಪ್ಪಿತಸ್ಥರೆಂದು ಬಿಂಬಿಸುವ ಪ್ರಯತ್ನ ಢಾಳಾಗಿ ಕಾಣುತ್ತಿದೆ. ಸಾಮರಸ್ಯಕ್ಕಾಗಿ ನರೇಂದ್ರ ಮೋದಿಯವರ ಅಫ್ಘಾನಿಸ್ತಾನ, ಪಾಕಿಸ್ತಾನದ ಭೇಟಿಗಳನ್ನು ಲೇಖಕರು ಏಕೆ ಮರೆತರೋ ತಿಳಿಯುತ್ತಿಲ್ಲ!

ಚಂದನ ಶಂಕರ್, ಮೈಸೂರು

ಭಾವನೆ ಕೆದಕುವ ಅಗತ್ಯ ಇದೆಯೇ?

ದೇಶ ವಿಭಜನೆಯ ಕ್ರೌರ್ಯದ ನೆನಪಿನ ದಿನ ಆಚರಿಸುವ ಅಗತ್ಯದ ಪರವಾಗಿ ಆರ್‌ಎಸ್‌ಎಸ್‌ನ ರಾಮ್ ಮಾಧವ್ ಚರ್ಚಿಸಿದ್ದಾರೆ (ಪ್ರ.ವಾ., ಆ. 21). ಅದರ ಅಗತ್ಯ ಇಲ್ಲ ಎಂಬುದು ನನ್ನ ಅಭಿಪ್ರಾಯ. ಬಿಜೆಪಿಯ ಈ ನಡೆಯು ಹಿಂದೂ ಮತಗಳ ಧ್ರುವೀಕರಣದ ಉದ್ದೇಶದಿಂದ ಕೂಡಿದೆ ಎಂದು ಚಿಕ್ಕ ಮಕ್ಕಳೂ ಹೇಳಬಹುದು. ಇದರಿಂದ ಹಿಂದೂ ಮತ್ತು ಮುಸ್ಲಿಂ ಪ್ರಜೆಗಳ ನಡುವೆ ದ್ವೇಷದ ಭಾವನೆ ಇನ್ನೂ ಹೆಚ್ಚಾಗುತ್ತದೆ. ಈ ರೀತಿ ಜನರ ಭಾವನೆಗಳನ್ನು ಕೆದಕುವ ರಾಜಕೀಯದ ಅವಶ್ಯಕತೆಯಾದರೂ ಬಿಜೆಪಿಗೆ ಯಾಕೆ ಬೇಕು? ಅಷ್ಟಕ್ಕೂ ಹಿಂದೂಗಳಿಗೆ ಅನ್ಯಾಯವಾಗುವುದನ್ನು ತಡೆಯಬೇಕೆಂದಿದ್ದರೆ 'ಸಮಾನ ನಾಗರಿಕ ಸಂಹಿತೆ' ಜಾರಿಗೆ ತರಲಿ. ದೇಶದಲ್ಲಿ ಎಲ್ಲರಿಗೂ ಒಂದೇ ರೀತಿಯ ಕಾನೂನಿರಲಿ.

ರಾಮ್ ಮಾಧವರ ಗಾಢವಾದ ಕನಸಿನಂತೆ, ಈ ಎರಡು ದೇಶಗಳು ವಿಲೀನಗೊಳ್ಳುವುದು ಅಸಾಧ್ಯವಲ್ಲವೇ? ಪೂರ್ತಿ ವಿಲೀನ ಹಾಗಿರಲಿ, ಪಾಕಿಸ್ತಾನ ಹಾಗೂ ಚೀನಾ ಆಕ್ರಮಿತ ಕಾಶ್ಮೀರವನ್ನು ದಶಕಗಳು ಕಳೆದರೂ ವಶಪಡಿಸಿಕೊಳ್ಳಲು ಸಾಧ್ಯವಾಯಿತೇ?

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಇದೇ ಇರಬಹುದೇ?!

ಹಿಂದೆ ಯುದ್ಧದಲ್ಲಿ ಗೆದ್ದು
ಮರಳಿದ ರಾಜರುಗಳಿಗೆ
ತಿಲಕವಿಟ್ಟು, ಆರತಿ ಎತ್ತಿ
ಸಂಭ್ರಮದಿಂದ ಸ್ವಾಗತಿಸುತ್ತಿದ್ದರು,
ಇಂದು, ಜೈಲಿನಿಂದ ಜಾಮೀನಿನ
ಮೇಲೆ ಹೊರಬಂದವರಿಗೆ
ಶಾಲು ಹೊದಿಸಿ, ಹೂಮಾಲೆ ಹಾಕಿ
ಸಂಭ್ರಮಿಸುವವರು ಹೆಚ್ಚಾಗುತ್ತಿದ್ದಾರೆ!
'ಪರಿವರ್ತನೆ ಜಗದ ನಿಯಮ'
ಅಂದರೆ ಇದೇ ಇರಬಹುದೇ?!

ಎಚ್.ಕೆ.ಕೊಟ್ರಪ್ಪ, ಹರಿಹರ

ಕಾನ್‌ಸ್ಟೆಬಲ್‌ಗಳ ತಲೆದಂಡ ಸರಿಯಲ್ಲ

ಯಾದಗಿರಿ ಜಿಲ್ಲೆಯ ಯರಗೋಳದಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರು ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಕೆಲವರು ಬಂದೂಕುಗಳಿಂದ ಸಿಡಿಮದ್ದು ಹಾರಿಸಿದ ಪ್ರಕರಣದ ಹಿನ್ನೆಲೆಯಲ್ಲಿ, ಕರ್ತವ್ಯನಿರತ ಮೂವರು ಕಾನ್‌ಸ್ಟೆಬಲ್‌ಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ) ಅಮಾನತು ಮಾಡಿರುವುದು ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ ಆಗಿದೆ. ಸಿಡಿಮದ್ದು ಹಾರಿಸಿದ್ದನ್ನು ಕೇಂದ್ರ ಸಚಿವರೇ ಸಮರ್ಥನೆ ಮಾಡಿಕೊಂಡಿದ್ದಾರೆ. ಹೀಗಿರುವಾಗ, ಸಿಡಿಮದ್ದು ಹಾರಿಸಿದ್ದು ತಪ್ಪು ಎಂದಾದರೆ, ಅದನ್ನು ಸಮರ್ಥಿಸಿಕೊಂಡ ಸಚಿವರ ವಿರುದ್ಧ ಇಲ್ಲವೇ ಕೊರೊನಾ ನಿಯಮಗಳನ್ನು ಗಾಳಿಗೆ ತೂರಿ ಅದ್ದೂರಿ ಕಾರ್ಯಕ್ರಮ ಆಯೋಜಿಸಿದ ಆಯೋಜಕರ ವಿರುದ್ಧ ಎಸ್.ಪಿ. ಕ್ರಮ ಕೈಗೊಳ್ಳಲಿ. ಕಾರ್ಯಕ್ರಮ ಆಯೋಜನೆಗೆ ಅನುಮತಿ ಪಡೆದಿರಲಿಲ್ಲ ಎಂದು ಹೇಳುವ ಅವರು, ಅಲ್ಲಿಗೆ ಕಾನ್‌ಸ್ಟೆಬಲ್‌ಗಳನ್ನು ನಿಯೋಜಿಸಿದ್ದು ಏತಕ್ಕೆ? ಸಿಡಿಮದ್ದಿನ ವಿಚಾರ ಸುದ್ದಿ ಆಗದೇ ಇದ್ದಿದ್ದರೆ ಈ ಕಾರ್ಯಕ್ರಮವು ಯಾರ ಗಮನಕ್ಕೂ ಬರುತ್ತಿರಲಿಲ್ಲ. ಆಗ ಯಾರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದಿರಿ?

ರಾಜು ಬಿ. ಲಕ್ಕಂಪುರ, ಜಗಳೂರು

ಇದ್ದಾರೆ ಹಿಟ್ಲರನ ಸಮರ್ಥಕರು!

ಖಾಸಗಿ ಟಿ.ವಿ. ವಾಹಿನಿಯೊಂದರಲ್ಲಿ ಈಚೆಗೆ 'ಹಿಟ್ಲರ್ ಕಲ್ಯಾಣ' ಎಂಬ ಹೆಸರಿನ ಧಾರಾವಾಹಿ ಪ್ರಸಾರವಾಗುತ್ತಿದೆ. ಅದರ ನಿರ್ದೇಶಕರು ಯಾವ ಸದುದ್ದೇಶದಿಂದ ಇಂತಹ ಶೀರ್ಷಿಕೆ ರೂಪಿಸಿದ್ದಾರೋ ತಿಳಿಯದು. ಲಕ್ಷಾಂತರ ಯಹೂದಿಗಳ ದಾರುಣ ಅಂತ್ಯಕ್ಕೆ ಕಾರಣನಾದ ಹಿಟ್ಲರನನ್ನು ಶೀರ್ಷಿಕೆಯನ್ನಾಗಿಸಿ ಜನರಿಗೆ ಯಾವ ಸಂದೇಶ ತಲುಪಿಸಲಾಗುತ್ತಿದೆ? ನಮ್ಮ ಸಂಬಂಧಿಕರ ಮಗನೊಬ್ಬ, 'ಹಿಟ್ಲರ್ ಯಾರು' ಎಂಬ ಪ್ರಶ್ನೆಗೆ 'ಅದೇ, ಆ ಧಾರಾವಾಹಿಯ ಹೀರೊ' ಎಂದು ಉತ್ತರಿಸಿದ್ದ. ನಾವೆಲ್ಲ ಅದೊಂದು ದೊಡ್ಡ ಜೋಕ್ ಎಂಬಂತೆ ನಕ್ಕಿದ್ದೆವು. ಪರಿಚಿತರೊಬ್ಬರ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಿಟ್ಲರ್ ಹಾಗೂ ಆತನ ಕೃತ್ಯಗಳ ಸಮರ್ಥನೆಯ ವಿಡಿಯೊ ತುಣುಕೊಂದನ್ನು ನೋಡಿ ಅತ್ಯಾಶ್ಚರ್ಯವಾಗಿತ್ತು. 'ಸೀತೆಯನ್ನು ಕಾಡಿಗಟ್ಟಿದ ರಾಮನಿಗಿಂತ, ಆಕೆಯ ಒಪ್ಪಿಗೆಗೆ ಕಾದ ರಾವಣ ಮೇಲು' ಎಂದೋ, 'ಹಲವು ಹೆಂಡಿರ ಗಂಡ ಕೃಷ್ಣನಿಗಿಂತ, ಏಕಪತ್ನೀಧರನಾದ ದುರ್ಯೋಧನ ಶ್ರೇಷ್ಠ' ಎಂದೋ ಬಿಂಬಿಸುವ ಹತ್ತು ಹಲವು ಸಂಗತಿಗಳನ್ನು ನಿತ್ಯ ನೋಡುತ್ತಲೇ ಇದ್ದೇವೆ. ಅಂತೆಯೇ ಹಿಟ್ಲರನನ್ನೂ ಸಮರ್ಥಿಸಿಕೊಳ್ಳುವವರು ಇದ್ದಾರೆ ಎನ್ನುವುದು, ಜನಪ್ರಿಯ ವಾಹಿನಿಯೊಂದು ನರಹಂತಕನ ಹೆಸರಿನಲ್ಲಿ 'ಕಲ್ಯಾಣ' ಸಾಧಿಸಲು ಹೊರಟಿರುವುದು ಸರಿಯಲ್ಲ.

ಪ್ರದೀಪ ಟಿ.ಕೆ., ತಿಮ್ಮೇಗೌಡನದೊಡ್ಡಿ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೂರು ಹುಡುಕುವ ನಿರಾಶ್ರಿತರು

ನಿರಾಶ್ರಿತರ ಸಮಸ್ಯೆ ಕಳೆದ ಒಂದು ದಶಕದಲ್ಲಿ ತೀವ್ರಗೊಂಡಿದೆ. 2010ಕ್ಕೆ ಹೋಲಿಸಿದರೆ 2020ರ ವೇಳೆಗೆ ವಿಶ್ವದಾದ್ಯಂತ ನಿರಾಶ್ರಿತರ ಸಂಖ್ಯೆ ದುಪ್ಪಟ್ಟಿಗಿಂತಲೂ ಹೆಚ್ಚಾಗಿದೆ. ಈ ಒಂದು ದಶಕದಲ್ಲಿ ವಿಶ್ವದಾದ್ಯಂತ ತಲೆದೋರಿದ ನಿರಾಶ್ರಿತರ ಸಮಸ್ಯೆಗೆ ಆಂತರಿಕ ಕಲಹವೇ ಕಾರಣವಾಗಿದೆ. ನಿರಾಶ್ರಿತರಾಗಿ ತಮ್ಮ ದೇಶದಿಂದ ಹೊರಬಿದ್ದ ಜನರು, ಆಶ್ರಯ ಪಡೆದದ್ದು ನೆರೆಯ ದೇಶಗಳಲ್ಲಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆಶ್ರಯ ಪಡೆದ ನಿರಾಶ್ರಿತರ ಸಂಖ್ಯೆ ಕಡಿಮೆಯೇ ಇದೆ

ಅಫ್ಗಾನಿಸ್ತಾನದಿಂದ ಬಂದ ವಲಸಿಗರ ಗುಂಪನ್ನು ಟರ್ಕಿ ಭದ್ರತಾ ಪಡೆ ಸಿಬ್ಬಂದಿ ಗಡಿಯಲ್ಲಿ ತಡೆದು ವಶಕ್ಕೆ ಪಡೆದರು ಪಿಟಿಐ ಚಿತ್ರ

ಅಫ್ಗಾನಿಸ್ತಾನದ ಕಳವಳ

ಅಫ್ಗಾನಿಸ್ತಾನವು ತಾಲಿಬಾನ್ ಪ್ರಾಬಲ್ಯಕ್ಕೆ ಒಳಪಟ್ಟ ಒಂದು ವಾರದಲ್ಲಿ ಅಲ್ಲಿನ ನಾಗರಿಕರ ಸ್ಥಿತಿ ಅಯೋಮಯವಾಗಿದೆ. ಮತ್ತೆ ಯುದ್ಧ, ಬಂದೂಕು, ಕ್ರೌರ್ಯ ಮೇಲುಗೈ ಸಾಧಿಸಲಿದೆ ಎಂಬ ಭೀತಿ ಜನರನ್ನು ಕಂಗೆಡಿಸಿದೆ. ದೇಶದಿಂದ ಹೇಗಾದರೂ ಪಲಾಯನ ಮಾಡಿ, ಜೀವ ಉಳಿಸಿಕೊಳ್ಳುವ ಅನಿವಾರ್ಯದಲ್ಲಿ ಅಫ್ಗನ್ನರು ಸಿಲುಕಿದ್ದು ಜಗತ್ತು ಮತ್ತೊಂದು ಸುತ್ತಿನ ನಿರಾಶ್ರಿತರ ಸಮಸ್ಯೆಯನ್ನು ಎದುರಿಸಲೇಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಕಾಬೂಲ್‌ನ ಹಮೀದ್ ಕರ್ಜಾಯಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಒಂದು ವಾರದಿಂದ ಸಾಗರೋಪಾದಿಯಲ್ಲಿ ಜಮಾವಣೆಯಾಗಿರುವ ಜನರನ್ನು ಗಮನಿಸಿದರೆ, ನಿರಾಶ್ರಿತರ ಸಮಸ್ಯೆಯ ತೀವ್ರತೆ ಅರ್ಥವಾಗುತ್ತದೆ. ವಿಮಾನ ಚಾವಣಿಯಿಂದ ಹಿಡಿದು, ಚಕ್ರಗಳ ಮೇಲೂ ಜನರು ಕುಳಿತು ದೇಶ ತೊರೆಯಲು ಹವಣಿಸಿದ್ದನ್ನು ಇಡೀ ಜಗತ್ತು ಗಮನಿಸಿದೆ.

ತಾಲಿಬಾನ್ ಆಡಳಿತಕ್ಕೊಳಪಟ್ಟ ಅಫ್ಗನ್ ಪ್ರಜೆಗಳ ಭವಿಷ್ಯದ ಮೇಲೆ ಅನಿಶ್ಚಿತ ಸ್ಥಿತಿಯ ಕಾರ್ಮೋಡ ಆವರಿಸಿದೆ. ಅಫ್ಗಾನಿಸ್ತಾನದಿಂದ ಬರುವ ‘ವಲಸಿಗರ ಹೆಚ್ಚುವರಿ ಹೊರೆ’ಯನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ಟರ್ಕಿ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವು ದೇಶಗಳು ಟರ್ಕಿ ನಿಲುವನ್ನೇ ತಳೆದಿವೆ. ಆದರೆ, ಇನ್ನಷ್ಟು ರಾಷ್ಟ್ರಗಳು ಅಫ್ಗನ್ ನಿರಾಶ್ರಿತರನ್ನು ತಮ್ಮ ದೇಶಕ್ಕೆ ಸ್ವಾಗತಿಸುವ ಬಗ್ಗೆ ನೀತಿಗಳನ್ನು ಪ್ರಕಟಿಸಿವೆ.

ಅಮೆರಿಕ

ಆಗಸ್ಟ್ 2 ರಂದು ಅಮೆರಿಕದ ವಿದೇಶಾಂಗ ಸಚಿವಾಲಯವು ಆದ್ಯತೆ 2 (ಪಿ-2) ಅನ್ನು ಘೋಷಿಸಿತು. ಇದರ ಪ್ರಕಾರ, ಕೆಲವು ಅರ್ಹ ಅಫ್ಗನ್ ಪ್ರಜೆಗಳು ಮತ್ತು ಅವರ ಕುಟುಂಬ ಸದಸ್ಯರಿಗೆ ‘ಅಮೆರಿಕ ನಿರಾಶ್ರಿತರ ಪ್ರವೇಶ ಕಾರ್ಯಕ್ರಮ’ದ (ಯುಎಸ್‌ಆರ್‌ಪಿ) ಮೂಲಕ ಪ್ರವೇಶ ನೀಡಲಾಗುತ್ತದೆ.

ತನ್ನ ಜತೆ ಕಳೆದ 20 ವರ್ಷಗಳಲ್ಲಿ ಕೆಲಸ ಮಾಡಿದ ಕೆಲವು ಅಫ್ಗನ್ನರನ್ನು ರಕ್ಷಿಸುವ ಜವಾಬ್ದಾರಿಯು ಅಮೆರಿಕದ್ದಾಗಿದೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ. ವರದಿಗಳ ಪ್ರಕಾರ, ಅಮೆರಿಕವು 10,000ಕ್ಕೂ ಹೆಚ್ಚು ಅಫ್ಗನ್ ಪ್ರಜೆಗಳಿಗೆ ಅವಕಾಶ ನೀಡುವ ನಿರೀಕ್ಷೆಯಿದೆ.

ಬ್ರಿಟನ್

ಒತ್ತಾಯಪೂರ್ವಕವಾಗಿ ಪಲಾಯನ ಮಾಡಿದ ಅಥವಾ ತಾಲಿಬಾನ್‌ನಿಂದ ಕಿರುಕುಳ, ಬೆದರಿಕೆ ಎದುರಿಸುತ್ತಿರುವವರಿಗೆ ಬ್ರಿಟನ್‌ನಲ್ಲಿ ಕಾಯಂ ಆಶ್ರಯ ನೀಡಲಾಗುವುದು ಎಂದು ಇದೇ 18ರಂದು ಬ್ರಿಟನ್ ಘೋಷಿಸಿತ್ತು. ಮಹಿಳೆಯರು, ಬಾಲಕಿಯರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಆದ್ಯತೆ ನೀಡುವ ಮಾತು ಕೊಟ್ಟಿತ್ತು. ಪುನರ್ವಸತಿ ಯೋಜನೆಯ ಮೊದಲ ವರ್ಷದಲ್ಲಿ ಪ್ರಸ್ತುತ ಬಿಕ್ಕಟ್ಟಿನಿಂದ ಅಪಾಯದಲ್ಲಿರುವ 5,000 ಅಫ್ಗನ್ ಪ್ರಜೆಗಳಿಗೆ ನೆರವು ನೀಡಲಿದೆ. ಒಟ್ಟು 20,000 ನಿರಾಶ್ರಿತರಿಗೆ ಈ ಯೋಜನೆಯಡಿ ಪುನರ್ವಸತಿ ಕಲ್ಪಿಸುವ ಗುರಿ ಹೊಂದಿದೆ.

ಕೆನಡಾ

20 ಸಾವಿರ ಅಫ್ಗನ್ನರನ್ನು ದೇಶದೊಳಕ್ಕೆ ಬರಮಾಡಿಕೊಳ್ಳುವುದಾಗಿ ಕೆನಡಾ ಘೋಷಿಸಿದೆ. ಅಮೆರಿಕ ಅಥವಾ ಇತರ ಮಿತ್ರರಾಷ್ಟ್ರಗಳು ಬಯಸಿದಲ್ಲಿ, ಹೆಚ್ಚುವರಿ ಅಫ್ಗನ್ ನಿರಾಶ್ರಿತರಿಗೆ ಪ್ರವೇಶ ನೀಡುವುದನ್ನು ಕೆನಡಾ ಪರಿಗಣಿಸಲಿದೆ ಎಂದು ವಲಸೆ ಸಚಿವ ಮಾರ್ಕೊ ಮೆಂಡಿಸಿನೊ ತಿಳಿಸಿದ್ದಾರೆ.

ಯುರೋಪ್

2015ರ ವಲಸಿಗರ ಬಿಕ್ಕಟ್ಟಿನ ಹೊಡೆತ ಎದುರಿಸಿದ್ದ ಐರೋಪ್ಯ ಒಕ್ಕೂಟದ ರಾಷ್ಟ್ರಗಳು, ಅಫ್ಗನ್ ನಿರಾಶ್ರಿತರಿಗೆ ಆಶ್ರಯ ನೀಡುವ ವಿಚಾರದಲ್ಲಿ ಈ ಬಾರಿ ಜಾಗರೂಕವಾಗಿವೆ.

ಐರೋಪ್ಯ ಒಕ್ಕೂಟದಲ್ಲಿರುವ ಆಸ್ಟ್ರಿಯಾ, ಫ್ರಾನ್ಸ್ ಮತ್ತು ಸ್ವೀಡನ್ ದೇಶಗಳು ಅಫ್ಗನ್ನರ ಪ್ರಮುಖ ನಿರಾಶ್ರಿತ ತಾಣಗಳೆನಿಸಿವೆ. ಐರೋಪ್ಯ ಒಕ್ಕೂಟದ ವರದಿಯ ಪ್ರಕಾರ, 2021ರ ಮೊದಲ ತ್ರೈಮಾಸಿಕದಲ್ಲಿ ಸುಮಾರು 7,000 ಅಫ್ಗನ್ನರಿಗೆ ಶಾಶ್ವತ ಅಥವಾ ತಾತ್ಕಾಲಿಕ ಆಶ್ರಯ ಒದಗಿಸಲಾಗಿದೆ. ಈ ಪೈಕಿ ಕನಿಷ್ಠ 2,200 ಮಂದಿ ಗ್ರೀಸ್, 1,800 ಜನರು ಫ್ರಾನ್ಸ್, 1,000 ಜರ್ಮನಿಯಲ್ಲಿ ಮತ್ತು 700 ಜನರು ಇಟಲಿಯಲ್ಲಿ ನೆಲೆಯಾಗಿದ್ದಾರೆ.

ಉಜ್ಬೇಕಿಸ್ತಾನ

ಅಫ್ಗಾನಿಸ್ತಾನದ ಸುಮಾರು 400 ನಿರಾಶ್ರಿತರನ್ನು ಉಜ್ಬೇಕಿಸ್ತಾನ ಸ್ವಾಗತಿಸಿ, ಅವರನ್ನು ಗಡಿಯ ಬಳಿ ತಾತ್ಕಾಲಿಕ ವಸತಿಗೃಹದಲ್ಲಿ ಇರಿಸಿಕೊಂಡಿದೆ ಎಂಬ ವರದಿಗಳಿವೆ.

ಭಾರತ

ಅಫ್ಗಾನಿಸ್ತಾನದ ಪ್ರಸ್ತುತ ಪರಿಸ್ಥಿತಿಯನ್ನು ಪರಿಗಣಿಸಿ, ಭಾರತವು ಅಫ್ಗನ್ ಪ್ರಜೆಗಳಿಗೆ ದೇಶಕ್ಕೆ ಪ್ರವೇಶ ನೀಡಲು ಹೊಸ ವರ್ಗದ ಇ-ವೀಸಾ ಪರಿಚಯಿಸಿದೆ. ಈ ವೀಸಾಗಳು ಆರು ತಿಂಗಳು ಮಾತ್ರ ಮಾನ್ಯವಾಗಿರುತ್ತವೆ. ಈ ಅವಧಿ ಮುಗಿದ ನಂತರ ಏನಾಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ.

ಆಧಾರ: ಎಎಫ್‌ಪಿ, ರಾಯಿಟರ್ಸ್, ಬಿಬಿಸಿ

ವಿಶ್ವ: ದಶಕದಲ್ಲಿ ದುಪ್ಪಟ್ಟು ಏರಿಕೆ (ಕೋಟಿಗಳಲ್ಲಿ)



ಮನಸ್ಸಾಕ್ಷಿ ಕಲಕಿದ ಚಿತ್ರ

2015ರಲ್ಲಿ ಪ್ರಕಟವಾದ ಮೂರು ವರ್ಷದ ಬಾಲಕನ ಚಿತ್ರವೊಂದು ಇಡೀ ಜಗತ್ತಿನ ಮನಸ್ಸಾಕ್ಷಿಯನ್ನು ಕಲಕಿ, ಸಿರಿಯಾ ನಿರಾಶ್ರಿತ ಬಿಕ್ಕಟ್ಟಿನತ್ತ ಗಮನ ಹರಿಸುವಂತೆ ಮಾಡಿತ್ತು. ಟರ್ಕಿಯ ಕಡಲ ಕಿನಾರೆಯಲ್ಲಿ ತಲೆಕೆಳಗಾಗಿ ಬಿದ್ದಿದ್ದ ಅಲನ್ ಕುರ್ದಿಯ ನಿರ್ಜೀವ ದೇಹದ ಚಿತ್ರ ಅದು. ಗ್ರೀಸ್‌ನಲ್ಲಿ ಹೊಸ ಬದುಕು ಕಟ್ಟಿಕೊಳ್ಳಬೇಕು ಎಂದು ಸಿರಿಯಾ ತೊರೆದು ಹೊರಟಿದ್ದ ಜನರ ರಬ್ಬರ್ ದೋಣಿ ಸಮುದ್ರದಲ್ಲಿ ಮುಳುಗಿತ್ತು. ಅದರಲ್ಲಿದ್ದ ಕುರ್ದಿಯ ದೇಹ ಟರ್ಕಿಯಲ್ಲಿ ಕಡಲ ತಡಿಗೆ ಬಂದು ಬಿದ್ದಿತ್ತು.

ಇದು, ಸಿರಿಯಾ ಆಂತರಿಕ ಯುದ್ಧದ ತೀವ್ರತೆ ಮತ್ತು ನಿರಾಶ್ರಿತ ಬಿಕ್ಕಟ್ಟಿನ ಆಳ ಅಗಲಗಳನ್ನು ಜಗತ್ತಿನ ಮುಂದೆ ತೆರೆದು ಇರಿಸಿತ್ತು.

ಆಂತರಿಕ ಸಂಘರ್ಷವು ಬಹುದೊಡ್ಡ ನಿರಾಶ್ರಿತ ಬಿಕ್ಕಟ್ಟಿಗೆ ಕಾರಣವಾಯಿತು.

ಮಧ್ಯ ಪ್ರಾಚ್ಯ ಮತ್ತು ಉತ್ತರ ಆಫ್ರಿಕಾದಲ್ಲಿ ಜನಪ್ರೀತಿ ಗಳಿಸಿದ ‘ಅರಬ್ ಸ್ಪ್ರಿಂಗ್ಸ್’ ಚಳವಳಿಯ ಭಾಗವಾಗಿಯೇ ಸಿರಿಯಾದಲ್ಲಿಯೂ ಚಳವಳಿ ರೂಪುಗೊಂಡಿತು. ಸಾಮಾಜಿಕ ಜಾಲತಾಣಗಳ ಮೂಲಕ ಆರಂಭವಾದ ಅರಬ್ ಸ್ಪ್ರಿಂಗ್ಸ್, ಟ್ಯುನೀಷಿಯಾ ಮತ್ತು ಈಜಿಪ್ಟ್‌ನ ನಿರಂಕುಶ ಸರ್ಕಾರಗಳನ್ನು ಕಿತ್ತೊಗೆಯುವಲ್ಲಿ ಯಶಸ್ವಿಯಾಗಿತ್ತು. ಅದರಿಂದ ಪ್ರೇರಣೆ ಪಡೆದ ಸಿರಿಯಾ ಯುವ ಜನರು ಬಷರ್ ಅಲ್ ಅಸಾದ್ ವಿರುದ್ಧ ಬೀದಿಗಿಳಿದರು.

ಗೋಡೆಬರಹವೊಂದು ಸಿರಿಯಾ ಬಿಕ್ಕಟ್ಟಿನ ಮೂಲ. ಅರಬ್ ಸ್ಪ್ರಿಂಗ್ಸ್ ಪರವಾಗಿ ಗೋಡೆಬರಹ ಬರೆದ 15 ಬಾಲಕರನ್ನು ಬಷರ್ ಅಲ್ ಅಸಾದ್ ಸರ್ಕಾರವು ಬಂಧಿಸಿ, ಚಿತ್ರಹಿಂಸೆಗೆ ಕೊಟ್ಟಿತು. ಈ ಕ್ರೌರ್ಯ ತಾಳಲಾರದೆ 13 ವರ್ಷದ ಬಾಲಕನೊಬ್ಬ ಮೃತಪಟ್ಟ. ಇದರಿಂದ ಜನರು ಕೆರಳಿದರು. 2011ರ ಮಾರ್ಚ್‌ನಲ್ಲಿ ಆರಂಭವಾದ ಪ್ರತಿಭಟನೆಯು ಕೆಲವೇ ದಿನಗಳಲ್ಲಿ ಇಡೀ ದೇಶವನ್ನು ವ್ಯಾಪಿಸಿತು.

ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ, ಸಿರಿಯಾ ಆಂತರಿಕ ಯುದ್ಧದಿಂದಾಗಿ ಈವರೆಗೆ 1.2 ಕೋಟಿ ಜನರು ಆಶ್ರಯ ಕಳೆದುಕೊಂಡಿದ್ದಾರೆ. ಸುಮಾರು 1.31 ಕೋಟಿ ಜನರಿಗೆ ನೆರವು ಬೇಕಾಗಿದೆ. ದೇಶದ ಅರ್ಧಕ್ಕಿಂತಲೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. 125ಕ್ಕೂ ಹೆಚ್ಚು ದೇಶಗಳಲ್ಲಿ ಸಿರಿಯಾ ನಿರಾಶ್ರಿತರನ್ನು ಗುರುತಿಸಬಹುದು.

ಟರ್ಕಿ ಕಡಲ ಕಿನಾರೆಯಲ್ಲಿ ಕುರ್ದಿಯ ಮೃತ ದೇಹ

ಭಾರತದಲ್ಲಿ ನಿರಾಶ್ರಿತ ನೀತಿ ಇಲ್ಲ

ಇಪ್ಪತ್ತು ವರ್ಷಗಳಿಂದ ಅಫ್ಗಾನಿಸ್ತಾನದೊಂದಿಗೆ ಭಾರತವು ಸೌಹಾರ್ದ ಸಂಬಂಧ ಹೊಂದಿತ್ತು. ಇದೀಗ ಅಲ್ಲಿ ತಾಲಿಬಾನ್ ನೇತೃತ್ವದ ಸರ್ಕಾರ ರಚನೆಯ ಪ್ರಯತ್ನಗಳು ನಡೆಯುತ್ತಿದ್ದು ಆ ದೇಶಕ್ಕೆ ಪಾಕಿಸ್ತಾನ ಹಾಗೂ ಚೀನಾ ಹತ್ತಿರವಾಗುತ್ತಿವೆ.

ಬದಲಾದ ಪರಿಸ್ಥಿತಿಯಲ್ಲಿ, ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ. ಮುಸ್ಲಿಂ ರಾಷ್ಟ್ರದಲ್ಲಿ ತಾಲಿಬಾನ್ ಆಡಳಿತ ಒಲ್ಲದೇ ಸಾವಿರಾರು ಸಂಖ್ಯೆಯಲ್ಲಿ ಅಫ್ಗನ್ನರು ದೇಶ ತೊರೆಯಲು ಸಜ್ಜಾಗಿದ್ದಾರೆ. ಸದ್ಯಕ್ಕೆ ಅಲ್ಲಿಂದ ಭಾರತೀಯರನ್ನು ಸುರಕ್ಷಿತವಾಗಿ ಕರೆತರುವುದಷ್ಟೇ ಆದ್ಯತೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಅಫ್ಗಾನಿಸ್ತಾನದಲ್ಲಿನ ಬೆಳವಣಿಗೆಗಳನ್ನು ಗಮನಿಸಿ, ಮುಂದುವರಿಯುವ ಸೂಚನೆ ನೀಡಿದ್ದಾರೆ. ಅಫ್ಗಾನಿಸ್ತಾನ-ದಲ್ಲಿನ ಸ್ಥಿತಿಯ ಬಗ್ಗೆ ಅಮೆರಿಕ ಹಾಗೂ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿಗಳ ಜೊತೆಯೂ ಈಗಾಗಲೇ ಚರ್ಚೆ ನಡೆಸಿದ್ದಾರೆ.

1951ರ ನಿರಾಶ್ರಿತ ಒಪ್ಪಂದ ಮತ್ತು ಶಿಷ್ಟಾಚಾರಗಳಿಗೆ ಭಾರತವು ಸಹಿ ಹಾಕದೇ ಇರುವುದರಿಂದ, ಭಾರತವು ನಿರಾಶ್ರಿತರಿಗಾಗಿನ ನೀತಿಯನ್ನಾಗಲೀ, ನಿರಾಶ್ರಿತರನ್ನು ರಕ್ಷಿಸುವ ಕಾನೂನನ್ನಾಗಲೀ ಹೊಂದಿಲ್ಲ.

ಆಶ್ರಯ ಬಯಸಿ ಬಂದವರೆಲ್ಲ ವಿದೇಶಿಯರು ಎಂದೇ ಪರಿಗಣಿಸಲಾಗುತ್ತಿದೆ. ವಿದೇಶಿಯರು, ನಿರಾಶ್ರಿತರು, ಆಶ್ರಯ ಕೋರಿ ಬಂದವರು ಹಾಗೂ ದೇಶಭ್ರಷ್ಟರಾದವರು ಎಲ್ಲರನ್ನೂ ವಿದೇಶಿಯರ ಕಾಯ್ದೆ–1946, ವಿದೇಶಿಯರ ದಾಖಲಾತಿ ಕಾಯ್ದೆ–1939, ಪಾಸ್‌ಪೋರ್ಟ್ ಕಾಯ್ದೆ 1920 ಹಾಗೂ ಪೌರತ್ವ ಕಾಯ್ದೆ–1955ರಲ್ಲಿ ಇರುವ ನಿಬಂಧನೆಗಳ ಅಡಿಯಲ್ಲೇ ಗುರುತಿಸಲಾಗುತ್ತದೆ.

ಸೂಕ್ತ ದಾಖಲಾತಿಗಳಿಲ್ಲದೇ ಭಾರತಕ್ಕೆ ಬಂದ ವಿದೇಶಿಯನ್ನು ಹಾಗೂ ಅವಧಿ ಮುಗಿದ ಬಳಿಕವೂ ಇಲ್ಲಿ ನೆಲೆಸಿದವರನ್ನು ಅಕ್ರಮ ವಲಸಿಗರು ಎಂದು ಪರಿಗಣಿಸಲಾಗುತ್ತದೆ.

‘ನಿರಾಶ್ರಿತರ ವಿಷಯವಾಗಿನ ಕಾರ್ಯತಂತ್ರದ ವಿಷಯದಲ್ಲಿ ಭಾರತದಲ್ಲಿ ಅಸ್ಪಷ್ಟತೆ ಇದೆ. ಟಿಬೆಟಿಯನ್ನರನ್ನು ಹಾಗೂ ಶ್ರೀಲಂಕಾದ ತಮಿಳು ನಿರಾಶ್ರಿತರನ್ನು ಸ್ವಾಗತಿಸಿದ ಭಾರತವು, ಮ್ಯಾನ್ಮಾರ್‌ನಲ್ಲಿ ಕಿರುಕುಳಕ್ಕೀಡಾಗಿ ಬಂದ ರೋಹಿಂಗ್ಯಾ ಸಮುದಾಯದ ಜನರ ವಿರುದ್ಧ ಹಗೆತನದ ವರ್ತನೆ ತೋರಿದೆ. ಭೌಗೋಳಿಕ ರಾಜಕೀಯವನ್ನು ಆಧರಿಸಿ ಕಾಲಕಾಲಕ್ಕೆ ಅದರ ನೀತಿ ಬದಲಾಗುತ್ತದೆ’ ಎನ್ನುತ್ತಾರೆ ತಜ್ಞರು. ಯುಎನ್‌ಎಚ್‌ಸಿಆರ್‌ಯ ಜ.2020ರ ವರದಿಯ ಪ್ರಕಾರ, ಭಾರತದಲ್ಲಿ 2.44 ಲಕ್ಷ ನಿರಾಶ್ರಿತರಿದ್ದಾರೆ. ಅವರ ಪೈಕಿ 2,03,235 ಜನರು ಶ್ರೀಲಂಕಾ ಮತ್ತು ಟಿಬೆಟ್ ನವರು. ಇನ್ನುಳಿದವರು ಅಫ್ಗಾನಿಸ್ತಾನ ಹಾಗೂ ಮ್ಯಾನ್ಮಾರ್‌ಗೆ ಸೇರಿದವರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಾಲಿಬಾನ್ ಆಧಿಪತ್ಯದಲ್ಲಿರುವ ಅಫ್ಗಾನಿಸ್ತಾನದಲ್ಲಿ ನಾಗರಿಕರ ಸ್ಥಿತಿ ಶೋಚನೀಯವಾಗಿದೆ ಎಂಬ ವರದಿಗಳು ಬರುತ್ತಿವೆ. ಮಹಿಳೆಯರನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಬಿಂಬಿಸುವ ಚಿತ್ರವೊಂದು ವೈರಲ್ ಆಗಿದೆ. ಬುರ್ಖಾ ಧರಿಸಿರುವ ಇಬ್ಬರು ಮಹಿಳೆಯರ ಕೈಗೆ ಸರಪಳಿ ಬಿಗಿಯಲಾಗಿದ್ದು, ಯುವಕನೊಬ್ಬ ಹರಾಜು ಕೂಗುತ್ತಿರುವ ದೃಶ್ಯ ಈ ಚಿತ್ರದಲ್ಲಿದೆ. ನೂರಾರು ಜನರು ಈ ಚಿತ್ರವನ್ನು ಹಂಚಿಕೊಂಡಿದ್ದು, ಅಫ್ಗನ್ ಮಹಿಳೆಯರ ಸ್ಥಿತಿ ಹೀಗಿದೆ ನೋಡಿ ಎಂದು ಉಲ್ಲೇಖಿಸಿದ್ದಾರೆ.

ವೈರಲ್ ಆಗಿರುವ ಚಿತ್ರವು ಬೀದಿನಾಟಕವೊಂದರ ದೃಶ್ಯ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ‘ಐಸಿಸ್ ಲೈಂಗಿಕ ಜೀತದಾಳುಗಳ ಮಾರುಕಟ್ಟೆ’ ಎಂಬ ಹೆಸರಿನ ಬೀದಿನಾಟಕವನ್ನು 2014ರಲ್ಲಿ ಲಂಡನ್‌ನಲ್ಲಿ ಪ್ರದರ್ಶಿಸಲಾಗಿತ್ತು. ‘ಕಂಪ್ಯಾಷನ್ 4 ಕುರ್ದಿಸ್ತಾನ್’ ಎಂಬ ಗುಂಪು ಇದನ್ನು ಪ್ರಸ್ತುತಪಡಿಸಿತ್ತು. ಐಸಿಸ್‌ನ ಕ್ರೌರ್ಯವನ್ನು ಜಗತ್ತಿಗೆ ತಿಳಿಸಲು ಇದನ್ನು ರೂಪಿಸಲಾಗಿತ್ತು. ಆದಾಗ್ಯೂ ಅಫ್ಗನ್‌ನಲ್ಲಿ ಮಹಿಳೆಯರು ಭೀತಿಯಲ್ಲೇ ಇದ್ದಾರೆ. ಆದರೆ ಈ ಚಿತ್ರ ಅಫ್ಗನ್‌ಗೆ ಸಂಬಂಧಪಟ್ಟಿಲ್ಲ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಮನ್ವಯದ ಭಾವಮಾಧುರ್ಯ

ನೀಳುಗೆರೆ ಬಳುಬಳುಕೆ ಕಡಲತೆರೆಯೊಯ್ಯಾರ |
ತಾಳಲಯಸೇರೆ ರಾಗದ ನಾಟ್ಯ ಧಾಟಿ ||
ಗೋಳದ ಜ್ವಾಲೆಯಿಂ ಗಗನಪಟ ಸಿಂಗಾರ |
ವೈಲಕ್ಷಣದೊಳಿಂಬು – ಮಂಕುತಿಮ್ಮ || 452 ||

ಪದ-ಅರ್ಥ: ನೀಳುಗೆರೆ = ನೇರವಾದ ಗೆರೆ, ಕಡಲತೆರೆಯೊಯ್ಯಾರ = ಕಡಲತೆರೆಯ + ಒಯ್ಯಾರ, ಜ್ವಾಲೆಯಿಂ = ಬೆಂಕಿಯಿಂದ, ಗಗನಪಟ = ಆಕಾಶ, ವೈಲಕ್ಷಣದೊಳಿಂಬು = ವೈಲಕ್ಷಣದೊಳು(ವಿವಿಧತೆಯಲ್ಲಿ) + ಇಂಬು(ಅವಕಾಶ)

ವಾಚ್ಯಾರ್ಥ: ಕಡಲತೆರೆ ತಡಿಯನ್ನು ಮುಟ್ಟಿದಾಗ ಆದ ನೀಳಗೆರೆ ಮತ್ತೊಂದು ತೆರೆಬಂದಾಗ ಬಳುಕಿ ತೆರೆಯ ವಯ್ಯಾರವನ್ನು ತೋರುತ್ತದೆ. ರಾಗದ ನಾಟ್ಯದ ಧಾಟಿ ಬರುವುದೇ ತಾಳ ಮತ್ತು ಲಯಗಳು ಸೇರಿದಾಗ. ಸೂರ್ಯನೆಂಬ ಗೋಳದ ಜ್ವಾಲೆಯಿಂದಲೇ ಆಕಾಶ ಶೃಂಗಾರವಾಗುವುದು. ವಿಲಕ್ಷಣವಾದ ಅನೇಕ ವಸ್ತುಗಳು, ಚಿಂತನೆಗಳು ಜಗತ್ತು ಸುಂದರವಾಗುವುದಕ್ಕೆ ಅವಕಾಶವಾಗಿವೆ.

ವಿವರಣೆ: ಸೊಗಸೆಂಬುದು ಎಲ್ಲರೂ ಬಯಸುವ ಒಂದು ಅವಸ್ಥೆ. ಸೊಗಸು ಎಂಬುದದೇನು? ಅದು ಒಂದೇ ವಸ್ತುವೆ? ಅನೇಕ ವಸ್ತುಗಳ ಮಿಶ್ರಣವೇ? ಪ್ರಕೃತಿಯ ಸೊಗಸಿನಲ್ಲಿ ಬೆಟ್ಟ ಕಣಿವೆಗಳಿವೆ, ಗಿಡ, ಮರ, ಬಳ್ಳಿಗಳಿವೆ, ನೀರಿನ ಹರಿವಿದೆ, ಹಕ್ಕಿಗಳ ಉಲಿವಿದೆ. ಅವೆಲ್ಲ ಸೇರಿ ಆದದ್ದು ಪ್ರಕೃತಿ ಸೌಂದರ್ಯ. ಪಂಚಾಮೃತದ ರುಚಿ ಬಂದದ್ದು ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆಗಳ ಹದವಾದ ಸಂಯೋಗ. ಪರಿಣಿತ ನೃತ್ಯಗಾತಿಯ ನೃತ್ಯದ ಸೌಂದರ್ಯ ಕೂಡ ಅನೇಕ ವಿಲಕ್ಷಣಗಳ ಕೂಡುವಿಕೆ. ನೃತ್ಯಗಾತಿಯ ದೇಹಸೌಷ್ಠವ, ಮಾಡಿಕೊಂಡಿರುವ ಅಲಂಕಾರ, ಧರಿಸಿದ ಸರಿಯಾದ ವಸ್ತ್ರ ವಿನ್ಯಾಸ, ನೃತ್ಯವೇದಿಕೆಯ ಅಲಂಕಾರ, ಬೆಳಕಿನ ವ್ಯವಸ್ಥೆ, ಸಂಗೀತ, ಶ್ರವಣಸಾಧನಗಳು, ವಾದ್ಯಗಳು, ಪ್ರೇಕ್ಷಕರ ಆಸನ ವ್ಯವಸ್ಥೆ ಇವೆಲ್ಲ ಸೇರಿ ಕಾರ್ಯಕ್ರಮದ ಸೊಗಸನ್ನು ನಿರ್ಮಿಸುತ್ತವೆ.

ಹೀಗೆಂದರೆ ಪರಸ್ಪರ ಸಂಬಂಧವಿಲ್ಲದ, ಸಮಾನಗುಣಗಳಿಲ್ಲದ ಮತ್ತು ಕೆಲವೊಂದು ಬಾರಿ ವಿರೋಧದ ಗುಣಗಳುಳ್ಳ ವಸ್ತುಗಳು ಸೇರಿ ಸುಂದರತೆಯನ್ನು ಸೃಷ್ಟಿಸುತ್ತವೆ. ಇದನ್ನು ಈ ಕಗ್ಗ ಎಷ್ಟು ಚೆನ್ನಾಗಿ ವಿವರಿಸುತ್ತದೆ! ಸಮುದ್ರ ತೀರಕ್ಕೆ ಹೋದಾಗ ಅಲೆಗಳು ಬಂದು ಮರಳಿನ ಮೇಲೆ ಚಿತ್ತಾರಗಳನ್ನು ನಿರ್ಮಿಸುತ್ತವೆ. ಪ್ರತಿಬಾರಿ ಅಲೆಯೊಂದು ಬಂದಾಗ ಹಳೆಯ ಗೆರೆ ಅಳಿಸಿ ಬಳುಬಳುಕುವ ಮತ್ತೊಂದು ಗೆರೆ ನಿರ್ಮಾಣವಾಗುತ್ತದೆ. ನಂತರ ಮತ್ತೊಂದು, ಮಗುದೊಂದು. ಅದೇ ಕಡಲ ತೆರೆಯ ಒಯ್ಯಾರ. ತಾಳ ಮತ್ತು ಲಯಗಳು ಸೇರಿದಾಗ ರಂಜಿಸುವ ಸ್ವರಗಳ ಸಮೂಹವಾದ ರಾಗದ ಗತಿ ಸಿದ್ಧವಾಗುತ್ತದೆ. ಸೂರ್ಯನನ್ನು ಗೋಳದ ಜ್ವಾಲೆ ಎಂದು ಕರೆಯುತ್ತಾರೆ. ಸೂರ್ಯ ನಮ್ಮ ಸೌರಮಂಡಲದ ಮಧ್ಯದಲ್ಲಿರುವ ನಕ್ಷತ್ರ. ಅದೊಂದು ಪ್ರಜ್ವಲಿಸುವ ನಕ್ಷತ್ರ. ಸೆಕೆಂಡಿಗೆ ಆರುನೂರು ಮಿಲಿಯನ್ ಟನ್‌ಗಳಷ್ಟು ಜಲಜನಕವನ್ನು ಉರಿಸುತ್ತ ಬೆಂಕಿಯ ಗೋಳವಾಗಿದೆ. ಅದು ಹಾಗೆ ಉರಿಯುವುದರಿಂದಲೇ ನಮ್ಮ ಆಕಾಶ ಬೆಳಕು ಕಂಡಿದೆ. ಆ ಬೆಳಕಿನಿಂದಲೇ ಪ್ರಪಂಚದ ಅಸ್ತಿತ್ವ.

ರಾಮಾಯಣದಲ್ಲಿ ಮಹರ್ಷಿ ವಾಲ್ಮೀಕಿಗಳು ಶ್ರೀರಾಮಚಂದ್ರನ ವ್ಯಕ್ತಿತ್ವವನ್ನು ಇಪ್ಪತ್ತು ಗುಣಗಳಲ್ಲಿ ವರ್ಣಿಸುತ್ತಾರೆ. ಅವೆಲ್ಲವೂ ಬೇರೆ ಬೇರೆ ಗುಣಗಳು. ಹಾಗಾದರೆ ಶ್ರೀರಾಮನ ನಿಜವಾದ ಗುಣ ಯಾವುದು? ಅವನ ಸ್ವರೂಪ ಈ ಎಲ್ಲ ಗುಣಗಳ ಸಾಮರಸ್ಯ. ವಿದ್ಯೆ, ವಿನಯ, ಧೈರ್ಯ, ಕಾರುಣ್ಯ, ಹಾಸ್ಯ, ಶೌರ್ಯ, ಸಾಹಸ, ಗಾಂಭೀರ್ಯ ಈ ವಿವಿಧ ಗುಣಗಳು ಸೇರಿ ಸಮರಸವಾದದ್ದರ ಪರಿಣಾಮವಾಗಿ ಹೊಸದೊಂದು ಶೀಲಸೌಂದರ್ಯ ಕಾಣಬರುತ್ತದೆ. ಹೀಗೆ ವಿಲಕ್ಷಣ ಗುಣಗಳ ಸಮನ್ವಯ ಸೌಂದರ್ಯದ ಅವಿಷ್ಕಾರಕ್ಕೆ ಕಾರಣ.

ದಿನ ಭವಿಷ್ಯ

ಸೋಮವಾರ ಆಗಸ್ಟ್ 23, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ಪ್ರತಿಪದೆ ಗಂ. 25-12 ಹ. 4-20 ಸೋಮವಾರ ನಿತ್ಯ ನಕ್ಷತ್ರ ಶತಭಿಷ ಗಂ. 35-23 (ರಾ. 8-24) ಅತಿಗಂಡ ನಾಮ ಯೋಗ ಗಂ. 10-10 ಕೌಲವ ಕರಣ ಗಂ. 25-12 ವಿಷ ಗಂ. 51-36 ಅಮೃತ ಗಂ. 17-55 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 3, 8

ಮೇಷ: ವಿದ್ಯಾಭ್ಯಾಸದಲ್ಲಿ ಪ್ರಗತಿ. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಪ್ರೇಮ ಪ್ರಕರಣದ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಸಂಗಾತಿಯ ಅನುಮಾನಕ್ಕೆ ತುತ್ತಾಗಿ ನೆಮ್ಮದಿ ನಷ್ಟ ಸಂಭವ.

ವೃಷಭ: ನ್ಯಾಯಾಲಯದಲ್ಲಿನ ಕಟ್ಟಲೆಗಳು ನಿಮ್ಮ ಪರವಾಗಿ ತೀರ್ಮಾನವಾಗುವ ಸಾಧ್ಯತೆ. ವ್ಯವಹಾರದಲ್ಲಿ ಹಿಂಜರಿತ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯವಾಗುವ ಸಾಧ್ಯತೆ. ದೇವತಾ ದರ್ಶನ ಯೋಗ ಕಂಡುಬರುವುದು.

ಮಿಥುನ: ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾದೀತು. ದೈನಂದಿನ ವ್ಯವಹಾರಗಳು ಸುಗಮವಾಗಿ ಜರುಗಲಿವೆ. ಜಂಟಿ ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವುದು ಉತ್ತಮ.

ಕರ್ಕಾಟಕ: ದೈನಂದಿನ ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿದ್ದೀರಿ. ಹೊಸ ಗೃಹ ನಿರ್ಮಾಣ ಅಥವಾ ಖರೀದಿ ಸಾಧ್ಯತೆ. ಮಕ್ಕಳ ಪ್ರತಿಭೆಯನ್ನು ಕಂಡು ಸಂತಸ ಉಂಟಾಗಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗುವಿರಿ.

ಸಿಂಹ: ದೂರಾಲೋಚನೆಯಿಂದಾಗಿ ಕಾರ್ಯದಲ್ಲಿ ಯಶಸ್ಸು. ಕುಟುಂಬ ಸಮೇತ ಧಾರ್ಮಿಕ ಕ್ಷೇತ್ರ ದರ್ಶನ ಮಾಡಲಿದ್ದೀರಿ. ತಾಳ್ಮೆಯಿಂದ ಮನೆಯಲ್ಲಿ ವಿನಾಕಾರಣ ಉಂಟಾಗಬಹುದಾದ ಮನಸ್ತಾಪ ನಿವಾರಿಸಿಕೊಳ್ಳಿ.

ಕನ್ಯಾ: ಕಳೆದುಹೋದ ವಸ್ತುವೊಂದನ್ನು ಪುನಃ ಪಡೆದುಕೊಳ್ಳಲಿದ್ದೀರಿ. ಆಧ್ಯಾತ್ಮಿಕತೆಯಿಂದ ಮಾನಸಿಕ ನೆಮ್ಮದಿ. ವಿದೇಶ ಅಥವಾ ದೂರ ಪ್ರಯಾಣದ ಯೋಗ. ಸಂತೃಪ್ತ ದಾಂಪತ್ಯ ಜೀವನ ನಿಮ್ಮದಾಗಲಿದೆ.

ತುಲಾ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿ. ಹಿರಿಯರ ಮಾತುಗಳನ್ನು ಗೌರವಿಸಿ. ಅಮೂಲ್ಯ ವಸ್ತುಗಳನ್ನು ಖರೀದಿಸಲಿದ್ದೀರಿ. ವಸ್ತ್ರಾಭರಣಗಳ ವ್ಯಾಪಾರಸ್ಥರಿಗೆ ಹೆಚ್ಚಿನ ಆದಾಯ ನಿರೀಕ್ಷಿಸಬಹುದು.

ವೃಶ್ಚಿಕ: ವಸತಿ ಸ್ಥಳ ಬದಲಾವಣೆ ಸಾಧ್ಯತೆ. ಹೂವು, ಹಣ್ಣು ಪೂಜಾ ಸಾಮಗ್ರಿಗಳ ವ್ಯಾಪಾರದಲ್ಲಿ ವಿಶೇಷ ಲಾಭ. ಮಿತ್ರ ಕಾರ್ಯಗಳಲ್ಲಿ ಯಶಸ್ಸು. ವಾಹನ ಚಾಲನೆ ವಿಚಾರದಲ್ಲಿ ಅತ್ಯಂತ ಜಾಗರೂಕರಾಗಿರುವುದು ಉತ್ತಮ.

ಧನು: ಉದ್ಯೋಗ ಕ್ಷೇತ್ರದಲ್ಲಿ ಸಣ್ಣಪುಟ್ಟ ಮನಸ್ತಾಪಗಳು ತಲೆದೋರುವ ಸಾಧ್ಯತೆ. ಅಮೂಲ್ಯ ವಸ್ತುಗಳ ಸಂಗ್ರಹ ಮಾಡಲಿದ್ದೀರಿ. ಮಹಿಳೆಯರ ಆಶೋತ್ತರಗಳು ಈಡೇರುವ ಲಕ್ಷಣಗಳು ಗೋಚರಿಸುತ್ತಿವೆ.

ಮಕರ: ಹಿತ ಶತ್ರುಗಳಿಂದ ತೊಂದರೆ. ಉದ್ಯೋಗ ನಿಮಿತ್ತ ದೂರದ ಪ್ರಯಾಣ. ತಾಯಿಯವರ ಆರೋಗ್ಯದಲ್ಲಿ ಹೆಚ್ಚಿನ ಏರುಪೇರು ಉಂಟಾಗುವ ಸಾಧ್ಯತೆ. ಸಹೋದರರಿಂದ ಉತ್ತಮ ಸಹಕಾರ ದೊರಕಿ ಚಿಂತೆ ಪರಿಹಾರ.

ಕುಂಭ: ದೈನಂದಿನ ವ್ಯವಹಾರದಲ್ಲಿ ಅನಿರೀಕ್ಷಿತ ಘಟನೆಗಳು ಎದುರಾಗುವ ಸಾಧ್ಯತೆ. ಅಧಿಕಾರಿಗಳಿಂದ ಕಿರಿ ಕಿರಿ ಉಂಟಾಗಲಿದೆ. ಕಾರ್ಯಬಾಹುಳ್ಯದಿಂದ ದೇಹಾಲಸ್ಯ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಉಚಿತ.

ಮೀನ: ಅನ್ಯರ ಕಿವಿಮಾತಿನ ಬಗ್ಗೆ ಅತಿಯಾದ ವಿಶ್ವಾಸ ಬೇಡ. ತುಲನಾತ್ಮಕ ಚಿಂತನೆಯಿಂದ ತೀರ್ಮಾನ ಕೈಗೊಳ್ಳಿ. ಕುಟುಂಬ ಸಮೇತ ಶುಭ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ. ಮಿತ್ರವರ್ಗದವರಿಂದ ಧನ ಲಾಭ.

ನಿಮ್ಮ ಜನ್ಮದಿನ 23-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಮಾನಸಿಕ ಸದೃಢತೆಯಿಂದಾಗಿ ಕಾರ್ಯದಕ್ಷತೆಯನ್ನು ರೂಢಿಸಿಕೊಳ್ಳಲಿದ್ದೀರಿ. ಉದ್ಯಮಿಗಳಿಗೆ ಉತ್ತಮ ಆದಾಯ ತರುವ ವರ್ಷವಾಗಿ ಕಂಡುಬರುವುದು. ನಿರುದ್ಯೋಗಿಗಳಿಗೆ ಕಠಿಣ ಶ್ರಮದಿಂದಾಗಿ ಉದ್ಯೋಗ ಲಾಭ. ಧಾನ್ಯ ವ್ಯಾಪಾರದಲ್ಲಿ ವಿಶೇಷ ಲಾಭ.

ಪದಬಂಧ 4697

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಕಗ್ಗೊಲೆಯ ಘಟನೆಯಿದು (4)
5.ಸೊಂಟದಿಂದ ಪ್ರಾರಂಭವಾದ ಕಂಪನ (3)
6.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
7.ಕಣದಲ್ಲಿರುವ ಹತೋಟಿ ಕಾಣುತ್ತಿದೆಯೇ? (4)
9.ಮನದೊಳಗಿರುವ ಕುಲ (4)
12.ಎಳೆಗಂದಿ ಹಾಲಿನಿಂದ ತಯಾರಿಸಿದ ಸಿಹಿ ಪಾಯಸ (2)
13.ಮಗನಿಗೆ ಇದು ಸಲೀಸು! (3)
14.ಮರವನ್ನು ಕೊಯ್ಯುವ ಸಾಧನ (4)

ಮೇಲಿಂದ ಕೆಳಕ್ಕೆ

1.ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
2.ಅನಿರೀಕ್ಷಿತ ಘಟನೆ (4)
3.ಹಣದೊಳಗೆ ಗರ ಬಡಿದಾಗಿನ ಗೊಂದಲ! (4)
4.ಲೋಹದ ಅಗಲವಾದ ಪಾತ್ರೆ (3)
8.ಒಳ್ಳೆಯ ಅಥವಾ ಕೆಟ್ಟ ನಾತ (3)
9.ಜೇನಿನೊಡನೆ ಬಂದಿರುವ ತಿಂಗಳು (4)
10.ಅದೇ ತಾನೆ ಅರಳಿದ ಹೊಸ ಹೂವು (4)
11.ರಾಜನ ಗೃಹ (4)
12.ಗಿಡದ ಮೇಲೆ ಕುಳಿತಿರುವ ಡೇಗೆ (3)

1	■	2	■	■	3			4
5			■	■		■	■	
	■		■	■		■	6	
	■	7		8		■	■	■
■	■	■	■		■	■	■	■
■	■	■	9			10	■	11
12		■		■	■		■	
	■	■		■	■	13		
14				■	■		■	

4696ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಸೂರ3.ಅನುಮಾನ5.ಮದನ7.ನವರಂಗ9.ತಿಲಾಂಜಲಿ 11.ಹರಕೆ14.ಲಿಪಿಕಾರ15.ಸರಸ
ಮೇಲಿಂದ ಕೆಳಕ್ಕೆ: 1.ಮಧ್ಯಮ2.ರದನ3.ಅನುಭವ4.ನಗ್ನ6.ದಮಯಂತಿ7.ನಕಲಿ 8.ಗಡಿಯಾರ10.ಜನಿವಾರ11.ಹವ್ಯಾಸ12.ಕೆಲಸ13.ಗಾಲಿ

ಸುಡೊಕು 5083

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5082 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಕಾವ್ಯಾ ಕಡಮೆ ಅವರಿಗೆ ಛಂದ ಪುಸ್ತಕ ಬಹುಮಾನ

ಕಾವ್ಯಾ ಕಡಮೆ

ಬೆಂಗಳೂರು: ಪ್ರಸಕ್ತ ಸಾಲಿನ ಛಂದ ಪುಸ್ತಕ ಹಸ್ತಪ್ರತಿ ಸ್ಪರ್ಧೆಯ ಬಹುಮಾನವನ್ನು ಕತೆಗಾರ್ತಿ ಕಾವ್ಯಾ ಕಡಮೆ ಪಡೆದಿದ್ದಾರೆ.

ಈ ಸ್ಪರ್ಧೆಯ ವಿಜೇತರಿಗೆ ₹ 30 ಸಾವಿರ ಬಹುಮಾನ, ಫಲಕ ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಈ ಬಾರಿ 118 ಕತೆಗಾರರು ಭಾಗವಹಿಸಿದ್ದರು. ಹಿರಿಯ ವಿಮರ್ಶಕ ಟಿ.ಪಿ. ಅಶೋಕ ಅವರು ವಿಜೇತರ ಆಯ್ಕೆ ಮಾಡಿದ್ದಾರೆ. ಸೆಪ್ಟೆಂಬರ್‌ನಲ್ಲಿ ಕಾವ್ಯಾ ಅವರ ಪುಸ್ತಕ ಪ್ರಕಟಿಸಲಾಗುವುದು ಎಂದು ಛಂದ ಪುಸ್ತಕ ಸಂಸ್ಥೆ ತಿಳಿಸಿದೆ.

ಕಾವ್ಯಾ ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. ಅವರಿಗೆ ಈಗಾಗಲೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಸಿಕ್ಕಿದೆ. ಸದ್ಯ ಅವರು ಅಮೆರಿಕಾದ ನ್ಯೂಜೆರ್ಸಿಯಲ್ಲಿ ನೆಲೆಸಿದ್ದಾರೆ. ಇದೇ ಬಹುಮಾನವನ್ನು 2005ರಲ್ಲಿ ಅವರ ತಾಯಿ, ಪ್ರಮುಖ ಕತೆಗಾರ್ತಿ, ಸುನಂದಾ ಪ್ರಕಾಶ ಕಡಮೆ ಅವರು ಪ್ರಪ್ರಥಮವಾಗಿ ಪಡೆದುಕೊಂಡಿದ್ದರು.

ಪ್ರಜಾವಾಣಿ 'ಆಲದಮರ' ಸಂವಾದದಲ್ಲಿ ತಜ್ಞರ ಅಭಿಮತ

'ಸಿನಿಮಾ ಮಂದಿ ಕಾದಂಬರಿ ಓದಲಿ'

ಪ್ರಜಾವಾಣಿ ವಾರ್ತೆ

ಬಿ.ಎಲ್. ವೇಣು

ವತ್ಸಲಾ

ಶಿವರುದ್ರಯ್ಯ

ಶ್ರೀಧರಮೂರ್ತಿ

ಆಲದಮರ (ಪ್ರಜಾವಾಣಿ ಕ್ಲಬ್‌ಹೌಸ್): ಕಾದಂಬರಿ ಪ್ರಕಟಿಸುತ್ತಿದ್ದ ಪತ್ರಿಕೆಗಳು, ಅವುಗಳನ್ನಾಧರಿಸಿ ಬರುತ್ತಿದ್ದ ಸಿನಿಮಾಗಳು, ಅಂಥ ಸಿನಿಮಾಗಳನ್ನೇ ನೆಚ್ಚಿ ಚಿತ್ರಮಂದಿರಗಳಲ್ಲಿ ತುಂಬುತ್ತಿದ್ದ ಪ್ರೇಕ್ಷಕರು. ಅದೊಂದು ಸುವರ್ಣ ಯುಗ. ಈಗ ಎಲ್ಲವೂ ತದ್ವಿರುದ್ಧ...

ಇದು 'ಆಲದ ಮರ'ದ ಅಡಿಯಲ್ಲಿ ಭಾನುವಾರ ನಡೆದ ಚರ್ಚೆಯಲ್ಲಿ ಕೇಳಿಬಂದ ಸಿನಿಮಾ– ಸಾಹಿತ್ಯ ಕ್ಷೇತ್ರದ ಮಂದಿಯ ವಿಷಾದದ ಭಾವ. ಕೊನೆಗೊಂದಿಷ್ಟು ಆಶಾವಾದದ ಬೆಳಕು.

ಕಾದಂಬರಿಕಾರ ಬಿ.ಎಲ್.ವೇಣು ಅವರು ಹೇಳಿದ್ದು ಹೀಗೆ, 'ಸಿನಿಮಾ ಮಂದಿ ಮತ್ತು ಕಾದಂಬರಿಕಾರರಿಗೆ ಅವಿನಾಭಾವ ಸಂಬಂಧ ಇತ್ತು. ಸಿನಿಮಾದವರಲ್ಲಿ ಓದುವಿಕೆ ಇತ್ತು. ಈಗಿನ ನಿರ್ದೇಶಕರಲ್ಲಿ ಓದುವಿಕೆ ಇಲ್ಲವಾಗಿದೆ. ಹೊಸ ಕಾದಂಬರಿಗಳನ್ನು ಪತ್ರಿಕಾ ಕಚೇರಿಗಳಿಗೆ ಹೋಗಿ ಪಡೆದು ಓದುವ ಪ್ರವೃತ್ತಿ ಇತ್ತು. ಈಗ ಅದಿಲ್ಲ. ಒಂದು ಕಾಲದಲ್ಲಿ ಕಾದಂಬರಿ ಚಿತ್ರಗಳೇ ತುಂಬಾ ಯಶಸ್ವಿಯೂ ಆದವು. ಮತ್ತೆ ಅದು ಬೋರ್ ಅನಿಸಲು ಶುರುವಾಯಿತು. ಹೊಸ ಪ್ರಯೋಗಾತ್ಮಕ ಚಿತ್ರಗಳು ಬಂದವು. ಹೀಗೆ ಬದಲಾವಣೆಗಳಾಗುತ್ತಲೇ ಹೋದವು' ಎಂದರು.

'ಕಾದಂಬರಿ ಆಧರಿತ ಸಿನಿಮಾ ಎಂದರೆ ಮಧ್ಯಮ ವರ್ಗದ ಜನರು ಬಂದು ನೋಡುವ ಸಿನಿಮಾ ಎಂಬ ಲೆಕ್ಕಾಚಾರ ಇತ್ತು. ಈಗ ಈ ವರ್ಗ ಚಿತ್ರಮಂದಿರಗಳಿಗೆ ಬರುವುದಿಲ್ಲ ಎಂದು ಗಾಂಧಿನಗರದಲ್ಲಿ ಗೊತ್ತಾಗಿಬಿಟ್ಟಿದೆ. ಹಾಗಾಗಿ ಹಿಂಸೆ, ಲೈಂಗಿಕತೆ ಇತ್ಯಾದಿ ವಿಜೃಂಭಿಸುತ್ತಿವೆ. ಕನ್ನಡ ಚಿತ್ರರಂಗ ಸ್ವಂತಿಕೆ ಕಳೆದುಕೊಂಡಿದೆ. ಇಲ್ಲಿನ ನೆಲದ ಕತೆಗಳು ಬರುತ್ತಿಲ್ಲ' ಎಂದವರು ಪತ್ರಕರ್ತ ಎನ್.ಎಸ್. ಶ್ರೀಧರಮೂರ್ತಿ.

'ಸಾಹಿತ್ಯ– ಸಾಹಿತಿ– ಸಿನಿಮಾದವರು ಒಂದು ಸೌಹಾರ್ದ ಮಾದರಿಯಲ್ಲಿ ಮುಂದುವರಿಯಬೇಕು. ಕಾದಂಬರಿಯಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಲಿ. ಆದರೆ, ವಿಪರೀತ ಬದಲಾವಣೆ ಮಾಡಿದರೆ ಸಿನಿಮಾ ಮಾಡಿದವರೇ ಅನುಭವಿಸುತ್ತಾರೆ' ಎಂದು ವೇಣು ಹೇಳಿದರು.

ಕಲಾವಿದೆ, ಪ್ರಾಧ್ಯಾಪಕಿ ವತ್ಸಲಾ ಮೋಹನ್ ಮಾತನಾಡಿ, 'ಮಹಿಳಾ ಪ್ರಧಾನ ಚಿತ್ರಗಳೇನೋ ಬಂದವು. ಆದರೆ, ಮಹಿಳಾ ಪ್ರಾತಿನಿಧ್ಯವುಳ್ಳ ಚಿತ್ರಗಳು ಬರಲಿಲ್ಲ. ನಿರ್ದೇಶಕರಲ್ಲೂ ವೃತ್ತಿಪರತೆ ಕಡಿಮೆಯಾಗಿದೆ. ಇದಕ್ಕೆ ತಂತ್ರಜ್ಞಾನ ಬೆಳೆದದ್ದೂ ಕಾರಣ ಇರಬಹುದು' ಎಂದರು.

ನಿರ್ದೇಶಕ ಕೆ. ಶಿವರುದ್ರಯ್ಯ ಮಾತನಾಡಿ, 'ಕಥೆ, ಕಾದಂಬರಿಕಾರರ ವಿಷಯಗಳು ದೃಶ್ಯ ಮಾಧ್ಯಮದ ದೃಷ್ಟಿಗೆ ಅರ್ಥವಾಗಬೇಕು. ನಾನು ಮಹಿಳಾ ಪ್ರಾಧಾನ್ಯದ ಚಿತ್ರಗಳಿಗೆ ಒತ್ತು ಕೊಟ್ಟಿದ್ದೇನೆ. ತಂದೆಯವರೊಂದಿಗೆ ಬೇರೆ ಬೇರೆ ಊರುಗಳಲ್ಲಿ ನೆಲೆಸಬೇಕಾದ ಸಂದರ್ಭ ಅನುಭವಿಸಿದ ಜಾತಿ ವ್ಯವಸ್ಥೆಯ ಸಂಕಟ, ಅನುಭವಗಳನ್ನು ತೆರೆಯಲ್ಲಿ ತಂದಿದ್ದೇನೆ' ಎಂದರು.

ನಟಿ ಮಾಳವಿಕಾ ಅವಿನಾಶ್ ಮಾತನಾಡಿ, 'ಕಾದಂಬರಿಗಳನ್ನು ತೆರೆಯ ಮೇಲೆ ತರಬೇಕಾದರೆ ನಿರ್ದೇಶಕನಿಗೆ ತುಂಬಾ ಜವಾಬ್ದಾರಿ ಇರುತ್ತದೆ. ಈಗಿನ ಬದಲಾವಣೆಯನ್ನು ನೋಡಿದರೆ ನಾವು ಎಲ್ಲಿ ಕಳೆದುಕೊಂಡೆವು ಎಂಬ ಪ್ರಶ್ನೆಯನ್ನು ಎಲ್ಲರೂ ಕೇಳಿಕೊಳ್ಳಬೇಕು' ಎಂದರು.

'ಹಿಂದೆ ದೊಡ್ಡ ಸ್ಟುಡಿಯೋಗಳಲ್ಲಿ ಕಥಾ ವಿಭಾಗ ಇತ್ತು. ಸಾಕಷ್ಟು ಓದು ಇತ್ತು. ಈಗ ಅದೆಲ್ಲವೂ ಇಲ್ಲವಾಗಿದೆ. ಮಾತ್ರವಲ್ಲ ಕಥೆಗಳ ಹಕ್ಕು ಪಡೆಯಲೂ ಸಾಕಷ್ಟು ಸಮಸ್ಯೆಗಳು ಇವೆ' ಎಂದರು.

ಹಿರಿಯ ಪತ್ರಕರ್ತ ಗಂಗಾಧರ ಮೊದಲಿಯಾರ್ ಹೇಳಿದ್ದು ಹೀಗೆ, 'ಸಾಹಿತ್ಯದ ತಳಹದಿ ಇದ್ದದ್ದರಿಂದಲೇ ಸಿನಿಮಾ ಇಲ್ಲಿವರೆಗೆ ಬಂದಿದೆ. ಮೂಕಿ ಚಿತ್ರಗಳ ಕಾಲದಿಂದಲೂ ಕಾದಂಬರಿ ಆಧರಿತ ಚಿತ್ರಗಳೇ ಬಂದಿವೆ. ಇಲ್ಲಿ ಸಾಹಿತ್ಯ– ಸೃಜನಶೀಲತೆಯ ಸಂಘರ್ಷವೂ ಇದೆ. ಒಕ್ಕೂಟವೂ ಇದೆ. ಸಾಹಿತ್ಯದ ಮಿತಿಯನ್ನು ಸಿನಿಮಾ ವಿಸ್ತಾರದೆಡೆಗೆ ಕರೆದೊಯ್ಯುತ್ತದೆ' ಎಂದರು.

'ಪ್ರಜಾವಾಣಿ' ಸಹ ಸಂಪಾದಕ ಬಿ.ಎಂ. ಹನೀಫ್ ಸಂವಾದ ನಡೆಸಿಕೊಟ್ಟರು. ರಂಗ ಕಲಾವಿದೆ ಜಯಲಕ್ಷ್ಮೀ ಪಾಟೀಲ್, ಕಥೆಗಾರ್ತಿ ಭಾರತಿ ಹೆಗಡೆ, ದಾವಣಗೆರೆ ಬ್ಯೂರೋ ಮುಖ್ಯಸ್ಥರಾದ ವಿಶಾಖ ಎನ್., ಹುಬ್ಬಳ್ಳಿ ಬ್ಯೂರೋ ಮುಖ್ಯಸ್ಥರಾದ ರಶ್ಮಿ ಎಸ್. ಹಾಗೂ ನೂರಾರು ಕೇಳುಗರು ಭಾಗವಹಿಸಿದ್ದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಸಂವಾದ ಬೆಳಿಗ್ಗೆ 11ರಿಂದ 12
ಕೊರೊನಾ ಕಾಲದಲ್ಲಿ ರಾಜಕಾರಣಿಗಳ ಯಾತ್ರೆ
ಭಾಗವಹಿಸುವವರು: ಭವ್ಯ ನರಸಿಂಹಮೂರ್ತಿ, ಕಾಂಗ್ರೆಸ್ ವಕ್ತಾರೆ., ಅಶ್ವತ್ಥನಾರಾಯಣ ಗೌಡ ಪ್ರಧಾನ ಕಾರ್ಯದರ್ಶಿ, ಬಿಜೆಪಿ. ಎ.ನಾರಾಯಣ, ರಾಜಕೀಯ ವಿಶ್ಲೇಷಕ,. ಬಿ.ಆರ್. ಮಂಜುನಾಥ್, ಸಾಮಾಜಿಕ ಕಾರ್ಯಕರ್ತ.

ಪಾಡ್‌ಕಾಸ್ಟ್: ಇಂದಿನ ವಿಶೇಷ: ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ
ಸಂವಾದ ಸಂಜೆ 4ರಿಂದ 5
ನವಕರ್ನಾಟಕ: ಬೊಮ್ಮಾಯಿ ಮಾಡಬೇಕಾದುದೇನು?
ಕೆ.ಆರ್. ರಮೇಶ್‌ಕುಮಾರ್, ಶಾಸಕ, ಕಾಂಗ್ರೆಸ್ ನಾಯಕ., ಎಚ್.ಕೆ. ಪಾಟೀಲ, ಶಾಸಕ, ಕಾಂಗ್ರೆಸ್ ನಾಯಕ., ವೈ.ಎಸ್.ವಿ. ದತ್ತ, ಜೆಡಿಎಸ್ ನಾಯಕ., ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ

9ರಿಂದ 12ನೇ ತರಗತಿ ಶುರು

ಒಂದನೇ ಪುಟದಿಂದ

ಕೊರೊನಾ ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರತ್ಯೇಕ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಹೊರಡಿಸಿದೆ. ಅದರ ಅನ್ವಯ, 9 ಮತ್ತು 10ನೇ ತರಗತಿ ಬೆಳಗಿನ ಅವಧಿಯಲ್ಲಿ ಅರ್ಧ ದಿನ ನಡೆಯಲಿದೆ. ಶಾಲಾ ಕೊಠಡಿಗಳ ಲಭ್ಯತೆ, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು 15 ರಿಂದ 20 ಸಂಖ್ಯೆಯಲ್ಲಿ ತಂಡಗಳಾಗಿ ಮಾಡಿ ತರಗತಿ ನಡೆಸಲಾಗುವುದು.

ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿ ಏಕಕಾಲದಲ್ಲಿ ನಡೆಯಲಿದೆ. ಪ್ರತಿ ತರಗತಿಯ ಶೇಕಡ 50ರಷ್ಟು ವಿದ್ಯಾರ್ಥಿಗಳು ಮೊದಲ 3 ದಿನ (ಸೋಮವಾರ, ಮಂಗಳವಾರ, ಬುಧವಾರ), ಉಳಿದ ಶೇಕಡ 50ರಷ್ಟು ವಿದ್ಯಾರ್ಥಿಗಳು ನಂತರದ ಮೂರು ದಿನ (ಗುರುವಾರ, ಶುಕ್ರವಾರ, ಶನಿವಾರ) ತರಗತಿಗಳಿಗೆ ಹಾಜರಾಗಬೇಕು. ತರಗತಿಗೆ ಹಾಜರಾಗದ ದಿನಗಳಲ್ಲಿ ಆನ್‌ಲೈನ್ ತರಗತಿಗೆ ಹಾಜರಾಗಬೇಕು. ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆ ಇದ್ದು, ವಿಶಾಲವಾದ ಕೊಠಡಿ ಇದ್ದರೆ, ಎಲ್ಲ ವಿದ್ಯಾರ್ಥಿಗಳಿಗೆ ವಾರ ಪೂರ್ತಿ ತರಗತಿ ನಡೆಸಲು ಅವಕಾಶ ನೀಡಲಾಗಿದೆ.

ಸದ್ಯಕ್ಕೆ 9ನೇ ತರಗತಿಯಿಂದ ತರಗತಿ: 'ಕೋವಿಡ್ ಮೂರನೇ ಅಲೆ ಬರುತ್ತದೆ ಎಂದು ತಜ್ಞರು ಹೇಳಿದ್ದು ನಿಜ. ಇದು ಮಹಾರಾಷ್ಟ್ರ, ಕೇರಳ ರಾಜ್ಯ ಹೊರತುಪಡಿಸಿದರೆ ಬೇರೆಡೆ ಕಂಡುಬಂದಿಲ್ಲ. ಮಕ್ಕಳ ತಜ್ಞರು ಹೇಳುವ ಪ್ರಕಾರ, ಕೊರೊನಾ ಸೋಂಕು ಮಕ್ಕಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ತುಂಬಾ ಕಡಿಮೆ. 1ನೇ ತರಗತಿಯಿಂದಲೇ ಶಾಲೆ ಆರಂಭಿಸುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಲಹೆ ನೀಡಿತ್ತು. ಆದರೂ, ಸದ್ಯಕ್ಕೆ 9ನೇ ತರಗತಿಯಿಂದ ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಸಚಿವ ನಾಗೇಶ್ ತಿಳಿಸಿದರು.

'ಶಿಕ್ಷಕರು ಕಡ್ಡಾಯವಾಗಿ ಲಸಿಕೆ ಪಡೆದಿರಬೇಕು. ಲಸಿಕೆ ಪಡೆಯದ ಶಿಕ್ಷಕರು ಶಾಲೆಗೆ ಹಾಜರಾಗಲು ಅವಕಾಶ ಇಲ್ಲ. ಅಂಥ ಶಿಕ್ಷಕರಿಗೆ ರಜೆ ಬದಲು ಗೈರು ಹಾಜರಾತಿ ನಮೂದಿಸಲಾಗುವುದು. ಈಗಾಗಲೇ ಶೇ 95ರಷ್ಟು ಶಿಕ್ಷಕರು ಲಸಿಕೆ ಪಡೆದುಕೊಂಡಿದ್ದಾರೆ. ಕಳೆದ ಎರಡು ದಿನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಸಿಕೆ ಹಾಕಿಸಿಕೊಂಡಿದ್ದಾರೆ' ಎಂದೂ ವಿವರಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸಮರಾಭ್ಯಾಸ: ಗುವಾಮ್ ದ್ವೀಪ ತಲುಪಿದ ಭಾರತದ ಯುದ್ಧನೌಕೆಗಳು

ನವದೆಹಲಿ (ಪಿಟಿಐ): ಆ. 26ರಿಂದ 29ರ ವರೆಗೆ ಕ್ವಾಡ್ ರಾಷ್ಟ್ರಗಳು ನಡೆಸುವ 'ಮಲಬಾರ್ ಸಮರಾಭ್ಯಾಸ'ದಲ್ಲಿ ಪಾಲ್ಗೊಳ್ಳಲು ಭಾರತದ ಎರಡು ಯುದ್ಧನೌಕೆಗಳು ಗುವಾಮ್ ದ್ವೀಪವನ್ನು ತಲುಪಿವೆ.

ಐಎನ್‌ಎಸ್ ಶಿವಾಲಿಕ್ ಹಾಗೂ ಐಎನ್‌ಎಸ್ ಕದಮತ್ ಯುದ್ಧನೌಕೆಗಳು ಸಂಕೀರ್ಣವಾದ ತಾಲೀಮಿನಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲಿವೆ ಎಂದು ಭಾರತೀಯ ನೌಕಾಪಡೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪೆಸಿಫಿಕ್ ಸಾಗರದಲ್ಲಿರುವ ಈ ದ್ವೀಪ ಅಮೆರಿಕದ ಆಡಳಿತಕ್ಕೆ ಒಳಪಟ್ಟಿದೆ. ಇಲ್ಲಿ ನಡೆಯುವ ಸಮರಾಭ್ಯಾಸದಲ್ಲಿ ಕ್ವಾಡ್ ರಾಷ್ಟ್ರಗಳಾದ ಭಾರತ, ಅಮೆರಿಕ, ಆಸ್ಟ್ರೇಲಿಯಾ ಹಾಗೂ ಜಪಾನ್‌ನ

ಭಾರತೀಯ ಯುದ್ಧನೌಕೆಗಳು ಅಮೆರಿಕದ ಗುವಾಮ್ ದ್ವೀಪ ತಲುಪಿವೆ –ಪಿಟಿಐ ಚಿತ್ರ

ನೌಕಾಪಡೆಗಳು ಪಾಲ್ಗೊಳ್ಳಲಿವೆ.

ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಚೀನಾ ತನ್ನ ಮಿಲಿಟರಿ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಕ್ವಾಡ್ ರಾಷ್ಟ್ರಗಳು ಈ ಸಮರಾಭ್ಯಾಸ ಆಯೋಜಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ತೃತೀಯ ಪುಣ್ಯಸ್ಮರಣೆ

ಎಂ. ವಿಜಯಲಕ್ಷ್ಮಿ
(ಓರಿಯಂಟಲ್ ಇನ್ಸ್ಯುರೆನ್ಸ್ ಅಧಿಕಾರಿ)
ಜನನ: 23-12-1951 – ಮರಣ: 23-08-2018
ಸದಾ ಸ್ಮರಿಸುವ: ಕೆ.ಎಂ.ಸದಾನಂದ ಮೂರ್ತಿ, ರೂಪಾ, ದಿವ್ಯಾ ಮತ್ತು ಕುಟುಂಬದವರು

NAME CHANGE ANNOUNCEMENT
Log on to :
dhclassifieds.com

ಕೋವಿಡ್: 29.38 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,189 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.38 ಲಕ್ಷ ದಾಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಕೆ ಕಂಡಿದ್ದು, ಒಂದು ದಿನದಲ್ಲಿ 1.25 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.94 ರಷ್ಟು ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಕಲಬುರ್ಗಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 286, ಮೈಸೂರಿನಲ್ಲಿ 79 ಹಾಗೂ ಕೊಡಗಿನಲ್ಲಿ 55 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 267 ಹಾಗೂ ಉಡುಪಿಯಲ್ಲಿ 132 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 1,456 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.80 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 20,556 ಕ್ಕೆ ಇಳಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 14 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 4, ಬೆಂಗಳೂರು, ಧಾರವಾಡ, ಮಂಡ್ಯ, ತುಮಕೂರು ಹಾಗೂ ಉಡುಪಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಬಾಗಲಕೋಟೆ ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.85 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,145ಕ್ಕೆ ತಲುಪಿದೆ.

ಕಲ್ಯಾಣ್ ಸಿಂಗ್‌ಗೆ ಅಂತಿಮ ನಮನ ಸಲ್ಲಿಸಿದ ಪ್ರಧಾನಿ ಮೋದಿ

'ಜನರ ಪಾಲಿಗೆ ವಿಶ್ವಾಸದ ಪ್ರತೀಕದಂತಿದ್ದರು'

ಲಖನೌ(ಪಿಟಿಐ): 'ಬಿಜೆಪಿಯ ಹಿರಿಯ ಮುಖಂಡ ಕಲ್ಯಾಣ್ ಸಿಂಗ್ ಅವರ ನಿಧನದಿಂದ ನಾವೊಬ್ಬ ಸಮರ್ಥ ನಾಯಕನನ್ನು ಕಳೆದುಕೊಂಡಿದ್ದೇವೆ. ಜನರ ಪಾಲಿಗೆ ಅವರು ವಿಶ್ವಾಸದ ಪ್ರತೀಕದಂತಿದ್ದರು' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಶನಿವಾರ ರಾತ್ರಿ ನಿಧನರಾದ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರಿಗೆ ಇಲ್ಲಿ ಅಂತಿಮ ನಮನ ಸಲ್ಲಿಸಿದ ಬಳಿಕ ಅವರ ಕುಟುಂಬದವರಿಗೆ ಮೋದಿ ಸಾಂತ್ವನ ಹೇಳಿದರು. ನಂತರ, ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ ಅವರು, ಅಗಲಿದ ನಾಯಕನ ಗುಣಗಾನ ಮಾಡಿದರು.

ಲಖನೌದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಲ್ಯಾಣ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಭಾನುವಾರ ಅಂತಿಮ ನಮನ ಸಲ್ಲಿಸಿದರು –ಪಿಟಿಐ ಚಿತ್ರ

'ಕಲ್ಯಾಣ್ ಸಿಂಗ್ ಅವರಿಗೆ ತನ್ನ ಚರಣಗಳಲ್ಲಿ ಸದ್ಗತಿ ದಯಪಾಲಿಸುವಂತೆ ಭಗವಾನ್ ಶ್ರೀರಾಮನಲ್ಲಿ ಪ್ರಾರ್ಥಿಸುವೆ. ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನೂ ಭಗವಂತ ನೀಡಲಿ' ಎಂದು ಮೋದಿ ಹೇಳಿದರು.

'ನಾವೊಬ್ಬ ಸಮರ್ಥ ನಾಯಕನನ್ನು ಕಳೆದುಕೊಂಡಿದ್ದೇವೆ. ಅವರು ನೀಡಿದ್ದ ಭರವಸೆಗಳನ್ನು ಈಡೇರಿಸುವ ಮೂಲಕ, ಕನಸುಗಳನ್ನು ನನಸು ಮಾಡುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕು' ಎಂದೂ ಅವರು ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಉಪಮುಖ್ಯಮಂತ್ರಿಗಳಾದ ಕೇಶವಪ್ರಸಾದ್ ಮೌರ್ಯ, ದಿನೇಶ್ ಶರ್ಮಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಜರಿದ್ದರು.

ಜನಸಂಖ್ಯೆ ನಿಯಂತ್ರಿಸಿದ್ದಕ್ಕೆ ಈ ಕ್ರಮ ಸರಿಯೇ : ಮದ್ರಾಸ್ ಹೈಕೋರ್ಟ್ ಪ್ರಶ್ನೆ

'ಲೋಕಸಭಾ ಕ್ಷೇತ್ರಗಳನ್ನು ಕಳೆದುಕೊಳ್ಳಬೇಕೆ'

ಚೆನ್ನೈ: ಜನಸಂಖ್ಯೆಯನ್ನು ಆಧಾರವನ್ನಾಗಿಟ್ಟುಕೊಂಡು 1967ರಿಂದ ದಕ್ಷಿಣದ ರಾಜ್ಯಗಳಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಕಡಿಮೆ ಮಾಡಿರುವ ಬಗ್ಗೆ ಮದ್ರಾಸ್ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಅದರಲ್ಲೂ, ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳು ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿ ಜಾರಿಗೊಳಿಸಿವೆ. ಆದರೆ, ಈ ರಾಜ್ಯಗಳಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ರಾಜಕೀಯ ಪ್ರಾತಿನಿಧ್ಯವನ್ನು ಕಸಿಯಲಾಗಿದೆ ಎಂದು ನ್ಯಾಯಮೂರ್ತಿಗಳಾದ ಕೃಪಾಕರನ್ ಹಾಗೂ ಪುಗಳೇಂದಿ ಅವರಿರುವ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಜನಸಂಖ್ಯೆ ನಿಯಂತ್ರಣ ಮಾಡದ ಉತ್ತರ ಭಾರತದ ರಾಜ್ಯಗಳಿಗೆ ಲಾಭವಾಗಿದೆ. ಹೆಚ್ಚು ಜನಸಂಖ್ಯೆ ಕಾರಣದಿಂದಾಗಿ ಆ ರಾಜ್ಯಗಳಿಗೆ ಸಂಸತ್‌ನಲ್ಲಿ ಅಧಿಕ ಪ್ರಾತಿನಿಧ್ಯ ಲಭಿಸಿದೆ. ಜನಸಂಖ್ಯೆ ನಿಯಂತ್ರಿಸುವ ರಾಜ್ಯಗಳು ಲೋಕಸಭಾ ಕ್ಷೇತ್ರಗಳನ್ನು ಏಕೆ ಕಳೆದುಕೊಳ್ಳಬೇಕು' ಎಂದೂ ನ್ಯಾಯಪೀಠ ಪ್ರಶ್ನಿಸಿದೆ.

ತೆಂಕಾಸಿ ಲೋಕಸಭಾ ಕ್ಷೇತ್ರ ಕಳೆದ 56 ವರ್ಷಗಳಿಂದ ಮೀಸಲು ಕ್ಷೇತ್ರವಾಗಿದೆ. ಮೀಸಲಾತಿಯನ್ನು ತೆಗೆದು ಸಾಮಾನ್ಯ ಕ್ಷೇತ್ರವನ್ನಾಗಿ ಮಾಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಜಕೀಯ ಪಕ್ಷಗಳಾದ ಡಿಎಂಕೆ, ಎಐಎಡಿಎಂಕೆ, ಕಾಂಗ್ರೆಸ್ ಹಾಗೂ ಬಿಜೆಪಿಯನ್ನು ಈ ಪ್ರಕರಣದ ಕಕ್ಷಿಗಾರರನ್ನಾಗಿ ಮಾಡಿರುವ ಹೈಕೋರ್ಟ್, ಪ್ರತಿಕ್ರಿಯೆ ಸಲ್ಲಿಸುವಂತೆ ಈ ಎಲ್ಲ ಪಕ್ಷಗಳಿಗೆ ನೋಟಿಸ್ ಜಾರಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ವೃಕ್ಷಗಳಿಗೆ ರಾಖಿ ಕಟ್ಟಿ ಪರಿಸರ ಸಂರಕ್ಷಣೆ ಜಾಗೃತಿ

ಪಟ್ನಾ: ರಕ್ಷಾಬಂಧನ ದಿನವಾದ ಭಾನುವಾರ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ವೃಕ್ಷಗಳಿಗೆ ರಾಖಿ ಕಟ್ಟಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿದರು.

2012ರಿಂದಲೂ ಬಿಹಾರದ ಎನ್‌ಡಿಎ ಸರ್ಕಾರ ರಕ್ಷಾಬಂಧನ ದಿನವನ್ನು 'ವೃಕ್ಷ ರಕ್ಷಾ ದಿನ' (ಮರ ಸಂರಕ್ಷಣಾ ದಿನ) ಎಂದು ಆಚರಿಸುತ್ತಿದೆ.

ಪಟ್ನಾದಲ್ಲಿ ನಿತೀಶ್ ಕುಮಾರ್ ವೃಕ್ಷಗಳಿಗೆ ರಾಖಿ ಕಟ್ಟುವ ಮೂಲಕ ಜನರಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸಿದರು. ಸಸಿಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರವನ್ನು ರಕ್ಷಣೆ ಮಾಡಬೇಕು ಎಂದು ಜನರಿಗೆ ಕರೆ ನೀಡಿದರು.

ಮಣಿಪುರದ ರಾಜ್ಯಪಾಲರಾಗಿ ಗಣೇಶನ್ ನೇಮಕ

ನವದೆಹಲಿ (ಪಿಟಿಐ): ತಮಿಳುನಾಡಿನ ಹಿರಿಯ ಬಿಜೆಪಿ ನಾಯಕ ಎಲ್. ಗಣೇಶನ್ ಅವರನ್ನು ಮಣಿಪುರದ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ಇದುವರೆಗೆ ರಾಜ್ಯಪಾಲರಾಗಿದ್ದ ನಜ್ಮಾ ಹೆಪ್ತುಲ್ಲಾ ಅವರು ಈ ತಿಂಗಳ ಆರಂಭದಲ್ಲಿ ನಿವೃತ್ತರಾಗಿದ್ದರು. ಸಿಕ್ಕಿಂ ರಾಜ್ಯಪಾಲ ಗಂಗಾ ಪ್ರಸಾದ್ ಅವರಿಗೆ ಮಣಿಪುರದ ಹೆಚ್ಚುವರಿ ಹೊಣೆ ವಹಿಸಲಾಗಿತ್ತು.

ಗಿರ್ ಅರಣ್ಯದಲ್ಲಿ ರೈಲು ಡಿಕ್ಕಿ: ಸಿಂಹ ಸಾವು

ಅಮ್ರೇಲಿ (ಪಿಟಿಐ): ಗುಜರಾತ್‌ನ ಅಮ್ರೇಲಿ ಜಿಲ್ಲೆಯ ಗಿರ್ ಅರಣ್ಯ ಪ್ರದೇಶದಲ್ಲಿ ಸರಕು ಸಾಗಣೆ ರೈಲು ಡಿಕ್ಕಿ ಹೊಡೆದುದರಿಂದ ಗಂಡು ಸಿಂಹವೊಂದು ಮೃತಪಟ್ಟಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಗಿರ್ ಅರಣ್ಯ ವಿಭಾಗದ ಖಡ್ಕಲಾ ಗ್ರಾಮದಲ್ಲಿ ಶನಿವಾರ ರಾತ್ರಿ 9.30ರ ವೇಳೆಗೆ ಈ ದುರಂತ ಸಂಭವಿಸಿದೆ. ಸುಮಾರು 6 ವರ್ಷದ ಸಿಂಹದ ಕಳೇಬರ ಹಳಿಯಲ್ಲಿ ಪತ್ತೆಯಾಗಿದೆ.

ತಮಿಳುನಾಡು: ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಇನ್ನೋವಾ ಕಾರು

ಅಣ್ಣಾಮಲೈ

ಚೆನ್ನೈ: ತಮಿಳುನಾಡು ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮಿಸುವ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಐಷಾರಾಮಿ ಎಸ್‌ಯುವಿಗಳನ್ನು ಉಡುಗೊರೆಯಾಗಿ ನೀಡುವುದಾಗಿ ನೀಡಿದ್ದ ಭರವಸೆಯನ್ನು ಬಿಜೆಪಿ ಈಡೇರಿಸಿದೆ.

ಕೊಯಮತ್ತೂರು, ಈರೋಡ್, ತಿರುನೆಲ್ವೇಲಿ ಹಾಗೂ ಕನ್ಯಾಕುಮಾರಿ ಜಿಲ್ಲೆಗಳ ತಲಾ ಒಂದು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಕ್ರಮವಾಗಿ ಈ ಜಿಲ್ಲಾ ಘಟಕಗಳ ಅಧ್ಯಕ್ಷರಾದ ನಂದಕುಮಾರ್, ಶಿವಸುಬ್ರಮಣಿಯನ್, ಮಹಾರಾಜನ್ ಹಾಗೂ ಧರ್ಮರಾಜ್ ಅವರಿಗೆ ಇನ್ನೋವಾ ಕ್ರಿಸ್ಟಾ ಎಸ್‌ಯುವಿಗಳನ್ನು ನೀಡಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ, Office, Company Work ಗೆ ಯುವಕ-ಯುವತಿಯರು ಬೇಕಾಗಿದ್ದಾರೆ.5th,10th, PUC, ITI, Diploma, Any Degree, Pass/Fail, ನೇರನೇಮಕಾತಿ. 16,800-65,000/- ಊಟ ವಸತಿಯೊಂದಿಗೆ 7022366461, 7259673183

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ನೇರನೇಮಕಾತಿ 7TH,SSLC, PUC, Degree,ITI ನವರು TOYOTA, TATA ಮೋಟಾರ್ಸ, ಬಿಗ್‌ಬಜಾರ್ಸ, TVS ಗಳಿಗೆ 18,000-60,000/- ವಸತಿಯೂಟವಿದೆ. 7795837319, 9901312461

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000-56,000/- ವಸತಿಯೂಟವಿದೆ. 9611715755

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ
Astrology

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಕೊಲ್ಲೂರು ಮೂಕಾಂಬಿಕಾ ಜ್ಯೋತಿಷ್ಯರು, ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಗಂಡಹೆಂಡತಿ ಕಲಹ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 100% ಶಾಶ್ವತ ಪರಿಹಾರ ಕೆಲಸ ಹಾಗದಿದ್ದಲ್ಲಿ ಹಣ ವಾಪಸ್, ರಾಮಕೃಷ್ಣ ಶರ್ಮಾ. 9880950461

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100%ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ವ್ಯಾಪಾರ
Business to Business
Finance

ಸಾಲ ಸೌಲಭ್ಯ. ಕೃಷಿ ಸಾಲ ವ್ಯವಹಾರ ಸಾಲ ವೈಯಕ್ತಿಕ ಸಾಲ ಸ್ಥಿರಾಸ್ತಿ ಸಾಲ ವಿದ್ಯಾ ಸಾಲ ಮಾರ್ಟ್ ಗೇಜ್ ಸಾಲ ವಾರ್ಷಿಕ ಬಡ್ಡಿ ದರ 4% ಸಬ್ಸಿಡಿ 10 ರಿಂದ 30%. ಸಂಪರ್ಕಿಸಿರಿ 8421876983/ 7219699215

Business Offers
Finance

LOANS: 10LS-500CR. For Property, Project, Business Cheques. Takeover Done. Easy Process & Repayment. Good Commission for Agents 08838928406

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
General

ಮಾರಾಟಕ್ಕಿದೆ: ಮೈಸೂರು ಗುರೂರುನಲ್ಲಿ ಗುಡ್ ಶೆಫರ್ಡ್ ಸ್ಕೂಲ್ ಹತ್ತಿರ ಪೂರ್ವ ದಿಕ್ಕಿನ 11B 30x40 ಮನೆ ನಿವೇಶನ. 7892922745/ 9980906652

Vishweshwariah Layout

SITE FOR Sale Vishwasvariah Lay Out 4th Block 30*20, South Facing - Cont 9845868653 ,9449308058

ವಾಹನ
Four Wheelers Selling
Others

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ

TATA ACE GOLD CNG
4.99%* ಬಡ್ಡಿದರ 48 ತಿಂಗಳು
ಅಥವಾ
5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು
₹25 000/-* ವರೆಗೆ
ಎಕ್ಸ್‌ಚೇಂಜ್
₹12 000/-* ವರೆಗೆ
2 ವರ್ಷ/50 000 km AMC ಪಡೆಯಿರಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 98950 23373
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 80952 02223
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತವೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಅಫ್ಗಾನಿಸ್ತಾನ; ವೇಗ ಪಡೆದುಕೊಂಡ ತೆರವು ಕಾರ್ಯಾಚರಣೆ: 400 ಮಂದಿ ಭಾರತಕ್ಕೆ

ತವರಿಗೆ ಮರಳಿದ 329 ಭಾರತೀಯರು

ಭಾರತೀಯ ವಾಯುಪಡೆ ವಿಮಾನದ ಮೂಲಕ ಅಫ್ಗಾನಿಸ್ತಾನದಿಂದ ದೆಹಲಿ ಸಮೀಪದ ಹಿಂಡನ್ ವಾಯುನೆಲೆಗೆ ಬಂದಿಳಿದ ಭಾರತೀಯರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತವು ಅಫ್ಗಾನಿಸ್ತಾನದಿಂದ 400 ಮಂದಿಯನ್ನು ಭಾನುವಾರ ತೆರವು ಮಾಡಿ ಕರೆತಂದಿದೆ. ಅವರಲ್ಲಿ 329 ಮಂದಿ ಭಾರತೀಯರು ಮತ್ತು ಅಫ್ಗಾನಿಸ್ತಾನದ ಇಬ್ಬರು ಸಂಸದರು ಇದ್ದಾರೆ. ಅಫ್ಗಾನಿಸ್ತಾನವನ್ನು ತಾಲಿಬಾನ್ ಸಂಘಟನೆಯು ವಶಕ್ಕೆ ಪಡೆದ ಬಳಿಕ ಅಲ್ಲಿನ ಪರಿಸ್ಥಿತಿ ಶೋಚನೀಯವಾಗಿದೆ. ಹಾಗಾಗಿ, ವಿದೇಶಿಯರನ್ನು ತೆರವು ಮಾಡುವ ಕಾರ್ಯಾಚರಣೆ ತೀವ್ರಗತಿ ಪಡೆದುಕೊಂಡಿದೆ. ಮೂರು ವಿಮಾನಗಳಲ್ಲಿ ಭಾರತವು ತೆರವು ಕಾರ್ಯ ನಡೆಸಿತು.

107 ಭಾರತೀಯರು, 23 ಮಂದಿ ಅಫ್ಗನ್ ಸಿಖ್ ಮತ್ತು ಹಿಂದೂಗಳು ಸೇರಿ 168 ಮಂದಿ ಇದ್ದ ಭಾರತೀಯ ವಾಯುಪಡೆ ವಿಮಾನವು ದೆಹಲಿ ಸಮೀಪದ ಹಿಂಡನ್ ವಾಯುನೆಲೆಗೆ ಬಂದಿಳಿಯಿತು. 87 ಭಾರತೀಯರು ಮತ್ತು 23 ನೇಪಾಳಿಯರಿದ್ದ ಏರ್ ಇಂಡಿಯಾದ ವಿಶೇಷ ವಿಮಾನವು ದುಶಾಂಬೆಯಿಂದ ಭಾರತಕ್ಕೆ ಬಂತು. ಇವರನ್ನು ಮೊದಲಿಗೆ ತಜಕಿಸ್ತಾನಕ್ಕೆ ಕರೆದೊಯ್ಯಲಾಗಿತ್ತು.

ಅಮೆರಿಕ ಮತ್ತು ನ್ಯಾಟೊ ವಿಮಾನಗಳ ಮೂಲಕ ದೋಹಾ ತಲುಪಿದ್ದ 135 ಭಾರತೀಯರನ್ನು ವಿಶೇಷ ವಿಮಾನದ ಮೂಲಕ ದೆಹಲಿಗೆ ಭಾನುವಾರ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ, ಕತಾರ್, ತಜಕಿಸ್ತಾನ ಮತ್ತು ಇತರ ಹಲವು ಮಿತ್ರದೇಶಗಳ ಜತೆಗಿನ ಸಮನ್ವಯದ ಮೂಲಕ ಭಾರತವು ತೆರವು ಕಾರ್ಯಾಚರಣೆ ನಡೆಸುತ್ತಿದೆ.

ಕಾಬೂಲ್‌ನಿಂದ 168 ಜನರ ಗುಂಪಿನೊಂದಿಗೆ ಬಂದವರಲ್ಲಿ ಅಫ್ಗಾನಿಸ್ತಾನದ ಸಂಸದರಾದ ಅನಾರ್ಕಲಿ ಹೊನರ್ಯಾರ್ ಮತ್ತು ನರೇಂದ್ರ ಸಿಂಗ್ ಖಾಲ್ಸಾ ಮತ್ತು ಅವರ ಕುಟುಂಬಗಳು ಇದ್ದವು ಎಂದು ಮೂಲಗಳು ಹೇಳಿವೆ.

ಕಾಬೂಲ್‌ನಿಂದ ದೋಹಾಕ್ಕೆ ಬಂದ ತಂಡದಲ್ಲಿದ್ದವರು ಅಫ್ಗಾನಿಸ್ತಾನದಿಂದ ಕಾರ್ಯಾಚರಿಸುತ್ತಿದ್ದ ವಿದೇಶಗಳ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದವರು ಎಂದು ತಿಳಿದು ಬಂದಿದೆ.

ಅಫ್ಗಾನಿಸ್ತಾನದಲ್ಲಿ ಭಾರತದ ರಾಯಭಾರಿ, ರಾಯಭಾರ ಕಚೇರಿಯ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಮತ್ತು ಕಾಬೂಲ್‌ನಲ್ಲಿ ಸಿಲುಕಿಕೊಂಡವರು ಸೇರಿ 200 ಮಂದಿಯನ್ನು ಆರಂಭದಲ್ಲಿಯೇ ತೆರವು ಮಾಡಲಾಗಿತ್ತು. ಇದಕ್ಕಾಗಿ ವಾಯುಪಡೆಯ ಎರಡು ವಿಮಾನಗಳನ್ನು ಬಳಸಲಾಗಿತ್ತು.

ಸರ್ಕಾರದಲ್ಲಿ ಹಖ್ಖಾನಿ 'ಉಗ್ರ' ಗುಂಪು

ಅಫ್ಗಾನಿಸ್ತಾನದಲ್ಲಿ ಸರ್ಕಾರ ರಚನೆಯ ಮಾತುಕತೆಯನ್ನು ತಾಲಿಬಾನ್ ಆರಂಭಿಸಿದೆ. ಅತ್ಯಂತ ಭೀಕರ ಎಂದು ಹೇಳಲಾಗುವ ಹಖ್ಖಾನಿ ಸಂಘಟನೆಯ ಸದಸ್ಯರೂ ಮಾತುಕತೆಯಲ್ಲಿ ಭಾಗಿ ಆಗಿದ್ದಾರೆ.

ಅಫ್ಗಾನಿಸ್ತಾನದ ಮೇಲೆ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ಭೀಕರವಾದ ದಾಳಿಗಳ ಹಿಂದೆ ಹಖ್ಖಾನಿ ಸಂಘಟನೆಯ ಕೈವಾಡ ಇದೆ ಎಂದು ಹೇಳಲಾಗಿದೆ. ಈ ರೀತಿಯ ಭಯೋತ್ಪಾದನೆಯ ಹಿನ್ನೆಲೆ ಇದ್ದರೂ ಹೊಸದಾಗಿ ರಚನೆ ಆಗಲಿರುವ ಸರ್ಕಾರದಲ್ಲಿ ಹಖ್ಖಾನಿ ಗುಂಪು ಪ್ರಬಲವಾಗಿ ಇರಲಿದೆ ಎನ್ನಲಾಗಿದೆ.

1980ರ ದಶಕದಲ್ಲಿ ಸೋವಿಯತ್ ವಿರುದ್ಧದ ಹೋರಾಟದ ಪ್ರಮುಖನಾಗಿದ್ದ ಜಲಾಲುದ್ದೀನ್ ಹಖ್ಖಾನಿ ಈ ಗುಂಪಿನ ಸ್ಥಾಪಕ. ಅಮೆರಿಕದ ಸಿಐಎಗೆ ಈತ ಅಚ್ಚುಮೆಚ್ಚಾಗಿದ್ದ. ಪಾಕಿಸ್ತಾನವೂ ಈ ಗುಂಪಿಗೆ ಶಸ್ತ್ರಾಸ್ತ್ರ ಪೂರೈಸಿದೆ.

ಜಲಾಲುದ್ದೀನ್‌ನ ಸಾವಿನ ಬಳಿಕ, ಆತನ ಮಗ ಸಿರಾಜುದ್ದೀನ್ ಹಖ್ಖಾನಿ ಗುಂಪಿನ ಮುಖ್ಯಸ್ಥನಾಗಿದ್ದಾನೆ. ಈ ರೀತಿಯ ಸಂಘಟನೆಗಳಲ್ಲಿಯೇ ಅತಿ ಹೆಚ್ಚಿನ ಹಣಕಾಸು ಮತ್ತು ಸೇನಾ ಬಲವನ್ನು ಈ ಗುಂಪು ಹೊಂದಿದೆ. ನಿರ್ದಯಿ ಕಾರ್ಯಾಚರಣೆ ಇದರ ಇನ್ನೊಂದು ಗುರುತು. ಈ ಗುಂಪು ತಾಲಿಬಾನ್‌ನ ಒಳಗೇ ಇದ್ದರೂ ಸ್ವಾಯತ್ತೆ ಉಳಿಸಿಕೊಂಡಿದೆ.

ಹಖ್ಖಾನಿ ಭಯೋತ್ಪಾದಕ ಗುಂಪು ಎಂದು ಅಮೆರಿಕ ಘೋಷಿಸಿದೆ. ವಿಶ್ವಸಂಸ್ಥೆ ಕೂಡ ಇದರ ಮೇಲೆ ನಿರ್ಬಂಧಗಳನ್ನು ಹೇರಿದೆ. ಆತ್ಮಹತ್ಯಾ ದಾಳಿಗಳನ್ನೂ ನಡೆಸಿರುವ ಈ ಗುಂಪು ಅಫ್ಗಾನಿಸ್ತಾನದ ಸರ್ಕಾರದಲ್ಲಿ ಪ್ರಮುಖ ಸ್ಥಾನ ಪಡೆಯಲಿದೆ ಎಂಬುದು ಅಲ್ಲಿನ ಜನರ ಕಳವಳಕ್ಕೆ ಕಾರಣವಾಗಿದೆ.

ಸಿಲುಕಿರುವವರ ತೆರವಿಗೆ ಆದ್ಯತೆ

ಅಫ್ಗಾನಿಸ್ತಾನದಲ್ಲಿ ಇರುವ ಭಾರತೀಯ ನಾಗರಿಕರನ್ನು ಸುರಕ್ಷಿತವಾಗಿ ತೆರವು ಮಾಡುವುದನ್ನು ಖಾತರಿಪಡಿಸಲು ಗಮನ ಕೇಂದ್ರೀಕರಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯವು ಹೇಳಿದೆ.

ಅಫ್ಗಾನಿಸ್ತಾನದಲ್ಲಿ ಇರುವ ಭಾರತೀಯರ ಬಗೆಗಿನ ಮಾಹಿತಿ ಕಲೆ ಹಾಕುವುದು ಸರ್ಕಾರದ ಮುಂದೆ ಇರುವ ಆದ್ಯತೆಯಾಗಿದೆ. ಅಫ್ಗಾನಿಸ್ತಾನದಲ್ಲಿ ಇರುವ ಭಾರತೀಯರು ಅಫ್ಗಾನಿಸ್ತಾನ ವಿಶೇಷ ಘಟಕಕ್ಕೆ ಅಗತ್ಯ ಮಾಹಿತಿ ತಿಳಿಸಬೇಕು ಎಂದು ಸಚಿವಾಲಯವು ಕೋರಿದೆ.

ಕಳೆದ ವಾರದ ಅಂದಾಜಿನ ಪ್ರಕಾರ, 400ಕ್ಕೂ ಹೆಚ್ಚು ಭಾರತೀಯರು ಅಫ್ಗಾನಿಸ್ತಾನದಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಅಂದಾಜಿಸಲಾಗಿತ್ತು.

ತಾಯ್ನಾಡಿಗೆ ಏಳು ಕನ್ನಡಿಗರು

ಬೆಂಗಳೂರು: ಅಫ್ಗಾನಿಸ್ತಾನದಲ್ಲಿ ಸಿಲುಕಿದ್ದ ಕರ್ನಾಟಕದ ಏಳು ಮಂದಿ ವಿಶೇಷ ವಿಮಾನದಲ್ಲಿ ತಾಯ್ನಾಡಿಗೆ ಭಾನುವಾರ ಬಂದಿಳಿದಿದ್ದಾರೆ. ಕಾಬೂಲ್‌ಗೆ ತೆರಳಿದ್ದ ಭಾರತೀಯ ವಾಯುಪಡೆಯ ಸಿ-17 ವಿಮಾನವು ಭಾರತೀಯರನ್ನು ಸುರಕ್ಷಿತವಾಗಿ ನವದೆಹಲಿಗೆ ಕರೆತಂದಿದೆ.

'ಬೆಂಗಳೂರಿನ ಮಾರತ್ತಹಳ್ಳಿಯ ಹಿರಕ್ ದೇಬನಾಥ್, ಸಂಡೂರಿನ ತನ್ವೀನ್ ಬಳ್ಳಾರಿ, ಮಂಗಳೂರಿನ ದಿನೇಶ್ ರೈ, ಜಗದೀಶ್ ಪೂಜಾರಿ, ಡೇವಿಸ್ ಡಿಸೋಜಾ, ಪ್ರಸಾದ್ ಆನಂದ್ ಹಾಗೂ ಶ್ರವಣ್ ಅಂಚನ್ ಭಾರತಕ್ಕೆ ಬಂದಿದ್ದಾರೆ' ಎಂದು ಮೂಲಗಳು ಹೇಳಿವೆ. ಕಾಬೂಲ್‌ನಲ್ಲಿ ಮೂವರು; 'ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರದ ರಾಬರ್ಟ್ ಕ್ಲೈವ್, ಮಂಗಳೂರಿನ ಜೆರೋನಾ ಸಿಕ್ವೇರಾ ಹಾಗೂ ಥೆರೆಸಾ ಕ್ರೋಸ್ತಾ ಎಂಬುವರು ಕಾಬೂಲ್ ವಿಮಾನ ನಿಲ್ದಾಣದಲ್ಲಿದ್ದಾರೆ. ಇವರಲ್ಲಿ ಕ್ರೋಸ್ತಾ ಇಟಲಿಗೆ ಹೋಗುವ ಇಚ್ಛೆ ವ್ಯಕ್ತಪಡಿಸಿದ್ದಾರೆ' ಮೂಲಗಳು ತಿಳಿಸಿವೆ.

ಮಾನ್ಯತೆಗಾಗಿ ಚೀನಾ, ಪಾಕ್ ಕಾರ್ಯತಂತ್ರ

ಬೀಜಿಂಗ್ (ಪಿಟಿಐ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದಲ್ಲಿ ರಚನೆ ಆಗಲಿರುವ ಸರ್ಕಾರಕ್ಕೆ ಜಾಗತಿಕ ಮಾನ್ಯತೆ ದೊರಕಿಸಿಕೊಡಲು ಚೀನಾ ಮತ್ತು ಪಾಕಿಸ್ತಾನ ಜಂಟಿ ಕಾರ್ಯತಂತ್ರ ರೂಪಿಸಲು ಮುಂದಾಗಿವೆ. ಆದರೆ, ಇದು ದೀರ್ಘಾವಧಿಯಲ್ಲಿ ತಿರುಗುಬಾಣ ಆಗಬಹುದು ಎಂದು ಪರಿಣತರು ಎರಡೂ ದೇಶಗಳಿಗೆ ಎಚ್ಚರಿಕೆ ನೀಡಿದ್ದಾರೆ. ಅಫ್ಗಾನಿಸ್ತಾನದಲ್ಲಿ ತನಗೆ ಆಗಿರುವ ಹಿನ್ನಡೆಗೆ ಅಮೆರಿಕವು ಚೀನಾ ಮತ್ತು ಪಾಕಿಸ್ತಾನದ ಮೇಲೆ ಸೇಡು ತೀರಿಸಿಕೊಳ್ಳುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

20 ವರ್ಷದ ಯುದ್ಧದ ಬಳಿಕ ಅಫ್ಗಾನಿಸ್ತಾನದಲ್ಲಿ ಅಮೆರಿಕಕ್ಕೆ ಸೋಲಾಗಿದೆ ಎಂಬುದು ಚೀನಾ ಮತ್ತು ಪಾಕಿಸ್ತಾನದ ಸಂಭ್ರಮಕ್ಕೆ ಕಾರಣವಾಗಿದೆ. ತಾಲಿಬಾನ್ ಸರ್ಕಾರಕ್ಕೆ ಮಾನ್ಯತೆಗಾಗಿ ತೆರೆಮರೆಯಲ್ಲಿ ಎರಡೂ ದೇಶಗಳು ಕೆಲಸ ಮಾಡುತ್ತಿವೆ. ಈ ಹಿಂದೆ ಆದಂತೆ, ಅಲ್ ಕೈದಾ ಮತ್ತು ಇಸ್ಲಾಮಿಸ್ ಸ್ಟೇಟ್‌ನ ಅಪಾಯಗಳ ಬಗ್ಗೆ ಎರಡೂ ದೇಶಗಳು ಹೆಚ್ಚು ಗಮನ ಹರಿಸಿಲ್ಲ ಎನ್ನಲಾಗಿದೆ.

ಅಫ್ಗಾನಿಸ್ತಾನದಲ್ಲಿ ತಟಸ್ಥವಾಗಿ ಇರಲಾಗುವುದು ಎಂಬುದು ಪಾಕಿಸ್ತಾನದ ಘೋಷಿತ ನಿಲುವು. ಆದರೆ, ಪಾಕಿಸ್ತಾನದ ಸರ್ಕಾರವು ತಾಲಿಬಾನ್ ಜತೆಗೇ ಇದೆ ಎಂಬುದು ಈಗ ನಿಚ್ಚಳವಾಗಿದೆ ಎಂದು ಪಾಕಿಸ್ತಾನದ ರಾಜಕೀಯ ವಿಶ್ಲೇಷಕರು ಹೇಳಿದ್ದಾಗಿ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ತನ್ನ ಮಿತ್ರ ದೇಶಗಳಾದ ಚೀನಾ ಮತ್ತು ರಷ್ಯಾ ಜತೆಗೆ ತಾಲಿಬಾನ್ ಪರವಾಗಿ ಮಾತುಕತೆ ನಡೆಸಲು ಪಾಕಿಸ್ತಾನವು ಉತ್ಸುಕವಾಗಿದೆ ಎಂದೂ ವರದಿಯಲ್ಲಿ ಇದೆ.

ತಾಲಿಬಾನ್‌ಗೆ ನೆರವು ನೀಡುವ ಮೂಲಕ ಅಫ್ಗಾನಿಸ್ತಾನದಿಂದ ಭಾರತವನ್ನು ದೂರ ಇರಿಸಬೇಕು ಎಂಬುದು ಪಾಕಿಸ್ತಾನದ ಹುನ್ನಾರ. ಹಾಗಿದ್ದರೂ, ಪಾಕಿಸ್ತಾನ ಮತ್ತು ತಾಲಿಬಾನ್ ನಡುವೆ ಬಹಳ ಒಳ್ಳೆಯ ಸಂಬಂಧವೇನೂ ಹಿಂದೆ ಇದ್ದಿರಲಿಲ್ಲ ವಿಶ್ಲೇಷಕರ ಅಬ್ದುಲ್ ಬಾಸಿತ್ ಹೇಳಿದ್ದಾರೆ.

'ತಾಲಿಬಾನ್ ಅಟ್ಟಹಾಸ ಟೀಕಿಸದ ಬುದ್ಧಿಜೀವಿಗಳು'

ಪ್ರಜಾವಾಣಿ ವಾರ್ತೆ

ವಿಜಯಪುರ: 'ತಾಲಿಬಾನಿಗರ ಅಟ್ಟಹಾಸವನ್ನು ಬುದ್ಧಿಜೀವಿಗಳು ಟೀಕಿಸುತ್ತಿಲ್ಲ. ಅವರು ತಾಲಿಬಾನ್ ಸಂತಾನ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಟೀಕಾ ಪ್ರಹಾರ ನಡೆಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಾಲಿಬಾನಿಗಳ ಬಗ್ಗೆ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಏಕೆ ಮಾತನಾಡುತ್ತಿಲ್ಲ. ಮೋದಿ ಪ್ರಧಾನಿಯಾಗಿರದೇ ಹೋಗಿದ್ದರೆ ಇವರು ತಾಲಿಬಾನಿಗಳನ್ನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದರು. ಪ್ರಧಾನಿ ಮೋದಿ ಅವರಿಂದ ಹಿಂದೂಗಳಾದ ನಾವು ಸುರಕ್ಷಿತವಾಗಿದ್ದೇವೆ' ಎಂದು ಹೇಳಿದರು.

ಭಾರತ ಸುರಕ್ಷಿತ ಅಲ್ಲ ಅನ್ನೋ ಬಾಲಿವುಡ್ ನಟರು, ಈಗ ಅಫ್ಗಾನಿಸ್ತಾನಕ್ಕೆ ಹೋಗಲಿ. ಅಲ್ಲಿ ಜೀವನ ಮಾಡಲಿ ಎಂದು ಹರಿಹಾಯ್ದರು.

'ಇಸ್ಲಾಂ ಧರ್ಮ ಯಾರನ್ನೂ ಸಹೋದರತ್ವದಿಂದ ನೋಡಿಲ್ಲ. ಆದರೂ ಕೆಲ ಅಯೋಗ್ಯ ಸ್ವಾಮೀಜಿಗಳು ವಿನಾಕಾರಣ ಪ್ರವಚನದಲ್ಲಿ ಹಿಂದೂ-ಮುಸ್ಲಿಂ ಭಾಯಿ ಭಾಯಿ ಎನ್ನುತ್ತಾರೆ. ಮಾನವ ಧರ್ಮಕ್ಕೆ ಜಯವಾಗಲಿ ಎನ್ನುತ್ತಾರೆ. ಆದರೆ ಈಗ ತಾಲಿಬಾನ್ ಕ್ರೌರ್ಯದ ಬಗ್ಗೆ ಏಕೆ ಮಾತನಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

ಅಫ್ಗನ್ ತೊರೆದು ಬಂದವರಲ್ಲಿ ಮೂಡಿದೆ ಕೃತಜ್ಞತಾ ಭಾವ

ವಿಶೇಷ ವಿಮಾನದ ಮೂಲಕ ಪೋಷಕರೊಂದಿಗೆ ಭಾರತಕ್ಕೆ ಬಂದಿಳಿದ ಕುಟುಂಬದ ಮಕ್ಕಳಿಬ್ಬರು ಸಂಭ್ರಮಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕಾಬೂಲ್‌ನಿಂದ ತೆರವುಗೊಂಡು, ಭಾನುವಾರ ಬೆಳಿಗ್ಗೆ ಭಾರತಕ್ಕೆ ಬಂದಿಳಿದವರಲ್ಲಿ ನಿರಾಳ ಹಾಗೂ ಕೃತಜ್ಞತಾ ಭಾವ ಎದ್ದು ಕಾಣುತ್ತಿತ್ತು.

ಕಾಬೂಲ್‌ನಿಂದ ತೆರವುಗೊಂಡವರ ಪೈಕಿ ಅಫ್ಗಾನಿಸ್ತಾನದ ಇಬ್ಬರು ಸಂಸದರಾದ ಅನಾರ್ಕಲಿ ಹೊನಾರ್‌ಯಾರ್ ಮತ್ತು ನರೇಂದ್ರಸಿಂಗ್ ಖಾಲ್ಸಾ ಹಾಗೂ ಅವರ ಕುಟುಂಬದ ಸದಸ್ಯರೂ ಇದ್ದಾರೆ. ತಮ್ಮ ದೇಶವು ಮತ್ತೆ ಸುಸ್ಥಿತಿಗೆ ಮರಳುತ್ತಲೇ ತಾವೂ ಅಲ್ಲಿಗೆ ವಾಪಸ್ಸಾಗುವ ಆಶಾವಾದ ವ್ಯಕ್ತಪಡಿಸಿದರು.

ಭಾರತವನ್ನು ತಮ್ಮ 'ಎರಡನೇ ಮನೆ' ಎಂದ ಖಾಲ್ಸಾ, ಕಾಬೂಲ್ ವಿಮಾನ ನಿಲ್ದಾಣಕ್ಕೆ ಶನಿವಾರ ತಮ್ಮನ್ನು ಕರೆದುಕೊಂಡು ಬರುತ್ತಿದ್ದ ವೇಳೆ ಬೆಂಗಾವಲು ವಾಹನಗಳಿಂದ ತಮ್ಮ ವಾಹನವನ್ನು ಬೇರ್ಪಡಿಸಿದ ಸಂದರ್ಭದಲ್ಲಿ ಅನುಭವಿಸಿದ ಆತಂಕ-ಭಯವನ್ನು ಬಿಡಿಸಿಟ್ಟರು.

'ನಾವು ಅಫ್ಗಾನಿಸ್ತಾನದವರು ಎಂಬ ಕಾರಣಕ್ಕಾಗಿ ಅವರು (ತಾಲಿಬಾನಿಗಳು) ನಮ್ಮ ವಾಹನವನ್ನು, ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಇತರ ವಾಹನಗಳಿಂದ ಬೇರೆ ಮಾಡಿದರು. ಆದರೆ, ನಮ್ಮೊಂದಿಗೆ ಚಿಕ್ಕ ಮಕ್ಕಳು ಇದ್ದುದರಿಂದ ನಾವು ಅಲ್ಲಿಂದ ಪಲಾಯನ ಮಾಡಿದೆವು' ಎಂದು ಹೇಳಿದರು.

'ಇದು ನಮ್ಮ ಎರಡನೇ ಮನೆ. ನಾವು ತಲೆತಲಾಂತರಗಳಿಂದ ಅಲ್ಲಿ ನೆಲೆಸಿದ್ದು, ಅಫ್ಗಾನಿಸ್ತಾನದ ಪುನರ್‌ನಿರ್ಮಾಣಕ್ಕಾಗಿ ದೇವರಲ್ಲಿ ಪ್ರಾರ್ಥಿಸುತ್ತೇವೆ. ನಾವು ಮತ್ತೆ ಅಲ್ಲಿನ ಗುರುದ್ವಾರ, ದೇವಾಲಯಗಳಲ್ಲಿ ತೆರಳಿ ಪೂಜೆ ಸಲ್ಲಿಸುವಂತಾಗಲು ಬೇಡುತ್ತೇವೆ' ಎಂದರು.

ತಮ್ಮ ದೇಶದಲ್ಲಿನ ಹೊಸದಾದ ತಾಲಿಬಾನಿಗಳ ಆಡಳಿತದ ಸ್ಥಿತಿಯನ್ನು ವಿವರಿಸಿದ ಅವರು, 'ತಾಲಿಬಾನ್ ಎಂಬುದು ಕೇವಲ ಒಂದು ಗುಂಪು ಅಷ್ಟೇ ಅಲ್ಲ. ಅದರಲ್ಲಿ 10–12 ವಿಭಾಗಗಳಿವೆ' ಎಂದರು. ಅಫ್ಗನ್ ಸಂಸತ್ತಿನ ಮೇಲ್ಮನೆಯ ಸದಸ್ಯ ಆಗಿರುವ ಹೊನಾರ್‌ಯಾರ್, ವಿಡಿಯೊ ಸಂದೇಶದ ಮೂಲಕ ಭಾರತಕ್ಕೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

'ನನ್ನನ್ನು ಅಲ್ಲಿಂದ ತೆರವುಗೊಳಿಸಿ, ಜೀವ ಉಳಿಸಿದ ಭಾರತ ಸರ್ಕಾರಕ್ಕೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ, ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಹಾಗೂ ಭಾರತದ ವಾಯುಪಡೆಯ ಸಿಬ್ಬಂದಿಗೆ ಧನ್ಯವಾದಗಳು' ಎಂದು ಹೇಳಿದ್ದಾರೆ.

'ಬಂಧಮುಕ್ತಿಯ ಅನುಭವವಾಗುತ್ತಿದೆ' ಎಂದು ಸಂತಸ ವ್ಯಕ್ತಪಡಿಸಿದ ಅಫ್ಗಾನ್ ನಿವಾಸಿ ಅಲ್ಲಾದದ್ ಖುರೇಷಿ, ಜೀವ ಉಳಿಸಿದ ಭಾರತ ಸರ್ಕಾರಕ್ಕೆ ಧನ್ಯವಾದ ಎಂದರು. ಅವರ ಪತ್ನಿ ಕಾಶ್ಮೀರದವರು. ಆರು ತಿಂಗಳ ಹಿಂದಷ್ಟೇ ಕೆಲಸ ಹುಡುಕಿಕೊಂಡು ಹೋಗಿದ್ದ ಯುವ ಆಭರಣ ಉದ್ಯಮಿ ಮಾಣಿಕ್ ಮಂಡಲ್, 'ನಾವಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದೆವು. ಸರ್ಕಾರ ನಮ್ಮನ್ನು ರಕ್ಷಿಸಿತು' ಎಂದು ನಗೆಬೀರಿದರು.

ತಾಲಿಬಾನ್ ವಿರುದ್ಧ ಮತ್ತು ಅಫ್ಗಾನಿಸ್ತಾನದಲ್ಲಿನ ಜನರಿಗೆ ಬೆಂಬಲ ಸೂಚಿಸುವ ಸಲುವಾಗಿ ಪ್ಯಾರಿಸ್‌ನ ರಿಪಬ್ಲಿಕ್ ಸ್ಕ್ವೇರ್‌ನಲ್ಲಿ ಜನರು ರ್‍ಯಾಲಿ ನಡೆಸಿದರು –ರಾಯಿಟರ್ಸ್ ಚಿತ್ರ

ಮರಳಿದವರಿಗೆ ಪೋಲಿಯೊ ಲಸಿಕೆ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದಿಂದ ಭಾರತಕ್ಕೆ ಮರಳಿದವರಿಗೆ ಉಚಿತವಾಗಿ ಪೋಲಿಯೊ ಲಸಿಕೆ ಹಾಕಲು ಭಾರತ ನಿರ್ಧರಿಸಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಭಾನುವಾರ ಹೇಳಿದ್ದಾರೆ.

ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಫ್ಗನ್‌ನಿಂದ ಮರಳಿರುವವರು ಲಸಿಕೆ ಪಡೆಯುತ್ತಿರುವ ಚಿತ್ರವೊಂದನ್ನು ಸಚಿವರು ಹಂಚಿಕೊಂಡಿದ್ದಾರೆ.

ಇಡೀ ವಿಶ್ವದಲ್ಲಿ ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ಮಾತ್ರ ಪೋಲಿಯೊ ಸಾಂಕ್ರಾಮಿಕ ರೋಗವನ್ನು ಹೊಂದಿವೆ.

'ಪೋಲಿಯೊ ವೈರಾಣುವನ್ನು ತಡೆಗಟ್ಟುವ ಸಲುವಾಗಿ ಅಫ್ಗಾನಿಸ್ತಾನದಿಂದ ಇಲ್ಲಿಗೆ ಮರಳಿದವರಿಗೆ ಉಚಿತವಾಗಿ ಒಪಿವಿ ಮತ್ತು ಎಫ್‌ಐಪಿವಿ ಪೋಲಿಯೊ ಲಸಿಕೆ ಹಾಕಲು ನಾವು ನಿರ್ಧರಿಸಿದ್ದೇವೆ. ಸಾರ್ವಜನಿಕರ ಆರೋಗ್ಯದ ಹಿತಕ್ಕಾಗಿ ದೆಹಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲಸಿಕೆ ನೀಡುತ್ತಿರುವ ಆರೋಗ್ಯ ತಂಡದ ಪ್ರಯತ್ನಗಳಿಗೆ ಅಭಿನಂದನೆಗಳು' ಎಂದು ಮಾಂಡವಿಯಾ ಟ್ವೀಟ್ ಮಾಡಿದ್ದಾರೆ.

ಅಫ್ಗನ್ ವಿದ್ಯಾರ್ಥಿನಿಯರಿಗೆ ಭವಿಷ್ಯದ ಚಿಂತೆ

ದೋಹಾ (ರಾಯಿಟರ್ಸ್): 1996ರಿಂದ 2001ರ ವರೆಗಿನ ತಾಲಿಬಾನ್ ಆಡಳಿತದ ಅನುಭವದ ನೆನಪೇ ಇಲ್ಲದ ಮತ್ತು ಸಂಬಂಧಿಗಳಿಂದ ತಾಲಿಬಾನ್ ಆಡಳಿತದ ಕುರಿತು ಮಾಹಿತಿ ಪಡೆದಿದ್ದ ಯುವತಿಯರು, ತಮ್ಮ ಸಂಬಂಧಿಕರು ಆಗ ಅನುಭವಿಸಿದ್ದಂಥ ಯಾತನೆಗೆ ಈಗ ಒಳಗಾಗಿದ್ದಾರೆ.

ನೂರಾರು ಅಫ್ಗನ್ ವಿದ್ಯಾರ್ಥಿಗಳು ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಗಲ್ಫ್ ರಾಜ್ಯಗಳಿಗೆ ಸ್ಥಳಾಂತರಗೊಂಡಿದ್ದಾರೆ. ಅವರಲ್ಲಿ ನಾಲ್ವರು ಯುವತಿಯರು ಸುದ್ದಿಗಾರರ ಜೊತೆ ತಮ್ಮ ಅನುಭವದ ಹಂಚಿಕೊಂಡರು.

ತಮ್ಮ ಗುರುತು ಬಿಟ್ಟುಕೊಟ್ಟರೆ ಅಫ್ಗಾನಿಸ್ತಾನದಲ್ಲಿ ಇರುವ ತಮ್ಮ ಕುಟುಂಬ ಸದಸ್ಯರಿಗೆ ಭದ್ರತಾ ಸಮಸ್ಯೆ ಆಗುತ್ತದೆ ಎಂದು ಹೇಳಿದ ವಿದ್ಯಾರ್ಥಿನಿಯೊಬ್ಬರು 'ನಾವು ಪುನಃ ಕತ್ತಲಿನ ಕಡೆಗೆ ಸಾಗುತ್ತಿದ್ದೇವೆ' ಎಂದರು. 'ತಾಲಿಬಾನ್ ಆಡಳಿತದ ಕಥೆಗಳನ್ನು ಚಿಕ್ಕಂದಿನಿಂದಲೂ ನಾವು ನಮ್ಮ ಹಿರಿಯರಿಂದ ಕೇಳುತ್ತಿದ್ದೆವು. ಆದರೆ ಈಗ ಆ ದುಃಸ್ವಪ್ನ ನಿಜವಾಗಿದೆ' ಎಂದು ಮತ್ತೊಬ್ಬ ಯುವತಿ ಹೇಳಿದರು.

'ತಾಲಿಬಾನ್ ಆಡಳಿತ ಎಷ್ಟು ಕ್ರೂರವಾಗಿತ್ತು ಎಂಬುದು ಎಲ್ಲರಿಗೂ ತಿಳಿದೇ ಇದೆ. ಹಿಂದಿನ ಸಲ ಅವರು ಅಧಿಕಾರ ಕಬಳಿಸಿದಾಗ ಉಗ್ರ ಸುನ್ನಿ ಇಸ್ಲಾಮ್ ಸಂಪ್ರದಾಯಗಳನ್ನು ಪ್ರಜೆಗಳ ಮೇಲೆ ಹೇರಿದ್ದರು. ಅದರಂತೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯುವ ಮತ್ತು ಉದ್ಯೋಗ ಮಾಡುವ ಹಕ್ಕನ್ನು ನಿರಾಕರಿಸಲಾಗಿತ್ತು. ಈ ಬಾರಿ ಅವರು ಮಹಿಳೆಯರ ಹಕ್ಕನ್ನು ಕಸಿಯುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಈ ಕುರಿತು ಯಾರಿಗೂ ನಂಬಿಕೆ ಇಲ್ಲ. ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವುದಾಗಿ ಹೇಳಿದ್ದಾರೆ. ಆದರೆ ಸಾಕಷ್ಟು ಮಹಿಳಾ ಶಿಕ್ಷಕರು ಅಲ್ಲಿ ಇದ್ದಾರೆ ಎಂದು ಅನಿಸುವುದಿಲ್ಲ' ಎಂದರು.

'ದಿನದಿಂದ ದಿನಕ್ಕೆ ಅಫ್ಗಾನಿಸ್ತಾನದ ಪರಿಸ್ಥಿತಿ ಹದಗೆಡುತ್ತಿದೆ. ತಾಲಿಬಾನ್‌ನ ಮೌಲ್ಯಗಳು ನಮಗೆ ಹಿಡಿಸುವುದಿಲ್ಲ. ಹಾಗಾಗಿ ಆ ದೇಶ ನನಗೆ ನನ್ನ ದೇಶ ಎಂದು ಅನಿಸುತ್ತಿಲ್ಲ. ದೇಶವನ್ನು ಕಟ್ಟಲು 20 ವರ್ಷಗಳು ಹಿಡಿದವು ಆದರೆ ಈಗ ಎಲ್ಲವೂ ನೆಲಸಮವಾಗಿದೆ' ಎಂದು ಮತ್ತೊಬ್ಬ ಯುವತಿ ಹೇಳಿದರು.

1993ರಲ್ಲಿ ರೈಲುಗಳಲ್ಲಿ ಸರಣಿ ಬಾಂಬ್ ಸ್ಫೋಟ ಪ್ರಕರಣ

ದೋಷಾರೋಪ ಹೊರಿಸಲು ವಿಳಂಬ: ವರದಿಗೆ 'ಸುಪ್ರೀಂ' ಸೂಚನೆ

ಪ್ರಜಾವಾಣಿ ವಾರ್ತೆ



ನವದೆಹಲಿ: 1993ರಲ್ಲಿ ರೈಲುಗಳಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿತ ಆರೋಪಿ ವಿರುದ್ಧ 10 ವರ್ಷಗಳು ಕಳೆದರೂ ದೋಷಾರೋಪ ಹೊರಿಸದಿರುವ ಕುರಿತು ಎರಡು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ರಾಜಸ್ಥಾನದ ಅಜ್ಮೇರ್‌ನ ಟಾಡಾ ಕೋರ್ಟ್‌ಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ಈ ಪ್ರಕರಣದ ಆರೋಪಿ, ಲಖನೌ ನಿವಾಸಿ ಹಮೀದುದ್ದೀನ್ ಪರ ವಕೀಲರಾದ ಶೋಯೆಬ್ ಆಲಮ್ ಹಾಗೂ ಫಾರೂಕ್ ರಶೀದ್ ಅವರು ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಎಂ.ಆರ್.ಶಾ ಅವರಿರುವ ನ್ಯಾಯಪೀಠ ಅರ್ಜಿಯ ವಿಚಾರಣೆ ನಡೆಸಿತು.

'ಅರ್ಜಿದಾರನನ್ನು 2010ರ ಮಾರ್ಚ್ 18ರಿಂದ ಜೈಲಿನಲ್ಲಿರಿಸಲಾಗಿದೆ. ಅವರ ವಿರುದ್ಧ ವಿಚಾರಣೆಯನ್ನೂ ಆರಂಭಿಸಿಲ್ಲ. ಸಂವಿಧಾನದ 21ನೇ ವಿಧಿ ಹೇಳುವಂತೆ ತ್ವರಿತ ವಿಚಾರಣೆ ಮೂಲಭೂತ ಹಕ್ಕು. ಪ್ರತಿಯೊಬ್ಬ ಪ್ರಜೆಗೆ ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಜೀವಿಸುವ ಹಕ್ಕನ್ನು ಸಹ ಈ ವಿಧಿ ಸೂಚ್ಯವಾಗಿ ಖಾತರಿಪಡಿಸುತ್ತದೆ' ಎಂದು ಹಮೀದುದ್ದೀನ್ ಪರ ವಕೀಲರು ಅರ್ಜಿಯಲ್ಲಿ ವಿವರಿಸಿದ್ದಾರೆ.

ಹಮೀದುದ್ದೀನ್ ಅವರನ್ನು ಖುಲಾಸೆಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಟಾಡಾ ವಿಶೇಷ ನ್ಯಾಯಾಲಯ ತಿರಸ್ಕರಿಸಿ 2019ರ ಮಾರ್ಚ್ 27ರಂದು ಆದೇಶಿಸಿತ್ತು. ಈ ಆದೇಶವನ್ನು ಸಹ ಅವರು ಪ್ರಶ್ನಿಸಿದ್ದಾರೆ.

'ಪ್ರಾಥಮಿಕ ತನಿಖೆ ನಂತರ, ಪ್ರಕರಣವನ್ನು 1994ರ ಜನವರಿ 4ರಂದು ಸಿಬಿಐಗೆ ಹಸ್ತಾಂತರಿಸಲಾಯಿತು' ಎಂದು ರಾಜಸ್ಥಾನ ಸರ್ಕಾರ ಪರ ವಕೀಲರು ವಿಚಾರಣೆ ವೇಳೆ ನ್ಯಾಯಪೀಠಕ್ಕೆ ತಿಳಿಸಿದರು.

ಟಾಡಾ ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆ ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಸಿಬಿಐ, ಆರೋಪಿ ವಿರುದ್ಧ 1994ರ ಆಗಸ್ಟ್ 25ರಂದು ಚಾರ್ಜ್‌ಶೀಟ್ ಸಲ್ಲಿಸಿತ್ತು. ನಂತರ, ಆರೋಪಿಯು 15 ವರ್ಷಗಳ ಕಾಲ ತಲೆ ಮರೆಸಿಕೊಂಡಿದ್ದ. ಉತ್ತರ ಪ್ರದೇಶ ಪೊಲೀಸ್ ಇಲಾಖೆಯ ವಿಶೇಷ ಕಾರ್ಯ ಪಡೆ ಅಧಿಕಾರಿಗಳು ಆರೋಪಿಯನ್ನು 2010ರಲ್ಲಿ ಲಖನೌನಲ್ಲಿ ಬಂಧಿಸಿದ್ದರು.

ಬಾಬರಿ ಮಸೀದಿ ಧ್ವಂಸಗೊಳಿಸಿದ ಘಟನೆಗೆ ಒಂದು ವರ್ಷ ಸಂದ ಸಂದರ್ಭದಲ್ಲಿ, 1993ರ ಡಿಸೆಂಬರ್ 5 ರ ತಡ ರಾತ್ರಿ ರಾಜಧಾನಿ ಎಕ್ಸ್‌ಪ್ರೆಸ್, ಫ್ಲೈಯಿಂಗ್ ಕ್ವೀನ್ ಎಕ್ಸ್‌ಪ್ರೆಸ್ ಹಾಗೂ ಎಪಿ ಎಕ್ಸ್‌ಪ್ರೆಸ್‌ನಲ್ಲಿ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ್ದವು. ಘಟನೆಯಲ್ಲಿ ಇಬ್ಬರು ಮೃತಪಟ್ಟು, 22 ಜನರು ಗಾಯಗೊಂಡಿದ್ದರು. ಜಿಆರ್‌ಪಿ ಕೋಟಾ, ವಲ್ಸಾಡ್, ಕಾನ್ಪುರ, ಅಲಹಾಬಾದ್, ಮಲ್ಕಾಜ್‌ಗಿರಿ ಕೋರ್ಟ್‌ಗಳಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಸಿಬಿಐ ತನಿಖೆಯನ್ನು ಕೈಗೆತ್ತಿಕೊಂಡ ಹಿನ್ನೆಲೆಯಲ್ಲಿ ಈ ಎಲ್ಲ ಪ್ರಕರಣಗಳನ್ನು ಒಟ್ಟುಗೂಡಿಸಿ, ಸಿಬಿಐಗೆ ಹಸ್ತಾಂತರಿಸಲಾಯಿತು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹುರಿಯತ್ ಕಾನ್ಫರೆನ್ಸ್‌ನ ಎರಡೂ ಬಣಗಳ ನಿಷೇಧ ಸಾಧ್ಯತೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಪ್ರತ್ಯೇಕತಾವಾದಿಗಳ ಸಂಘಟನೆಯಾದ ಹುರಿಯತ್ ಕಾನ್ಫರೆನ್ಸ್‌ನ ಎರಡೂ ಬಣಗಳನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ನಿಷೇಧಿಸುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಘಟನೆಯ ಈ ಎರಡೂ ಬಣಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ಎರಡು ದಶಕಗಳಿಂದ ಪ್ರತ್ಯೇಕತಾ ಚಳವಳಿಯನ್ನು ನಡೆಸುತ್ತಿವೆ.

ಪಾಕಿಸ್ತಾನದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿನ ಸೀಟುಗಳನ್ನು ಕಾಶ್ಮೀರದ ವಿದ್ಯಾರ್ಥಿಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಹುರಿಯತ್ ಕಾನ್ಫರೆನ್ಸ್‌ನ ಭಾಗವಾಗಿದ್ದ ಕೆಲವು ಸಂಘಟನೆಗಳು ಈ ಹಣವನ್ನು ಸಂಗ್ರಹಿಸುತ್ತಿದ್ದವಲ್ಲದೇ, ಆ ಹಣವನ್ನು ಉಗ್ರ ಸಂಘಟನೆಗಳಿಗೆ ನೀಡುತ್ತಿದ್ದವು ಎಂಬುದು ಇತ್ತೀಚೆಗೆ ಎನ್‌ಐಎ ನಡೆಸಿದ ತನಿಖೆಯಿಂದ ಗೊತ್ತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಭದ್ರತಾ ಪಡೆಗಳ ಮೇಲೆ ಕಲ್ಲುಗಳನ್ನು ಎಸೆಯಲು, ಶಾಲೆಗಳನ್ನು ಸುಡಲು, ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯನ್ನುಂಟು ಮಾಡಲು ಹಾಗೂ ಭಾರತದ ವಿರುದ್ಧ ಯುದ್ಧ ಹೂಡಲು ಈ ಹಣವನ್ನು ಬಳಸಲಾಗುತ್ತಿತ್ತು' ಎಂದಿದ್ದಾರೆ.

ಪರಿಶಿಷ್ಟ ಜಾತಿ ಯುವತಿ ಮೇಲೆ ಅತ್ಯಾಚಾರ

ಶಾಹಜಹಂಪುರ(ಪಿಟಿಐ): ಜಿಲ್ಲೆಯ ಗ್ರಾಮವೊಂದರಲ್ಲಿ 18 ವರ್ಷದ ಪರಿಶಿಷ್ಟ ಜಾತಿಯ ಯುವತಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಯುವತಿಯು ಜಾನುವಾರುಗಳನ್ನು ಮೇಯಿಸಲು ತೆರಳಿದ್ದಾಗ ಈತ ಕೃತ್ಯವೆಸಗಿದ್ದಾನೆ. ಆರೋಪಿಯು ಯುವತಿಯ ಗ್ರಾಮಕ್ಕೆ ಸೇರಿದವನು ಎಂದು ತಿಲ್ಹಾರ್ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಸಂಜಯ್ ಕುಮಾರ್ ತಿಳಿಸಿದ್ದಾರೆ. ಈ ಸಂಬಂಧ ಪೊಲೀಸರು ಭಾನುವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಯುವತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿರಾಡಿ ಘಾಟಿ ಸಂಚಾರಕ್ಕೆ ಮುಕ್ತ

ಮಂಗಳೂರು: ಶಿರಾಡಿ ಘಾಟಿಯಲ್ಲಿ 20 ಟನ್‌ಗೂ ಹೆಚ್ಚು ಭಾರದ ವಾಹನಗಳೂ ಸೇರಿದಂತೆ ಎಲ್ಲಾ ರೀತಿಯ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ ಹಾಸನ ಜಿಲ್ಲಾಧಿಕಾರಿ ಆರ್. ಗಿರೀಶ್ ಆದೇಶ ಹೊರಡಿಸಿದ್ದಾರೆ. ಭಾನುವಾರದಿಂದ ಪ್ರತಿನಿತ್ಯ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಸಿಂಗಲ್ ಲೇನ್‌ನಲ್ಲಿ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶೇ 1.55ರಷ್ಟು ಕಡಿಮೆ ಪ್ರದೇಶದಲ್ಲಿ ಬಿತ್ತನೆ

ನವದೆಹಲಿ (ಪಿಟಿಐ): ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಶೇ 1.55ರಷ್ಟು ಕಡಿಮೆ ಪ್ರದೇಶದಲ್ಲಿ ಬಿತ್ತನೆಯಾಗಿದೆ ಎಂದು ಕೃಷಿ ಸಚಿವಾಲಯ ಭಾನುವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ.

ಬಿತ್ತನೆ ಕಾರ್ಯ ಆಗಸ್ಟ್ ಅಂತ್ಯದ ವರೆಗೂ ನಡೆಯಲಿದೆ. ಕೆಲವು ರಾಜ್ಯಗಳಲ್ಲಿ ಸೆಪ್ಟೆಂಬರ್ ವರೆಗೂ ಬಿತ್ತನೆ ಮುಂದುವರಿಯಲಿದೆ.

ಕರ್ತಾರಪುರ ಯಾತ್ರೆಗೆ ಪಾಕ್ ಅವಕಾಶ

ಸಾಂದರ್ಭಿಕ ಚಿತ್ರ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಕೋವಿಡ್‌ನ ನಾಲ್ಕನೇ ಅಲೆಯನ್ನು ನಿಯಂತ್ರಿಸಲು ತೀವ್ರ ಪ್ರಯತ್ನ ನಡೆದಿರುವಂತೆಯೇ, ಕರ್ತಾರ್‌ಪುರದ ಗುರುದ್ವಾರ ದರ್ಬಾರ್ ಸಾಹೀಬ್‌ಗೆ ಭೇಟಿ ನೀಡುವುದಕ್ಕೆ ಸಿಖ್ ಯಾತ್ರಿಕರಿಗೆ ಅವಕಾಶ ನೀಡಲಾಗಿದೆ.

ಶನಿವಾರ ಇಲ್ಲಿ ನಡೆದ ನ್ಯಾಷನಲ್ ಕಮಾಂಡ್ ಆ್ಯಂಡ್ ಆಪರೇಷನ್ ಸೆಂಟರ್‌ನ (ಎನ್‌ಸಿಒಸಿ) ಸಭೆಯಲ್ಲಿ ಕರ್ತಾರಪುರ ಮಂದಿರವನ್ನು ಮುಂದಿನ ತಿಂಗಳು ಯಾತ್ರಿಕರಿಗೆ ಮುಕ್ತಗೊಳಿಸುವ ನಿರ್ಧಾರಕ್ಕೆ ಬರಲಾಯಿತು ಎಂದು 'ಡಾನ್' ಪತ್ರಿಕೆ ವರದಿಮಾಡಿದೆ.

ರಷ್ಯಾ: ರಾಕೆಟ್‌ನಿಂದ ವನ್‌ವೆಬ್‌ನ 34 ಉಪಗ್ರಹಗಳು ನಭಕ್ಕೆ

ಮಾಸ್ಕೊ (ಎಎಫ್‌ಪಿ): ಬ್ರಾಡ್‌ಬ್ಯಾಂಡ್ ಸೇವೆ ನೀಡುತ್ತಿರುವ ಬ್ರಿಟನ್‌ನ ವನ್‌ವೆಬ್ ಸಂಸ್ಥೆಯ 34 ಉಪಗ್ರಹಗಳನ್ನು ರಷ್ಯಾದ ಸೂಯೆಜ್ ರಾಕೆಟ್ ಶನಿವಾರ ರಾತ್ರಿ ಯಶಸ್ವಿಯಾಗಿ ನಭಕ್ಕೆ ಸೇರಿಸಿದೆ.

ಕಜಕಿಸ್ತಾನದ ಬೈಕನೋರ್ ಉಡಾವಣಾ ಕೇಂದ್ರದಿಂದ ಈ ಉಡಾವಣೆ ನಡೆಯಿತು. ಈ ವರ್ಷ ವನ್‌ವೆಬ್ ಉಪಗ್ರಹಗಳ 5ನೇ ಉಡಾವಣೆ ಇದಾಗಿದ್ದು, ಜುಲೈ 1ರಂದು ಈ ಹಿಂದಿನ ಉಡಾವಣೆ ನಡೆದಿತ್ತು. ಈ ಮೂಲಕ ವನ್‌ವೆಬ್‌ನ 288 ಉಪಗ್ರಹಗಳು ಇದೀಗ ಅಂತರಿಕ್ಷದಲ್ಲಿ ಸುತ್ತುವಂತಾಗಿದ್ದು, ಜಗತ್ತಿನ ಮೂಲೆ ಮೂಲೆಗೆ ಬ್ರಾಡ್‌ಬ್ಯಾಂಡ್ ಸೇವೆ ನೀಡುತ್ತಿವೆ.

ಭಾರತದ 60 ಮೀನುಗಾರಿಕೆ ದೋಣಿಗಳು ಹಾನಿ

ರಾಮೇಶ್ವರ (ತಮಿಳುನಾಡು) (ಪಿಟಿಐ): ಶ್ರೀಲಂಕಾ ನೌಕಾಪಡೆಯ ಸಿಬ್ಬಂದಿ ಶನಿವಾರ ತಡರಾತ್ರಿ ನಡೆಸಿದ ಕಲ್ಲು ತೂರಾಟದಿಂದ ಭಾರತೀಯ ಮೀನುಗಾರಿಕೆಯ ಸುಮಾರು 60 ದೋಣಿಗಳು ಹಾನಿಗೀಡಾಗಿವೆ ಎಂದು ಮೀನುಗಾರಿಕೆ ಇಲಾಖೆಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಪಾಕಿಸ್ತಾನದ ಸೇನಾಧಿಕಾರಿ ಹತ್ಯೆ

ಇಸ್ಲಾಮಾಬಾದ್(ಪಿಟಿಐ): ಬಲೂಚಿಸ್ತಾನ ಪ್ರಾಂತ್ಯದ ಗಿಚಿಕ್ ಪ್ರದೇಶದಲ್ಲಿ ಭಾನುವಾರು ಉಗ್ರರು ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ ಸೇನಾಧಿಕಾರಿಯೊಬ್ಬರನ್ನು ಹತ್ಯೆ ಮಾಡಲಾಗಿದೆ. ದಾಳಿಯಲ್ಲಿ ಇಬ್ಬರು ಯೋಧರು ಗಾಯಗೊಂಡಿದ್ದಾರೆ.

ಕ್ಯಾಪ್ಟನ್ ಕಷೀಫ್ ಹತ್ಯೆಯಾದವರು. ಇವರು ತೆರಳುತ್ತಿದ್ದ ವಾಹನದ ಮೇಲೆ ಸುಧಾರಿತ ಸ್ಫೋಟಕಗಳನ್ನು ಎಸೆದು ಹತ್ಯೆ ಮಾಡಲಾಗಿದೆ ಎಂದು ಸೇನೆ ತಿಳಿಸಿದೆ.

ಕೆ– ಟಿಇಟಿ: ಶೇ 92 ಹಾಜರಿ

ಬೆಂಗಳೂರು: ಸರ್ಕಾರಿ ಶಾಲಾ ಶಿಕ್ಷಕರ ಹುದ್ದೆಯ ಅರ್ಹತೆಗಾಗಿ ಭಾನುವಾರ ನಡೆದ ಕರ್ನಾಟಕ-ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಕೆ-ಟಿಇಟಿ)ಶೇ 92ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದಾರೆ. ಪತ್ರಿಕೆ–1ಕ್ಕೆ (ಒಂದರಿಂದ 5ನೇ ತರಗತಿಗೆ ಬೋಧಿಸುವ ಶಿಕ್ಷಕರಿಗಾಗಿ) 1,02,281 ಅಭ್ಯರ್ಥಿಗಳು ನೋಂದಾಯಿಸಿದ್ದು, 93,151 (ಶೇ 91) ಹಾಗೂ ಪತ್ರಿಕೆ– 2ಕ್ಕೆ (6–8ನೇ ತರಗತಿಗೆ ಬೋಧಿಸುವ ಶಿಕ್ಷಕರಿಗಾಗಿ) 1,49,551 ಅಭ್ಯರ್ಥಿಗಳ ಪೈಕಿ 1,38,455 (ಶೇ 93) ಮಂದಿ ಹಾಜರಾಗಿದ್ದಾರೆ.

20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್: ಭಾರತಕ್ಕೆ ಮೂರನೇ ಪದಕ

ಶೈಲಿಗೆ ಲಾಂಗ್ ಜಂಪ್ ಬೆಳ್ಳಿ

ನೈರೋಬಿ, ಕೆನ್ಯಾ (ಪಿಟಿಐ): ಭಾರತದ ಶೈಲಿ ಸಿಂಗ್ ಅವರಿಗೆ ಭಾನುವಾರ ನಡೆದ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಕೂಟದ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಒಂದು ಸೆಂಟಿಮೀಟರ್ ಅಂತರದಲ್ಲಿ ಚಿನ್ನದ ಪದಕ ಕೈತಪ್ಪಿತು. ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು.

17 ವರ್ಷದ ಶೈಲಿ 6.59 ಮೀಟರ್ಸ್ ದೂರ ಜಿಗಿದರು. ಯುರೋಪಿಯನ್ ಜೂನಿಯರ್ ಚಾಂಪಿಯನ್ ಆಗಿರುವ ಸ್ವೀಡನ್‌ನ ಮಾಜಾ ಆಸ್ಕಾಗ್ (6.60 ಮೀಟರ್) ಚಿನ್ನ ಗೆದ್ದರು. ಉಕ್ರೇನ್‌ನ ಮರಿಯಾ ಹಾರಿಲೊವಾ (6.50ಮೀ) ಕಂಚಿನ ಪದಕ ಪಡೆದರು.

ಅಂಜು ಬಾಬಿ ಜಾರ್ಜ್ ಅವರ ಮಾರ್ಗದರ್ಶನ ಪಡೆಯುತ್ತಿರುವ ಶೈಲಿ ಸಿಂಗ್ ಮೊದಲ ಜಿಗಿತದಲ್ಲಿ 6.34 ಮೀಟರ್ಸ್ ಸಾಧನೆ ಮಾಡಿದರು. ಎರಡನೇ ಸುತ್ತಿನಲ್ಲಿ ಅದೇ ಅಂತರ ಕಾಪಾಡಿಕೊಂಡರು. ಮೂರನೇ ಸುತ್ತಿನಲ್ಲಿ 6.59 ಮೀ ಜಿಗಿದರು. ನಂತರದ ಎರಡು ಪ್ರಯತ್ನಗಳು ಫೌಲ್ ಆದವು.

ನಾಲ್ಕನೇ ಸುತ್ತಿನಲ್ಲಿ 18 ವರ್ಷದ ಮಾಜಾ ಚಿನ್ನದ ಜಿಗಿತ ಸಾಧಿಸಿದರು. ಭಾರತ ಕೂಟದಲ್ಲಿ ಒಟ್ಟು ಮೂರು ಪದಕಗಳನ್ನು ಜಯಿಸಿದ ದಾಖಲೆ ಮಾಡಿದೆ. ಈ ಕೂಟದ ಇತಿಹಾಸದಲ್ಲಿ ಭಾರತದ ಶ್ರೇಷ್ಠ ಸಾಧನೆ ಇದಾಗಿದೆ.

4X400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಕಂಚು ಮತ್ತು ಪುರುಷರ 10 ಕಿ.ಮೀ ನಡಿಗೆಯಲ್ಲಿ ಅಮಿತ್ ಖತ್ರಿ ಬೆಳ್ಳಿ ಪದಕ ಜಯಿಸಿದ್ದಾರೆ.

2016ರಲ್ಲಿ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಮತ್ತು 2018ರಲ್ಲಿ ಓಟದಲ್ಲಿ ಹಿಮಾ ದಾಸ್ ಚಿನ್ನದ ಪದಕ ಜಯಿಸಿದ್ದರು.

ಶೈಲಿ ಸಿಂಗ್ –ಸಾಯ್ ಟ್ವಿಟರ್ ಚಿತ್ರ

ಅಮ್ಮನ ಶ್ರಮ; ಬೆಂಗಳೂರಿನಲ್ಲಿ ತರಬೇತಿ

ಉತ್ತರಪ್ರದೇಶದ ಝಾನ್ಸಿಯಲ್ಲಿ ಜನಿಸಿದ ಶೈಲಿಗೆ ಅವರ ತಾಯಿಯೇ ಆಸರೆ. ಟೇಲರಿಂಗ್ ಕೆಲಸ ಮಾಡುತ್ತಿದ್ದ ತಾಯಿ, ಮಗಳ ಕ್ರೀಡೆ ಮತ್ತು ವಿದ್ಯಾಭ್ಯಾಸಕ್ಕಾಗಿ ನೆರವಾಗಿದ್ದಾರೆ. ಅವರ ಪ್ರತಿಭೆ ಗುರುತಿಸಿದ ಹಿರಿಯ ಅಥ್ಲೀಟ್ ಅಂಜು ಅವರ ಪತಿ, ಕೋಚ್ ಬಾಬಿ ಜಾರ್ಜ್ ಬೆಂಗಳೂರಿನಲ್ಲಿರುವ ತಮ್ಮ ಅಕಾಡೆಮಿಗೆ ಸೇರಿಸಿ ಮಾರ್ಗದರ್ಶನ ನೀಡಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಶೈಲಿ ಪ್ರಶಸ್ತಿ ಗೆದ್ದಿದ್ದರು. ಹೋದ ಜೂನ್‌ನಲ್ಲಿ ನಡೆದಿದ್ದ ಅಂತರರಾಜ್ಯ ಕೂಟದಲ್ಲಿ 6.48 ಮೀಟರ್ಸ್ ಜಿಗಿದು ಗಮನ ಸೆಳೆದಿದ್ದರು. ಸದ್ಯ 18 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ರ‍್ಯಾಂಕಿಂಗ್‌ನಲ್ಲಿ ಅವರು ಎರಡನೇ ಸ್ಥಾನದಲ್ಲಿದ್ದಾರೆ.

ವಿರಾಟ್ ಕೊಹ್ಲಿ –ರಾಯಿಟರ್ಸ್ ಚಿತ್ರ

ಭಾರತ ತಂಡದ ಅಭ್ಯಾಸ ಆರಂಭ

ಲೀಡ್ಸ್ (ಪಿಟಿಐ): ಆತಿಥೇಯ ಇಂಗ್ಲೆಂಡ್ ಎದುರಿನ ಮೂರನೇ ಟೆಸ್ಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ಕ್ರಿಕೆಟ್ ತಂಡ ಹೆಡಿಂಗ್ಲಿಯಲ್ಲಿ ಭಾನುವಾರ ಅಭ್ಯಾಸ ಆರಂಭಿಸಿತು. ಪ್ರಮುಖ ಆಟಗಾರರೆಲ್ಲರೂ ನೆಟ್ಸ್‌ನಲ್ಲಿ ಬೆವರು ಸುರಿಸಿದರು.

ಐದು ಪಂದ್ಯಗಳ ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ಡ್ರಾದಲ್ಲಿ ಮುಕ್ತಾಯಗೊಂಡಿತ್ತು. ಎರಡನೇ ಪಂದ್ಯದಲ್ಲಿ ಅಮೋಘ ಆಟವಾಡಿದ ಭಾರತ 151 ರನ್‌ಗಳ ಭಾರಿ ಜಯ ಗಳಿಸಿತ್ತು. ಇಲ್ಲಿಗೆ ತಲುಪಿದ ಕೂಡಲೇ ತಂಡ ಅಭ್ಯಾಸದತ್ತ ಗಮನಹರಿಸಿದೆ.

ನಾಯಕ ವಿರಾಟ್ ಕೊಹ್ಲಿ, ಉಪ ನಾಯಕ ಅಜಿಂಕ್ಯ ರಹಾನೆ, ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ, ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಸ್ಪಿನ್ ಜೋಡಿ ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ, ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಮತ್ತಿತರರು ಅಭ್ಯಾಸ ಕಣದಲ್ಲಿ ಕಾಣಿಸಿಕೊಂಡರು.

ಹೆಡಿಂಗ್ಲಿಯಲ್ಲಿ ಭಾರತ ತಂಡ ಕೊನೆಯದಾಗಿ 2002ರಲ್ಲಿ ಟೆಸ್ಟ್ ಪಂದ್ಯ ಆಡಿತ್ತು. ಹೀಗಾಗಿ ಈಗ ತಂಡದಲ್ಲಿರುವವರಿಗೆ ಇಲ್ಲಿ ಇದು ಮೊದಲ ಪಂದ್ಯ ಆಗಲಿದೆ. ಮೂರನೇ ಟೆಸ್ಟ್ 25ರಿಂದ ನಡೆಯಲಿದೆ.

ಎನ್‌ಸಿಎಯಲ್ಲಿ ವಿಶೇಷ ‘ಪಾಠ’

ನವದೆಹಲಿ (ಪಿಟಿಐ): ಆಯ್ಕೆ ಪ್ರಕ್ರಿಯೆ ಸೇರಿದಂತೆ ವಿವಿಧ ಹಂತಗಳಲ್ಲಿ ಎದುರಾಗುವ ಒತ್ತಡವನ್ನು ಸಮರ್ಪಕವಾಗಿ ನಿಭಾಯಿಸುವ ‘ಕಲೆ’ಯನ್ನು ಹೇಳಿಕೊಡುವ ಮೂಲಕ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಈಗ ಕಾರ್ಪೊರೇಟ್ ಮಟ್ಟದ ತರಬೇತಿ ನೀಡುವ ಹಂತಕ್ಕೆ ಬೆಳೆದಿದೆ.

ಎನ್‌ಸಿಎಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಆಯೋಜಿಸಿದ್ದ ಲೆವೆಲ್–2 ಕೋಚಿಂಗ್ ತರಬೇತಿಯಲ್ಲಿ ಹೆಸರಾಂತ ಪ್ರಥಮ ದರ್ಜೆ ಕ್ರಿಕೆಟಿಗರು ಪಾಲ್ಗೊಂಡಿದ್ದರು.

ಇದರಲ್ಲಿ ಮೊದಲ ಬಾರಿ ‘ಕಾರ್ಪೊರೇಟ್ ಸಮಸ್ಯೆ ಪರಿಹಾರ ತರಗತಿ’ಯ ಪ್ರಯೋಗ ಮಾಡಲಾಗಿದೆ.

ತರಬೇತಿ ಸಂದರ್ಭ ಹೊರತುಪಡಿಸಿ ಕ್ರೀಡಾಂಗಣದ ಆಚೆ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಆಟಗಾರರಿಗೆ ತಿಳಿಸಿದ್ದು ಮುಂದಿನ ತರಬೇತಿ ಕಾರ್ಯಕ್ರಮದಲ್ಲಿ ಇದು ಮುಂದುವರಿಯಲಿದೆ.

ಮುಂಬೈ ತಂಡದ ಮಾಜಿ ವೇಗದ ಬೌಲರ್ ಕ್ಷೇಮಲ್ ವೈಂಗಣಕರ್ ತರಬೇತಿ ಕಾರ್ಯಕ್ರಮ ನಡೆಸಿಕೊಟ್ಟಿದ್ದರು.

ತರಬೇತಿಯಲ್ಲಿ ಪಾಲ್ಗೊಂಡ ಇಬ್ಬರು ಆಟಗಾರರ ಮುಂದೆ ಸಮಸ್ಯೆಯೊಂದನ್ನು ಇರಿಸಿ ಪರಿಹಾರ ಕಂಡುಕೊಳ್ಳುವುದು ಹೇಗೆ ಎಂಬುದರ ಪ್ರಾತ್ಯಕ್ಷಿಕೆ ನಡೆಯಿತು. ಅತ್ಯಂತ ಸುಲಭವಾಗಿ ಸಮಸ್ಯೆಯನ್ನು ಎದುರಿಸುವುದು ಹೇಗೆ ಮತ್ತು ಯಾರಿಗೂ ಬೇಸರವಾಗದಂತೆ ಪರಿಹಾರ ಕಂಡುಕೊಳ್ಳುವುದು ಹೇಗೆ ಎಂಬುದನ್ನು ತಿಳಿಸಲಾಯಿತು.

ಲೆವೆಲ್–2 ಕೋಚಿಂಗ್ ತರಬೇತಿಯಲ್ಲಿ ಪಾಲ್ಗೊಂಡ ಆಟಗಾರರೆಲ್ಲ ತಮ್ಮ ಊರಿಗೆ ಮರಳಿದ್ದು ಮುಂದಿನ ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಎಲ್ಲರಿಗೂ ಸವಾಲನ್ನು ನೀಡಲಾಗಿದೆ. ಕನಿಷ್ಠ ಒಬ್ಬ ಆಟಗಾರನ ಜೊತೆ ಬೆರೆತು ಯೋಜನಾ ವರದಿ ಸಿದ್ಧಪಡಿಸಲು ಸೂಚಿಸಲಾಗಿದೆ.

ಸುದ್ದಿ 2 ನಿಮಿಷ

ಸೈಕ್ಲಿಂಗ್ ಸಂಸ್ಥೆಗೆ ರಾಜು ಅಧ್ಯಕ್ಷ

ಹುಬ್ಬಳ್ಳಿ: ವಿಜಯಪುರದ ರಾಜು ಬಿರಾದಾರ ಅವರು ಕರ್ನಾಟಕ ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಅಧ್ಯಕ್ಷರಾಗಿ ಭಾನುವಾರ ಅವಿರೋಧವಾಗಿ ಆಯ್ಕೆಯಾದರು.

ಎರಡು ದಶಕಕ್ಕೂ ಹೆಚ್ಚು ಕಾಲ ಅಧ್ಯಕ್ಷರಾಗಿದ್ದ ಶ್ರೀಧರ ಗೋರೆ ಅವರ ನಿಧನದಿಂದಾಗಿ ಅಧ್ಯಕ್ಷ ಸ್ಥಾನ ಖಾಲಿಯಾಗಿತ್ತು. ರಾಜು, ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿದ್ದರು.

ಪದಾಧಿಕಾರಿಗಳು: ಜಿ.ವಿ. ಪಾಟೀಲ (ಚೇರ್ಮನ್), ಆರ್. ಎಚ್. ಪೂಜಾರಿ, ಸಿ.ಎಸ್. ಜಗಲಿ, ವೈ.ಎಚ್. ಯಂತೆಟ್ಟು, ಸಿ.ಕೆ. ಚನಾಳ (ಉಪಾಧ್ಯಕ್ಷರು), ಶ್ರೀಶೈಲ ಎಂ. ಕುರಣಿ (ಗೌರವ ಪ್ರಧಾನ ಕಾರ್ಯದರ್ಶಿ), ಎಸ್.ಎನ್. ಪಡತಾರೆ, ಎಂ.ಎಚ್. ಕುರಿಯರ (ಜಂಟಿ ಕಾರ್ಯದರ್ಶಿಗಳು), ರಮೇಶ ಟಿ. ಪಾಟೀಲ (ಖಜಾಂಚಿ), ವಿಠ್ಠಲ ವೈ. ಬೋರ್ಜಿ (ಸಂಘಟನಾ ಕಾರ್ಯದರ್ಶಿ). ಎಲ್.ಎಚ್. ಪೂಜಾರಿ, ಎಂ.ಎ. ಗಫಾರ್, ಶ್ರೀಕಾಂತ ಪೂಜಾರ, ಶಕುಂತಲಾ ಬಿರಾದಾರ (ಕಾರ್ಯಕಾರಿ ಸಮಿತಿ ಸದಸ್ಯರು), ಎಸ್.ಎಫ್. ಕೊಡ್ಲಿ, ಬಿ.ಜಿ. ಮದರಖಂಡಿ, ಎಲ್.ಬಿ. ಮಾಲಿ, ಎಂ.ಐ. ಕನಕೆ (ತಾಂತ್ರಿಕ ಸಮಿತಿ ಸದಸ್ಯರು) ಮತ್ತು ಶ್ರೀಕಾಂತ ಮಠ (ವೆಬ್ ಮೀಡಿಯಾ ಸಲಹೆಗಾರ).

ಪಂಜಾಬ್: ಸರ್ಕಾರಿ ಶಾಲೆಗಳಿಗೆ ಹಾಕಿ ಆಟಗಾರರ ಹೆಸರು

ಚಂಡೀಗಡ (ಪಿಟಿಐ): ಪಂಜಾಬ್‌ನ ಹತ್ತು ಸರ್ಕಾರಿ ಶಾಲೆಗಳನ್ನು ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ಹಾಕಿ ಆಟಗಾರರ ಹೆಸರುಗಳಿಂದ ಕರೆಯಲಾಗುತ್ತದೆ. ಆ ರಾಜ್ಯದ ಶಾಲಾ ಶಿಕ್ಷಣ ಸಚಿವ ವಿಜಯ್ ಇಂದರ್ ಸಿಂಗ್ಲಾ ಭಾನುವಾರ ಈ ವಿಷಯ ತಿಳಿಸಿದ್ದಾರೆ.

ಭಾರತ ಹಾಕಿ ತಂಡವು ನಾಲ್ಕು ದಶಕಗಳ ಬಳಿಕ, ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದು ಇತಿಹಾಸ ಬರೆದಿತ್ತು. ಟೋಕಿಯೊ ಕೂಟದಲ್ಲಿ ಕಂಚಿನ ಪದಕ ಒಲಿದಿತ್ತು. ಪಂಜಾಬ್‌ಅನ್ನು ಪ್ರತಿನಿಧಿಸಿದ ಆಟಗಾರರ ಹೆಸರುಗಳನ್ನು ಶಾಲೆಗಳಿಗೆ ಮರುನಾಮಕರಣ ಮಾಡಲು ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಒಪ್ಪಿಗೆ ಸೂಚಿಸಿದ್ದಾರೆ ಎಂದು ಸಿಂಗ್ಲಾ ತಿಳಿಸಿದ್ದಾರೆ.

ತಂಡದ ನಾಯಕ ಮನ್‌ಪ್ರೀತ್ ಸಿಂಗ್, ಉಪನಾಯಕ ಹರ್ಮನ್‌ಪ್ರೀತ್ ಸಿಂಗ್, ಮನದೀಪ್ ಸಿಂಗ್, ಶಂಷೇರ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಹಾರ್ದಿಕ್ ಸಿಂಗ್, ಗುರ್ಜಂತ್ ಸಿಂಗ್ ಮತ್ತು ಸಿಮ್ರನ್ ಜೀತ್ ಸಿಂಗ್ ಅವರ ಹೆಸರುಗಳನ್ನು ಶಾಲೆಗಳಿಗೆ ಇಡಲಾಗಿದೆ.

ಪ್ಯಾರಾಲಿಂಪಿಕ್ಸ್: ಉದ್ಘಾಟನೆಗೆ ಭಾರತದ ಐವರು ಅಥ್ಲೀಟ್‌ಗಳು

ಟೋಕಿಯೊ (ಪಿಟಿಐ): ಭಾರತದ ಐವರು ಅಥ್ಲೀಟ್‌ಗಳು ಹಾಗೂ ಆರು ಮಂದಿ ಅಧಿಕಾರಿಗಳು ಟೋಕಿಯೊ ಪ್ಯಾರಾಲಿಂಪಿಕ್ಸ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತದ ಚೆಫ್ ಡಿ ಮಿಷನ್ ಗುರುಶರಣ್ ಸಿಂಗ್ ಭಾನುವಾರ ಈ ವಿಷಯ ತಿಳಿಸಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಕ್ರೀಡಾಪಟುಗಳ ಸಂಖ್ಯೆಗೆ ಮಿತಿ ಇಲ್ಲ. ಆದರೆ ಇದುವರೆಗೆ ಭಾರತದ ಏಳು ಮಂದಿ ಪ್ಯಾರಾ ಅಥ್ಲೀಟ್‌ಗಳು ಮಾತ್ರ ಟೋಕಿಯೊ ತಲುಪಿದ್ದಾರೆ.

ಏಳು ಮಂದಿಯಲ್ಲಿ ಟೇಬಲ್ ಟೆನಿಸ್ ಆಟಗಾರ್ತಿಯರಾದ ಸೋನಲ್ ಪಟೇಲ್ ಮತ್ತು ಭವಿನಾ ಪಟೇಲ್ ಇದ್ದಾರೆ. ಬುಧವಾರ ಇವರು ಕೂಟದಲ್ಲಿ ಕಣಕ್ಕಿಳಿಯಲಿದ್ದು, ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿಲ್ಲ. ಇದೇ 24ರಿಂದ ಆರಂಭವಾಗಲಿರುವ ಕ್ರೀಡಾಕೂಟಕ್ಕೆ ಜಪಾನ್ ದೊರೆ ನರುಹಿಟೊ ಚಾಲನೆ ನೀಡಲಿದ್ದಾರೆ.

ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭಕ್ಕೂ ಆರು ಮಂದಿ ಅಧಿಕಾರಿಗಳಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಇಲ್ಲಿಯೂ ಅದೇ ನಿಯಮ ಅನುಸರಿಸಲಾಗುತ್ತಿದೆ.

ಭಾರತದ ಧ್ವಜಧಾರಿ ಮರಿಯಪ್ಪನ್ ತಂಗವೇಲು, ಡಿಸ್ಕಸ್ ಥ್ರೊ ಪಟು ವಿನೋದ್ ಕುಮಾರ್, ಜಾವೆಲಿನ್ ಥ್ರೊ ಪಟು ಟೆಕ್ ಚಂದ್ ಮತ್ತು ಪವರ್‌ಲಿಫ್ಟರ್‌ಗಳಾದ ಜಯದೀಪ್ ಮತ್ತು ಸಕೀನಾ ಖಾತುನ್ ಅವರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಸಮಾರಂಭದಲ್ಲಿ ಭಾಗವಹಿಸುವ ಆರು ಅಧಿಕಾರಿಗಳ ಪೈಕಿ ನಾಲ್ಕು ಮಂದಿಯನ್ನು ಸದ್ಯಕ್ಕೆ ನಿರ್ಧರಿಸಲಾಗಿದೆ. ಚೆಫ್ ಡಿ ಮಿಷನ್, ಡೆಪ್ಯುಟಿ ಚೆಫ್ ಡಿ ಮಿಷನ್ ಅರ್ಹಾನ್ ಬಗತಿ, ಕೋವಿಡ್‌ಗೆ ಸಂಬಂಧಿಸಿದ ಸಂಪರ್ಕ ಅಧಿಕಾರಿ ವಿ.ಕೆ. ದಾಬಸ್ ಮತ್ತು ಮರಿಯಪ್ಪನ್ ಅವರ ಕೋಚ್ ಮತ್ತು ಪ್ಯಾರಾ ಅಥ್ಲೆಟಿಕ್ಸ್ ಮುಖ್ಯಸ್ಥ ಸತ್ಯನಾರಾಯಣ ಪಾಲ್ಗೊಳ್ಳಲಿದ್ದಾರೆ.

ಭಾರತದ ಅಥ್ಲೀಟ್‌ಗಳ ಮೂರನೇ ತಂಡವು ಸೋಮವಾರ ಟೋಕಿಯೊಗೆ ಪ್ರಯಾಣ ಬೆಳೆಸಲಿದೆ. ಆದರೆ ಇವರಲ್ಲಿ ಕೆಲವು ಮಂದಿ ಅಭ್ಯಾಸ ಆರಂಭಿಸುವ ಮೊದಲು ಕ್ವಾರಂಟೈನ್ ಅವಧಿ ಪೂರ್ಣಗೊಳಿಸಬೇಕಿದೆ.

ಕಲಬುರ್ಗಿಯಲ್ಲಿ ನೆಲೆಸಿದ್ದ ಫುಟ್‌ಬಾಲ್ ಆಟಗಾರ

ಒಲಿಂಪಿಯನ್ ಹಕೀಂ ಇನ್ನಿಲ್ಲ

ಕಲಬುರ್ಗಿ: 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದಲ್ಲಿದ್ದ ಫುಟ್‌ಬಾಲ್ ಆಟಗಾರ ಸಯ್ಯದ್ ಶಾಹೀದ್ ಹಕೀಂ (82) ಅವರು ಭಾನುವಾರ ಬೆಳಗಿನ ಜಾವ ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಕೆಲ ತಿಂಗಳ ಹಿಂದಷ್ಟೇ ಅವರು ಕೋವಿಡ್ ಸೋಂಕಿನಿಂದ ಗುಣಮುಖರಾಗಿದ್ದರು. ಡೆಂಗಿ ದೃಢಪಟ್ಟಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಡೆಂಗಿಗೆ ಚಿಕಿತ್ಸೆ ಪಡೆಯುತ್ತಿರುವಾಗಲೇ ಹೃದಯಾಘಾತದಿಂದ ನಿಧನರಾದರು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಭಾನುವಾರ ಸಂಜೆ ಹೈದರಾಬಾದ್‌ನಲ್ಲಿ ಅಂತ್ಯಕ್ರಿಯೆ ನೆರವೇರಿತು.

ತೆಲಂಗಾಣದ ಹೈದರಾಬಾದ್‌ನವರಾದ ಹಕೀಂ ಅವರು ಕೆಲ ವರ್ಷಗಳಿಂದ ಕಲಬುರ್ಗಿಯಲ್ಲಿ ನೆಲೆಸಿದ್ದರು. ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಜೊತೆ ನಿಕಟ ಸಂಪರ್ಕ ಹೊಂದಿದ್ದ ಅವರು ನಗರದ ಹಲವು ಯುವ ಫುಟ್‌ಬಾಲ್ ಆಟಗಾರರಿಗೆ ತರಬೇತಿ ನೀಡಿದ್ದರು. ಹಕೀಂ ಅವರಿಗೆ 2017ರಲ್ಲಿ ಧ್ಯಾನ್ ಚಂದ್ ಪುರಸ್ಕಾರ ನೀಡಲಾಗಿತ್ತು.

ಸಯ್ಯದ್ ಶಾಹೀದ್ ಹಕೀಂ

1982ರ ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಿದ್ದ ಭಾರತ ತಂಡಕ್ಕೆ ಸಹಾಯಕ ಕೋಚ್ ಆಗಿದ್ದರು. ದಿವಂಗತ ಪಿ.ಕೆ. ಬ್ಯಾನರ್ಜಿ ಆಗ ಕೋಚ್ ಆಗಿದ್ದರು.

ಮರ್ಡೇಕಾ ಫುಟ್‌ಬಾಲ್ ಟೂರ್ನಿಯಲ್ಲಿ ಆಡಿದ್ದ ತಂಡಕ್ಕೆ ಅವರು ಪೂರ್ಣಪ್ರಮಾಣದ ತರಬೇತುದಾರರಾಗಿದ್ದರು.

1988ರಲ್ಲಿ ದೋಹಾದಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯಲ್ಲಿ ಅಂತರರಾಷ್ಟ್ರೀಯ ರೆಫರಿಯಾಗಿ ನೇಮಕಗೊಂಡಿದ್ದರು.

ಬಾಲ್ಯದ ದಿನಗಳಲ್ಲಿ ಹೈದರಾಬಾದ್‌ನ ಸಿಟಿ ಕಾಲೇಜ್ ಓಲ್ಡ್ ಬಾಯ್ಸ್ ಕಪ್ ಹಾಗೂ ಭಾರತೀಯ ವಾಯುಸೇನೆಯ ತಂಡಗಳ ಕ್ಲಬ್‌ಗಳಲ್ಲಿ ಆಟವಾಡಿದ್ದರು.

ತಂದೆಯೂ ಕೋಚ್: ಆಟದ ದಿನಗಳಲ್ಲಿ ಅವರು ಮಿಡ್‌ಫೀಲ್ಡರ್ ಸ್ಥಾನದಲ್ಲಿ ಆಡುತ್ತಿದ್ದರು. ಅವರನ್ನು ಕಾಡುತ್ತಿದ್ದ ಕೊರಗು ಎಂದರೆ, 1960ರ ಒಲಿಂಪಿಕ್ಸ್‌ನಲ್ಲಿ ತಂಡದಲ್ಲಿದ್ದರೂ ಕಣಕ್ಕಿಳಿಯುವ ಅವಕಾಶ ಸಿಗದಿದ್ದುದು. ಕಾಕತಾಳೀಯ ಎಂದರೆ ಆಗ ತಂಡದ ತರಬೇತುದಾರರಾಗಿದ್ದು, ಬೇರಾರೂ ಅಲ್ಲ, ಅವರ ತಂದೆ ಹಾಗೂ ಒಂದು ಕಾಲದ ಖ್ಯಾತ ಆಟಗಾರ ಸಯ್ಯದ್ ಅಬ್ದುಲ್ ರಹೀಂ.

ಪೆಟ್ರೋಲ್, ಡೀಸೆಲ್ ದರ 20 ಪೈಸೆ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ 20 ಪೈಸೆಯಷ್ಟು ಕಡಿಮೆ ಮಾಡಿವೆ.

ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 101.64 ಮತ್ತು ಡೀಸೆಲ್ ದರ ಲೀಟರಿಗೆ ₹ 89.07ಕ್ಕೆ ತಲುಪಿದೆ. ಬಿಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 105.19 ಮತ್ತು ಡೀಸೆಲ್ ದರ ₹ 94.55ರಷ್ಟಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಮೇ ತಿಂಗಳ ನಂತರದ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿರುವುದರಿಂದ ಇಂಧನ ದರದಲ್ಲಿ ಇಳಿಕೆ ಮಾಡಲಾಗಿದೆ. ಆಗಸ್ಟ್ 18ರಿಂದ ಇಲ್ಲಿಯವರೆಗೆ ಒಟ್ಟು ನಾಲ್ಕು ಬಾರಿ ಡೀಸೆಲ್ ದರ ಕಡಿತ ಮಾಡಲಾಗಿದೆ. ಆದರೆ, ಈ ಅವಧಿಯಲ್ಲಿ ಒಂದು ಬಾರಿ ಮಾತ್ರ ಪೆಟ್ರೋಲ್ ದರ ಇಳಿಕೆ ಆಗಿದೆ.

ಮೇ 4ರಿಂದ ಜುಲೈ 17ರವರೆಗಿನ ಅವಧಿಯಲ್ಲಿ ಪೆಟ್ರೋಲ್ ದರವನ್ನು ಲೀಟರಿಗೆ ₹ 11.44ರಷ್ಟು ಮತ್ತು ಡೀಸೆಲ್ ದರ ಲೀಟರಿಗೆ ₹ 9.14ರಷ್ಟು ಏರಿಕೆ ಮಾಡಲಾಗಿತ್ತು.

ಶವೋಮಿ: ಹಣಕಾಸು ಸೇವೆ

ನವದೆಹಲಿ (ಪಿಟಿಐ): ಶವೋಮಿ ಕಂಪನಿಯು ಭಾರತದಲ್ಲಿ ಸಾಲ, ಪಾವತಿ ಸೇವೆ ಹಾಗೂ ವಿಮಾ ಸೇವೆಗಳನ್ನು ಗ್ರಾಹಕರಿಗೆ ತಲುಪಿಸುವ ಯೋಜನೆ ಹೊಂದಿದೆ ಎಂದು ಕಂಪನಿಯ ಭಾರತದ ಮುಖ್ಯಸ್ಥ ಮನು ಜೈನ್ ಹೇಳಿದ್ದಾರೆ. ಕಂಪನಿಯು ಭಾರತದಲ್ಲಿ ಚಿನ್ನದ ಸಾಲ, ಕ್ರೆಡಿಟ್ ಕಾರ್ಡ್ ಮತ್ತು ವಿಮಾ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲಿದೆ.

ಎಕ್ಸಿಸ್ ಬ್ಯಾಂಕ್, ಐಡಿಎಫ್‌ಸಿ ಬ್ಯಾಂಕ್, ಆದಿತ್ಯ ಬಿರ್ಲಾ ಫೈನಾನ್ಸ್, ಮನಿವ್ಯೂನಂತಹ ಕಂಪನಿಗಳ ಜೊತೆ ಸೇರಿ ಹಣಕಾಸಿನ ಸೇವೆಗಳನ್ನು ಶವೋಮಿ ಒದಗಿಸಲಿದೆ. ₹ 1 ಲಕ್ಷದವರೆಗಿನ ವೈಯಕ್ತಿಕ ಸಾಲ ಪಡೆಯಲು ನೆರವಾಗುವ ‘ಮಿ ಕ್ರೆಡಿಟ್’ ಸೇವೆಗೆ ಭಾರಿ ಸ್ಪಂದನ ದೊರೆತಿದ್ದು, ಒಂದು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಲ ಒದಗಿಸಲಾಗಿದೆ ಎಂದು ಜೈನ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ವಲಯದ ಉದ್ದಿಮೆಗಳಿಗೆ ಕೂಡ ಸಾಲ ಒದಗಿಸಲು ನೆರವಾಗುವ ಉದ್ದೇಶ ಹೊಂದಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹267-462
ದ್ವಿತಳಿ (ಬಿ.ವಿ)
₹289-521

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಎಂಜಿ ಮೋಟರ್: ₹ 2,500 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಎಂಜಿ ಮೋಟರ್ ಇಂಡಿಯಾ ಕಂಪನಿಯು ಗುಜರಾತ್‌ನಲ್ಲಿ ಇರುವ ತನ್ನ ಹಲೋಲ್ ಘಟಕದ ತಯಾರಿಕಾ ಸಾಮರ್ಥ್ಯ ಹೆಚ್ಚಿಸಲು 2022ರ ಅಂತ್ಯದೊಳಗೆ ₹ 2,500 ಕೋಟಿ ಹೂಡಿಕೆ ಮಾಡಲಿದೆ ಎಂದು ಕಂಪನಿಯ ಭಾರತದ ನಿರ್ದೇಶಕ ರಾಜೀವ್ ಛಾಬಾ ತಿಳಿಸಿದ್ದಾರೆ.

‘ಈಗಾಗಲೇ ₹ 3 ಸಾವಿರ ಕೋಟಿ ಹೂಡಿಕೆ ಮಾಡಲಾಗಿದೆ. ಮುಂದಿನ ವರ್ಷದ ಅಂತ್ಯದೊಳಗೆ ₹2,500 ಕೋಟಿ ಹೂಡಿಕೆ ಮಾಡಲಿದ್ದೇವೆ. ಒಟ್ಟಾರೆ ಹೂಡಿಕೆಯು ₹ 5,500 ಕೋಟಿಗಳಷ್ಟಾಗಲಿದೆ’ ಎಂದು ಅವರು ಹೇಳಿದ್ದಾರೆ. ದೀಪಾವಳಿಗೆ ಮಾರುಕಟ್ಟೆಗೆ ಬರಲಿರುವ ಮಧ್ಯಮ ಗಾತ್ರದ ಎಸ್‌ಯುವಿ ಆಸ್ಟರ್ ಸೇರಿದಂತೆ ತನ್ನ ಹೊಸ ಮಾದರಿಗಳ ಬೇಡಿಕೆಗಳನ್ನು ಈಡೇರಿಸಲು ಈ ಹೂಡಿಕೆ ಮಾಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಕಚ್ಚಾ ಸರಕುಗಳ ಪೂರೈಕೆಯ ಆಧಾರದ ಮೇಲೆ ಮುಂದಿನ ವರ್ಷದ ಮೊದಲ ತ್ರೈಮಾಸಿಕದಲ್ಲಿ ಪ್ರತಿ ತಿಂಗಳಿಗೆ 7 ಸಾವಿರ ವಾಹನ ತಯಾರಿಸುವ ನಿರೀಕ್ಷೆ ಇದೆ. ಸದ್ಯ ತಿಂಗಳಿಗೆ 4 ಸಾವಿರದಿಂದ 4,500 ವಾಹನಗಳನ್ನಷ್ಟೇ ತಯಾರಿಸಲಾಗುತ್ತಿದೆ ಎಂದಿದ್ದಾರೆ.

ಸೆಮಿಕಂಡಕ್ಟರ್ ಕೊರತೆಯು ಉದ್ಯಮದ ಪರಿಸ್ಥಿತಿಯನ್ನು ಹದಗೆಡಿಸುತ್ತಿದ್ದು, ಈ ಸಮಸ್ಯೆಯು ಕನಿಷ್ಠ ಇನ್ನೂ ಆರು ತಿಂಗಳು ಮುಂದುವರಿಯುವ ಸಾಧ್ಯತೆ ಇದೆ.

ಇಂತಹ ಸಂದರ್ಭದಲ್ಲಿಯೂ ಈ ವರ್ಷದಲ್ಲಿ ವಾಹನ ಮಾರಾಟವು ಶೇಕಡ 100ರವರೆಗೆ ಬೆಳವಣಿಗೆ ಕಾಣುವ ನಿರೀಕ್ಷೆಯನ್ನು ಕಂಪನಿ ಇಟ್ಟುಕೊಂಡಿದೆ.

ಎಂ.ಎಫ್: ಹೂಡಿಕೆಗೆ ಯಾವ ಪ್ಲ್ಯಾನ್ ಒಳ್ಳೆಯದು?

ಹಣಕಾಸು ಸಾಕ್ಷರತೆ
ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಪ್ರಮುಖವಾಗಿ ಎರಡು ಆಯ್ಕೆಗಳು ನಿಮ್ಮ ಮುಂದೆ ಇರುತ್ತವೆ. ಒಂದನೆಯದ್ದು ಡೈರೆಕ್ಟ್ ಮ್ಯೂಚುವಲ್ ಫಂಡ್; ಎರಡನೆಯದ್ದು ರೆಗ್ಯೂಲರ್ ಮ್ಯೂಚುವಲ್ ಫಂಡ್.

ರೆಗ್ಯೂಲರ್ ಫಂಡ್‌ಗಳಿಗೆ ಹೋಲಿಕೆ ಮಾಡಿದರೆ ಡೈರೆಕ್ಟ್ ಮ್ಯೂಚುವಲ್ ಫಂಡ್ ಶುಲ್ಕಗಳು ಅಗ್ಗ. ಯಾಕೆ ಹೀಗೆ? ಈ ಎರಡು ಫಂಡ್‌ಗಳ ಪೈಕಿ ನಿಮಗೆ ಸರಿಹೊಂದುವ ಫಂಡ್ ಯಾವುದು ಎನ್ನುವುದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡೋಣ.

ಡೈರೆಕ್ಟ್ ಮ್ಯೂಚುವಲ್ ಫಂಡ್: ಮಧ್ಯವರ್ತಿಯ (ಏಜೆಂಟ್) ಸಹಾಯವಿಲ್ಲದೆ, ಆಸ್ತಿ ನಿರ್ವಹಣಾ (ಅಸೆಟ್ ಮ್ಯಾನೇಜ್ಮೆಂಟ್) ಕಂಪನಿಗಳ ಮೂಲಕ ನೇರವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರು ಡೈರೆಕ್ಟ್ ಮ್ಯೂಚುವಲ್ ಫಂಡ್ ಮೂಲಕ ಹಣ ತೊಡಗಿಸುತ್ತಾರೆ. ಮಧ್ಯವರ್ತಿಯ ಕಮಿಷನ್ ಇಲ್ಲದ ಕಾರಣ ಈ ರೀತಿಯ ಫಂಡ್‌ಗಳಲ್ಲಿ ವೆಚ್ಚ ಅನುಪಾತ (Expense Ratio) ಶುಲ್ಕ ಕಡಿಮೆ. ಜಿರೋಧಾ, ಗ್ರೋ, ಪೇಟಿಎಂ ಮನಿ ಸೇರಿ ಹಲವು ಆ್ಯಪ್‌ಗಳು ಡೈರೆಕ್ಟ್ ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆಗೆ ಅವಕಾಶ ಕಲ್ಪಿಸಿವೆ.

ರೆಗ್ಯೂಲರ್ ಪ್ಲಾನ್: ಮಧ್ಯವರ್ತಿಯ ಸಹಾಯದಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ, ರೆಗ್ಯೂಲರ್ ಮ್ಯೂಚುವಲ್ ಫಂಡ್‌ಗಳನ್ನು ಸೂಚಿಸುವುದಿದೆ. ಈ ಬಗೆಯಲ್ಲಿ ಹೂಡಿಕೆ ಮಾಡುವಾಗ, ಹಣಕಾಸು ಸಲಹೆಗಾರರು ಅಥವಾ ಬ್ಯಾಂಕ್‌ಗಳ ರಿಲೇಷನ್‌ಶಿಪ್ ಮ್ಯಾನೇಜರ್‌ಗಳು ಗ್ರಾಹಕರಿಗೆ ಮ್ಯೂಚುವಲ್ ಫಂಡ್ ಹೂಡಿಕೆ ಸಲಹೆ ನೀಡುತ್ತಾರೆ. ಅದಕ್ಕಾಗಿ ಅವರಿಗೆ ಕಮಿಷನ್ ನೀಡಬೇಕಾಗುತ್ತದೆ. ಈ ಕಾರಣದಿಂದಾಗಿ ರೆಗ್ಯೂಲರ್ ಪ್ಲಾನ್‌ಗಳಲ್ಲಿ ವೆಚ್ಚ ಅನುಪಾತ ಶುಲ್ಕ ಹೆಚ್ಚಿಗೆ ಇರುತ್ತದೆ.

ಡೈರೆಕ್ಟ್ ಪ್ಲಾನ್ ಶುಲ್ಕಕ್ಕೂ ರೆಗ್ಯೂಲರ್ ಪ್ಲಾನ್ ಶುಲ್ಕಕ್ಕೂ ಅಜಗಜಾಂತರ ಇರುತ್ತದೆ! ಎಕ್ಸಿಸ್ ಬ್ಲೂಚಿಪ್ ಡೈರೆಕ್ಟ್ ಪ್ಲಾನ್‌ನ ವೆಚ್ಚ ಅನುಪಾತ ಶೇಕಡ 0.49ರಷ್ಟು. ಆದರೆ ಇದೇ ಫಂಡ್‌ನ ರೆಗ್ಯೂಲರ್ ಪ್ಲಾನ್‌ನ ವೆಚ್ಚ ಅನುಪಾತ ಶೇ 1.76ರಷ್ಟು. ಅಂದರೆ, ರೆಗ್ಯೂಲರ್ ಮ್ಯೂಚುವಲ್ ಫಂಡ್‌ನ ವೆಚ್ಚ ಅನುಪಾತ ಶೇ 1.25ರಷ್ಟು ಜಾಸ್ತಿ. ವೆಚ್ಚ ಅನುಪಾತ ಹೆಚ್ಚಾದಂತೆ ನಿಮ್ಮ ಉಳಿತಾಯದ ಮೊತ್ತ ಕಡಿಮೆಯಾಗುತ್ತದೆ. ಪರೋಕ್ಷವಾಗಿ ಹೂಡಿಕೆ ಮೇಲಿನ ಗಳಿಕೆ ಮೊತ್ತ (ROI) ಕೂಡ ಕಡಿಮೆಯಾಗುತ್ತದೆ.

ಉದಾಹರಣೆ: ನಾನು ಇವತ್ತು ₹ 1 ಲಕ್ಷ ಹೂಡಿಕೆ ಮಾಡುತ್ತೇನೆ. ಮುಂದಿನ 20 ವರ್ಷ ನಾನು ಆ ಹೂಡಿಕೆಯನ್ನು ಹಿಂತೆಗೆಯುವುದಿಲ್ಲ, ಚಕ್ರಬಡ್ಡಿಯ ಲಾಭವೂ ಸಿಗುತ್ತದೆ. 20 ವರ್ಷಗಳ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (CAGR) ಶೇ 15ರಷ್ಟು ಎಂದುಕೊಳ್ಳಿ. ಈ ಲೆಕ್ಕಾಚಾರದಂತೆ ವೆಚ್ಚ ಅನುಪಾತದಲ್ಲಿ ಶೇ 1ರಷ್ಟು ಕಡಿಮೆಯಾದರೂ ನನಗೆ ಅಂದಾಜು ₹ 2,41,000 ಉಳಿತಾಯವಾಗುತ್ತದೆ. ಬರೀ ₹ 1 ಲಕ್ಷ ಹೂಡಿಕೆ ಮಾಡಿಯೂ ವೆಚ್ಚ ಅನುಪಾತ ಕಡಿಮೆಯಾಗಿ ನನಗೆ ಇಷ್ಟು ದೊಡ್ಡ ಮೊತ್ತ ಸಿಗುತ್ತದೆ ಎಂದರೆ ಡೈರೆಕ್ಟ್ ಮ್ಯೂಚುಯಲ್ ಫಂಡ್ ಬಗ್ಗೆ ಆಲೋಚನೆ ಮಾಡುವುದು ಒಳಿತಲ್ಲವೇ?

ಏನಿದು ವೆಚ್ಚ ಅನುಪಾತ (Expense Ratio)?: ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ ಫಂಡ್ ಹೌಸ್‌ಗಳು ವಾರ್ಷಿಕ ಶುಲ್ಕ ಪಡೆಯುತ್ತವೆ. ಈ ಶುಲ್ಕವನ್ನು ಮ್ಯೂಚುಯಲ್ ಫಂಡ್ ಪರಿಭಾಷೆಯಲ್ಲಿ ವೆಚ್ಚ ಅನುಪಾತ (Expense Ratio) ಎಂದು ಕರೆಯಲಾಗುತ್ತದೆ. ಎಲ್ಲಾ ರೀತಿಯ ನಿರ್ವಹಣಾ ಶುಲ್ಕವನ್ನೂ ಇದು ಒಳಗೊಂಡಿರುತ್ತದೆ. ಉದಾಹರಣೆಗೆ, ಒಂದು ಮ್ಯೂಚುವಲ್ ಫಂಡ್‌ನ ವೆಚ್ಚ ಅನುಪಾತ ಶೇ 2ರಷ್ಟಿದ್ದರೆ ನೀವು ಶೇ 0.005ರಷ್ಟು ಶುಲ್ಕ ಕಟ್ಟಬೇಕಾಗುತ್ತದೆ. (ಅಂದರೆ ₹ 1 ಸಾವಿರ ಹೂಡಿಕೆಗೆ 5 ಪೈಸೆ ಶುಲ್ಕ.) ವೆಚ್ಚ ಅನುಪಾತ ಎಷ್ಟು ಕಡಿಮೆ ಇರುತ್ತದೋ ಹೂಡಿಕೆದಾರನಿಗೆ ಅಷ್ಟು ಲಾಭ. ಹಾಗಾಗಿ ಮ್ಯೂಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ಬಹಳ ಮುಖ್ಯ.

ಗಮನಿಸಿ: ಮ್ಯೂಚುವಲ್ ಫಂಡ್‌ಗಳ ಬಗ್ಗೆ ತಮಗೆ ಏನೇನೂ ತಿಳಿದಿಲ್ಲ, ಆದರೆ ಹೂಡಿಕೆ ಮಾಡಬೇಕು ಎನ್ನುವವರು ರೆಗ್ಯೂಲರ್ ಮ್ಯೂಚುವಲ್ ಫಂಡ್ ಪರಿಗಣಿಸಬಹುದು. ಮ್ಯೂಚುವಲ್ ಫಂಡ್‌ಗಳ ಬಗ್ಗೆ ಒಂದಿಷ್ಟು ಗೊತ್ತಿದೆ, ಕಲಿತು ಮುಂದುವರಿಯಬಹುದು ಎನ್ನುವವರು ಡೆರೆಕ್ಟ್ ಮ್ಯೂಚುವಲ್ ಫಂಡ್ ಹೂಡಿಕೆ ಆಯ್ಕೆ ಮಾಡಿಕೊಳ್ಳಬಹುದು. ಲಾಭದ ದೃಷ್ಟಿಯಿಂದ ನೋಡುವುದಾದರೆ, ಡೈರೆಕ್ಟ್ ಪ್ಲಾನ್ ಉತ್ತಮ.

(ಲೇಖಕ ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಲಾಭ ಗಳಿಕೆಗೆ ನಲುಗಿದ ಷೇರುಪೇಟೆ

ಸತತ ಎರಡು ವಾರಗಳಿಂದ ಏರುಗತಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಇಳಿಕೆಯ ಹಾದಿಗೆ ಮರಳಿವೆ. ಜಾಗತಿಕ ವಿದ್ಯಮಾನಗಳು, ಲಾಭ ಗಳಿಕೆಯ ಉದ್ದೇಶ, ಕೋವಿಡ್ ಪ್ರಕರಣಗಳ ಹೆಚ್ಚಳ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ. ಆಗಸ್ಟ್ 20ಕ್ಕೆ ಕೊನೆಗೊಂಡ ವಾರದಲ್ಲಿ 55,329 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ಶೇಕಡ 0.19ರಷ್ಟು ಕುಸಿದಿದೆ. 16,450 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 0.47ರಷ್ಟು ಇಳಿಕೆ ಕಂಡಿದೆ. ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.9ರಷ್ಟು ಇಳಿದಿದ್ದರೆ, ಸ್ಮಾಲ್ ಕ್ಯಾಪ್ ಶೇ 3.6ರಷ್ಟು ತಗ್ಗಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 8ರಷ್ಟು ಕುಸಿತ ದಾಖಲಿಸಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್, ಮಾಧ್ಯಮ ವಲಯ, ರಿಯಲ್ ಎಸ್ಟೇಟ್ ವಲಯಗಳು ತಲಾ ಶೇ 5ರಷ್ಟು ಇಳಿದಿವೆ. ಐ.ಟಿ. ವಲಯ ಶೇ 2ರಷ್ಟು ಹೆಚ್ಚಳ ಕಂಡರೆ ಎಫ್‌ಎಂಸಿಜಿ ವಲಯ ಶೇ 4.4ರಷ್ಟು ಏರಿಕೆಯಾಗಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,314.40 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 162.45 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಹಿಂದೂಸ್ಥಾನ್ ಯುನಿಲಿವರ್ ಶೇ 9ರಷ್ಟು, ಬ್ರಿಟಾನಿಯಾ ಶೇ 9ರಷ್ಟು, ಬಜಾಜ್ ಫೈನಾನ್ಸ್ ಶೇ 8ರಷ್ಟು, ನೆಸ್ಲೆ ಶೇ 7ರಷ್ಟು ಗಳಿಕೆ ಕಂಡಿವೆ. ಹಿಂಡಾಲ್ಕೊ ಶೇ 9ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 8.5ರಷ್ಟು, ಟಾಟಾ ಮೋಟರ್ಸ್ ಶೇ 8ರಷ್ಟು, ಟಾಟಾ ಸ್ಟೀಲ್ ಶೇ 6ರಷ್ಟು ಕುಸಿತ ದಾಖಲಿಸಿವೆ.

ಮುನ್ನೋಟ: ಷೇರುಪೇಟೆಯಲ್ಲಿ ಸದ್ಯದ ಸ್ಥಿತಿಯಲ್ಲಿ ಲಾಭ ಗಳಿಕೆಯ ಉದ್ದೇಶ (ಪ್ರಾಫಿಟ್ ಬುಕ್ಕಿಂಗ್) ಹೆಚ್ಚಾಗಿ ಕಂಡುಬರುತ್ತಿದೆ. ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಷೇರುಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕುಸಿತ ಕಾಣುತ್ತಿದೆ. ಹಲವು ಹೂಡಿಕೆದಾರರು ಈಗಿನ ಸ್ಥಿತಿಯಲ್ಲಿ ಮಾಹಿತಿ ತಂತ್ರಜ್ಞಾನ ವಲಯದ ಷೇರುಗಳತ್ತ ಮುಖ ಮಾಡಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಸೂಚ್ಯಂಕಗಳು ಏರಿಳಿತದ ಹಾದಿಯಲ್ಲೇ ಮುಂದುವರಿಯುವುದರಿಂದ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಷೇರುಗಳಲ್ಲಿ ಮಾತ್ರ ಹೂಡಿಕೆ ಪರಿಗಣಿಸಬಹುದು. ಈ ವಾರ ಜಿಲೆಟ್, ಐಟಿಡಿಸಿ, ಡಿಲಿಜೆಂಟ್ ಧಾರ್ ಶುಗರ್ ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.